

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 13 ಶುಕ್ರವಾರ 2024

ಸಂಪುಟ: 45 | ಸಂಚಿಕೆ: 236 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಏ ನಿಂಗೆ ಅಧಿಕಾರ ಬೇಕಿದ್ದರೆ ಒದ್ದು ಕಿತ್ತುಕೊಳ್ಳಬೇಕು ಎಂದು ನಮ್ಮ ಗುರುಗಳಾದ ಜ್ಯೋತಿಷಿ ದ್ವಾರಕನಾಥರು ಹೇಳಿದ್ದರು: ಡಿಕೆಶಿ

ಯಾವಾಗ ಒದ್ದು ಮುಖ್ಯಮಂತ್ರಿ ಹುದ್ದೆ ಕಿತ್ತುಕೊಳ್ತೀರಾ...!

- ಕೃಷ್ಣ ಸಂಪುಟದಲ್ಲಿ ಸಚಿವ ಸ್ಥಾನ ಪಡೆದುಕೊಂಡ ಪರಿಯ ಬಗ್ಗೆ ವಿವರಿಸಿದ ಡಿಕೆಶಿಗೆ ಕಿಚಾಯಿಸಿದ ವಿಪಕ್ಷ ನಾಯಕ ಆರ್.ಅಶೋಕ್
- ಅಶೋಕರ ಪ್ರಶ್ನೆಗೆ ಇಲ್ಲಿ ಉತ್ತರಿಸುವುದು ಬೇಡ; ನಿಮ್ಮ ಕಚೇರಿಯಲ್ಲಿ ಮಾತನಾಡಿ: ಚರ್ಚೆಗೆ ಸ್ಪೀಕರ್ ಯು.ಟಿ.ಖಾದರ್ ಬ್ರೇಕ್




ಬೆಳಗಾವಿ, ಸುವರ್ಣ ವಿಧಾನಸೌಧ, ಡಿ.12(ಕೆಎಂಶಿ)–ಅಧಿಕಾರವನ್ನು ಒದ್ದು ಕಿತ್ಕೊಬೇಕು ಎಂದು ಜ್ಯೋತಿಷಿ ನೀಡಿದ ಸಲಹೆಯನ್ನು ಡಿಸಿಎಂ ಡಿ.ಕೆ.ಶಿವ ಕುಮಾರ್ ಸದನದಲ್ಲಿ ಪ್ರಸ್ತಾಪಿಸಿದಾಗ, ಜನವರಿ ನಂತರ ನಿಮ್ಮ ಗ್ರಹಗತಿ ಸರಿಯಿಲ್ಲ. ಈಗಲೇ ಒದ್ದು ಮುಖ್ಯಮಂತ್ರಿ ಸ್ಥಾನ ಕಿತ್ತುಕೊಳ್ಳಿ! ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ್, ಡಿ.ಕೆ.ಶಿವಕುಮಾರ್ ಅವರಿಗೆ ವಿಧಾನಸಭೆಯಲ್ಲೇ ಕಿಚಾಯಿಸಿದ ಪ್ರಸಂಗ ಇಂದು ಜರುಗಿತು.

ಬೆಳಗಾವಿ ವಿಧಾನಸಭೆ ಅಧಿವೇಶನದಲ್ಲಿ ಗುರುವಾರ ಎಸ್.ಎಂ. ಕೃಷ್ಣ ಅವರ ನಿಧನದ ಹಿನ್ನೆಲೆಯಲ್ಲಿ ಸಂತಾಪ ಸೂಚಕ ವಿಷಯದಲ್ಲಿ ಚರ್ಚೆ ನಡೆಯುವಾಗ ಈ ಸ್ವಾರಸ್ಯಕರ ಚರ್ಚೆ ನಡೆದಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಆ ವೇಳೆ ಉಪಸ್ಥಿತರಿರಲಿಲ್ಲ. ಡಿ.ಕೆ.ಶಿವಕುಮಾರ್ ಮಾತನಾಡಿ, ಅಂದು ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗ ಕೃಷ್ಣ ಕೆಪಿಸಿಸಿ ಅಧ್ಯಕ್ಷರಾಗಿದ್ದರು. ಪಾಂಚಜನ್ಯ ಮೊಳಗಿಸಿದ್ದರು, ಪರಿಣಾಮ ಪಕ್ಷ ಅಧಿಕಾರಕ್ಕೆ ಬಂತು. ಎಸ್.ಎಂ.ಕೃಷ್ಣ ಸರಕಾರ ರಚನೆಯಾದಾಗ ಯಾರು ಮಂತ್ರಿಗಳಾಗಬೇಕು ಎಂದು ಪಟ್ಟಿ ಸಿದ್ಧಪಡಿಸಿದವನೇ ನಾನು. ಆದರೆ ಪಟ್ಟಿ ಹೈಕಮಾಂಡ್ ಬಳಿ ಹೋದ ಮೇಲೆ ನನ್ನ ಹಾಗೂ ಜಯಚಂದ್ರ ಹೆಸರೇ ಪಟ್ಟಿಯಲ್ಲಿರಲಿಲ್ಲ. ಆಗ ನಾನು ಜ್ಯೋತಿಷಿ ದ್ವಾರಕನಾಥ್‌ಗೆ ಕರೆ ಮಾಡಿದ್ದೆ. 'ಏ ನಿಂಗೆ ಅಧಿಕಾರ ಬೇಕಿದ್ದರೆ ಒದ್ದು ಕಿತ್ತುಕೊಳ್ಳಬೇಕು' ಎಂದಿದ್ದರು. ಗುರುಗಳ ಮಾತಿನಂತೆ ಜಯಚಂದ್ರ ಅವರೊಂದಿಗೆ ತಡರಾತ್ರಿ ಕೃಷ್ಣ ಅವರ ಮನೆಗೆ ಹೋದ ನಾನು, ಬಾಗಿಲು ಒದ್ದು ಒಳಗೆ ಹೋಗಿದ್ದೆ. ನನ್ನ ಜೊತೆಗಿದ್ದ ಜಯಚಂದ್ರ ಗಢಗಢ ಅಂತಾ ನಡಗುತ್ತಿದ್ದ. ಸಾಹೇಬರೇ, ನಿಮ್ಮನ್ನು ರಾಜ್ಯಸಭಾ ಸದಸ್ಯರನ್ನಾಗಿ, ಕೆಪಿಸಿಸಿ ಅಧ್ಯಕ್ಷರನ್ನಾಗಿಸಲು ಹಗಲಿಗೆ–ಹಗಲು ಕೊಟ್ಟು ದುಡಿದೆ, ಸರ್ಕಾರ ರಚನೆಯಲ್ಲಿ ನನಗೆ ಅವಕಾಶ ನೀಡಲಿಲ್ಲವೆಂದರೆ ಜನ ಏನೆಂದುಕೊಳ್ಳುತ್ತಾರೆ. ನಾನೂ ನಿಮ್ಮ ಜೊತೆಯಲ್ಲಿ ಪ್ರಮಾಣವಚನ ಸ್ವೀಕರಿಸಿದರೆ ಸರ್ಕಾರ, ಇಲ್ಲವಾದರೆ ಸರ್ಕಾರ ಇಲ್ಲ ಎಂದು ಸ್ಪಷ್ಟವಾಗಿ ಹೇಳಿದೆ. ಆಗ ಕೃಷ್ಣ ಅವರು, ಏನು ■6ನೇ ಪುಟಕ್ಕೆ





ಒಂದು ರಾಷ್ಟ್ರ, ಒಂದು ಚುನಾವಣೆ: ವಿಧೇಯಕಕ್ಕೆ ಕೇಂದ್ರ ಸಂಪುಟ ಅಸ್ತು



ಮಾಜಿ ರಾಷ್ಟ್ರಪತಿ ರಾಮನಾಥ್ ಕೋವಿಂದ್

ನವದೆಹಲಿ, ಡಿ.12– 'ಒಂದು ದೇಶ, ಒಂದು ಚುನಾವಣೆ' ಮಸೂದೆಗೆ ಕೇಂದ್ರ ಸಚಿವ ಸಂಪುಟ ಗುರುವಾರ ಅನುಮೋದನೆ ನೀಡಿದೆ.



ಇಂದು ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಒಂದು ದೇಶ, ಒಂದು ಚುನಾವಣೆ ಮಸೂದೆಗೆ ಒಪ್ಪಿಗೆ ನೀಡಿದೆ. ಪ್ರಸ್ತುತ ನಡೆಯುತ್ತಿರುವ ಸಂಸತ್ ಚಳಿಗಾಲದ ಅಧಿವೇಶನದಲ್ಲೇ ಕೇಂದ್ರ ಸರ್ಕಾರ ಒಂದು ದೇಶ, ಒಂದು ಚುನಾವಣೆ ಮಸೂದೆಯನ್ನು ಮಂಡಿಸುವ ಸಾಧ್ಯತೆಯಿದೆ. ಲೋಕಸಭೆ ಮತ್ತು ರಾಜ್ಯ ವಿಧಾನ ಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸುವುದು ಇದರ ಉದ್ದೇಶವಾಗಿದೆ ಒಂದು ರಾಷ್ಟ್ರ ಒಂದು ಚುನಾವಣೆ ಕುರಿತು ವರದಿ ಸಲ್ಲಿಸಲು ಕೇಂದ್ರ ಸರ್ಕಾರ ಮಾಜಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿ ರಚಿಸಿತ್ತು. ಲೋಕಸಭೆ, ರಾಜ್ಯ ವಿಧಾನಸಭೆಗಳು ಮತ್ತು ಸ್ಥಳೀಯ ಸಂಸ್ಥೆಗಳಿಗೆ ಹಂತ ಹಂತವಾಗಿ ಏಕಕಾಲಕ್ಕೆ ಚುನಾವಣೆ ನಡೆಸುವಂತೆ ರಾಮನಾಥ್ ಕೋವಿಂದ್ ನೇತೃತ್ವದ ಉನ್ನತ ಮಟ್ಟದ ಸಮಿತಿ ಶಿಫಾರಸು ಮಾಡಿದೆ.

ಏಳು ದೇಶಗಳ ಅಧ್ಯಯನ: ಮಾಜಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ನೇತೃತ್ವದ ಸಮಿತಿಯು 'ಒಂದು ರಾಷ್ಟ್ರ, ಒಂದು ಚುನಾವಣೆ' ಪರಿಕಲ್ಪನೆಯನ್ನು ಕೇಂದ್ರ ಸರ್ಕಾರಕ್ಕೆ ಈ ಶಿಫಾರಸು ಮಾಡುವ ಮೊದಲು ದಕ್ಷಿಣ ಆಫ್ರಿಕಾ, ಸ್ವೀಡನ್, ಬೆಲ್ಜಿಯಂ, ಜರ್ಮನಿ, ಜಪಾನ್, ಇಂಡೋನೇಷ್ಯಾ ಮತ್ತು ಫಿಲಿಪ್ಪೀನ್ಸ್‌ಗಳಲ್ಲಿನ ಚುನಾವಣೆಗಳ ಪ್ರಕ್ರಿಯೆಯನ್ನು ಪರಿಶೀಲಿಸಿದೆ.

ಈ ರಾಷ್ಟ್ರಗಳಲ್ಲಿ ಹೇಗಿದೆ?: ದಕ್ಷಿಣ ಆಫ್ರಿಕಾದಲ್ಲಿ ■6ನೇ ಪುಟಕ್ಕೆ

ಭಾರತದ ಗುಕೇಶ್ ವಿಶ್ವ ಚೆಸ್ ಸಾಮ್ರಾಟ

ಬರೀ 18 ವರ್ಷದ ಈ ಸಾಹಸಿಗೆ ಒಲಿದ ಚೆಸ್ ಕಿರೀಟ



ಸಿಂಗಾಪುರದ ರೆಸಾರ್ಟ್ಸ್ ವರ್ಲ್ಡ್ ಸೆಂಟೋಸಾದಲ್ಲಿರುವ ಈಕ್ವೇರಿಯಸ್ ಹೋಟೆಲ್‌ನಲ್ಲಿ ನಡೆದ 2024ರ ವಿಶ್ವ ಚೆಸ್ ಚಾಂಪಿಯನ್‌ಶಿಪ್ ಕೊನೆಯ ಹಾಗೂ 14ನೇ ಗೇಮ್‌ನಲ್ಲಿ ಗೆಲುವು ಸಾಧಿಸುವ ಮೂಲಕ ಭಾರತದ 18 ವರ್ಷದ ಗ್ರ್ಯಾಂಡ್‌ಮಾಸ್ಟರ್ ಡಿ.ಗುಕೇಶ್ ವಿಶ್ವ ಚೆಸ್ ಚಾಂಪಿಯನ್‌ಶಿಪ್‌ನಲ್ಲಿ ಇತಿಹಾಸ ಸೃಷ್ಟಿಸಿದ್ದಾರೆ.

ಈ ರೋಚಕ ಹಣಾಹಣಿಯಲ್ಲಿ ಕಳೆದ ಬಾರಿಯ ■2ನೇ ಪುಟಕ್ಕೆ

ಕೆಆರ್‌ಎಸ್ ಪೊಲೀಸ್ ಠಾಣೆ ಬಳಿಯೇ ರೌಡಿಗಳ ಅಟ್ಟಹಾಸ; ಬೇಕರಿ ಮಾಲೀಕನ ಕಗ್ಗೊಲೆ



ಶ್ರೀರಂಗಪಟ್ಟಣ, ಡಿ.12(ವಿನಯ್)– ಹಾಡಹಗಲೇ, ಪೊಲೀಸ್ ಠಾಣೆಗೆ ಕೂಗಳತೆ ದೂರದಲ್ಲೇ ದುಷ್ಕರ್ಮಿಗಳ ಗುಂಪು ಬೇಕರಿ ಮಾಲೀಕನನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿರುವ ಘಟನೆ ಕೆಆರ್‌ಎಸ್‌ನಲ್ಲಿ ಗುರುವಾರ ಸಂಜೆ ನಡೆದಿದೆ.

ಮೂಲತಃ ಕೆ.ಆರ್.ನಗರ ತಾಲೂಕು ಬಸವರಾಜಪುರ ಗ್ರಾಮದವನಾಗಿದ್ದು, ಹಲವಾರು ವರ್ಷದಿಂದ ಕೆಆರ್‌ಎಸ್‌ನ ಸಂತೆ ಮೈದಾನದ ಬಳಿ ಬೇಕರಿ ನಡೆಸುತ್ತಿರುವ ಚೇತನ್ (40) ಹತ್ಯೆಗೀಡಾದವನಾಗಿದ್ದಾನೆ. ಇಂದು ಸಂಜೆ ಬೈಕ್‌ಗಳಲ್ಲಿ ಬಂದ ಮೂರ್‍ನಾಲ್ಕು ಮಂದಿ ದುಷ್ಕರ್ಮಿಗಳು ಚೇತನ್‌ನ ಬೇಕರಿಯ ವಸ್ತುಗಳನ್ನೆಲ್ಲಾ ರಸ್ತೆಗೆ ಬಿಸಾಡಿ, ದಾಂದಲೆ ನಡೆಸಿದ್ದಾರೆ. ಅದೇ ವೇಳೆಗೆ ಬೇಕರಿ ಬಳಿ ಬಂದ ಚೇತನ್‌ನನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಕ್ಷಣಾರ್ಧದಲ್ಲಿ ಪರಾರಿಯಾಗಿದ್ದಾರೆ. ತೀವ್ರವಾಗಿ ಗಾಯಗೊಂಡು ನರಳುತ್ತಿದ್ದ ಚೇತನ್‌ನನ್ನು ಅಕ್ಕಪಕ್ಕದ ಅಂಗಡಿಯವರು ಹಾಗೂ ಸ್ಥಳೀಯರು ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ಆತ ಮೃತಪಟ್ಟಿದ್ದಾನೆ.

ಕೆಆರ್‌ಎಸ್ ಠಾಣೆಗೆ ಸುಮಾರು 200 ರಿಂದ 300 ಮೀಟರ್ ಅಂತರದಲ್ಲಿರುವ ಹಾಗೂ ಸದಾ ಜನಸಂದಣಿಯಿರುವ ಸ್ಥಳದಲ್ಲಿ ದುಷ್ಕರ್ಮಿಗಳು ನಿರ್ಭಯವಾಗಿ ಬೇಕರಿಯಲ್ಲಿ ದಾಂದಲೆ ಮಾಡಿದ್ದಲ್ಲದೆ, ಮಾಲೀಕನನ್ನು ಕೊಚ್ಚಿ ಕೊಲೆಗೈದಿರುವುದು ಸ್ಥಳೀಯರನ್ನು ಬೆಚ್ಚಿಬೀಳಿಸಿದೆ. ಕೆಆರ್‌ಎಸ್ ಸೇರಿದಂತೆ ಸುತ್ತಮುತ್ತಲ ಗ್ರಾಮಗಳಲ್ಲಿ ರೌಡಿಗಳ ಹಾವಳಿ ಹೆಚ್ಚಾಗಿದ್ದು, ಅದನ್ನು ನಿಯಂತ್ರಿಸುವಲ್ಲಿ ಪೊಲೀಸರು ವಿಫಲರಾಗಿದ್ದಾರೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ಪೊಲೀಸ್ ಅಧಿಕಾರಿಗಳು ರೌಡಿಶೀಟರ್‌ಗಳೊಂದಿಗೆ ಸಭೆ–ಸಮಾರಂಭಗಳಲ್ಲಿ ಭಾಗಿಯಾಗಿ ಫೋಟೋ ■6ನೇ ಪುಟಕ್ಕೆ





ಇಂದು ಹನುಮ ಜಯಂತಿ ಮಹೋತ್ಸವ



ಮೈಸೂರು, ಡಿ. 12–ಮೈಸೂರಿನ ಹೆಬ್ಬಾಳು 1ನೇ ಹಂತದ ಬಸವೇಶ್ವರನಗರ ಮತ್ತು ಭೈರವೇಶ್ವರನಗರದ ಶ್ರೀ ಕ್ಷೇತ್ರ ಅಂಜನಾದ್ರಿ, ಶ್ರೀ ಮಾತಾ ಅಂಜನಾದೇವಿ ಮತ್ತು ಶ್ರೀ ಪ್ರಸನ್ನ ಆಂಜನೇಯಸ್ವಾಮಿ ದೇವಸ್ಥಾನದ ಸಂಯುಕ್ತ ಆಶ್ರಯದಲ್ಲಿ ನಾಳೆ (ಡಿ.13) 32ನೇ ವರ್ಷದ ಹನುಮ ಜಯಂತಿ ಮಹೋತ್ಸವದ ಅಂಗವಾಗಿ ಬೆಳಗ್ಗೆ 8 ಗಂಟೆಗೆ ಶ್ರೀ ಗಣಪತಿ ಪೂಜೆ, ಪವಮಾನ ಹೋಮ, ಪೂರ್ಣಾಹುತಿ, ಮಹಾಮಂಗಳಾರತಿ, ಮಧ್ಯಾಹ್ನ 12ಕ್ಕೆ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ. ಬೆಳಗ್ಗೆ 11ಕ್ಕೆ ಹರಿಕಥಾ ವಿದ್ವಾನ್ ದಿ. ಆರ್.ಗುರುರಾಜುಲುನಾಯ್ಡು ಅವರ ಶಿಷ್ಯರಾದ ಡಾ.ಕು.ವಿ.ಮಾಲಿನಿ ಮತ್ತು ವೃಂದದವರಿಂದ ಸುಗಮ ಸಂಗೀತ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಇಂದು ಹೆಬ್ಬಾಳದಲ್ಲಿ ಹನುಮ ಜಯಂತಿ

ಮೈಸೂರು,ಡಿ.12(ಪಿಎಂ)– ಹೆಬ್ಬಾಳ 1ನೇ ಹಂತದ ಮುಖ್ಯ ರಸ್ತೆಯ 6ನೇ ಕ್ರಾಸ್‌ನಲ್ಲಿ ಕೇಸರಿ ನಂದನ ಗ್ರೂಪ್ಸ್ ವತಿಯಿಂದ ಡಿ.13ರಂದು 6ನೇ ವರ್ಷದ ಹನುಮ ಜಯಂತಿ ಪೂಜಾ ಮಹೋತ್ಸವ ಆಯೋಜಿಸಲಾಗಿದೆ. ಬೆಳಗ್ಗೆ 11ಕ್ಕೆ ಪ್ರಮುಖ ಬೀದಿಗಳಲ್ಲಿ ಖಂಡಾಯ ಹಾಗೂ ಹರಿಗೆ ದೇವರ ಮೆರವಣಿಗೆ ನಡೆಯಲಿದೆ. ಮಧ್ಯಾಹ್ನ 1ಕ್ಕೆ ಅನ್ನಸಂತರ್ಪಣೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ದೇವನೂರ ಮಹಾದೇವರಿಗೆ 'ವೈಕಂ' ಪ್ರಶಸ್ತಿ ಪ್ರದಾನ



ಕೇರಳದ ವೈಕಂನಲ್ಲಿ ನಡೆದ ಸಮಾರಂಭದಲ್ಲಿ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಹಿರಿಯ ಸಾಹಿತಿ ದೇವನೂರ ಮಹದೇವ ಅವರಿಗೆ 'ವೈಕಂ' ಪ್ರಶಸ್ತಿ ಪ್ರಧಾನ ಮಾಡಿದರು. ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್, ದ್ರಾವಿಡರ್ ಕಳಗಂ ಅಧ್ಯಕ್ಷ ಕೆ.ವೀರಮಣಿ ಅವರಿದ್ದರು.

ವೈಕಂ (ಕೇರಳ), ಡಿ.12– ವೈಕಂ ಹೋರಾಟದ ನೆನಪಿನಲ್ಲಿ ತಮಿಳುನಾಡು ಸರ್ಕಾರ ನೀಡುವ 2024ನೇ ಸಾಲಿನ ಚೊಚ್ಚಲ 'ವೈಕಂ' ಪ್ರಶಸ್ತಿಯನ್ನು ಹಿರಿಯ ಸಾಹಿತಿ ದೇವನೂರ ಮಹಾದೇವ ಅವರಿಗೆ ಕೇರಳದ ವೈಕಂನಲ್ಲಿ ನಡೆದ ಕಾರ್ಯಕ್ರಮದಲ್ಲಿ ತಮಿಳು ನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಪ್ರಶಸ್ತಿ ಪ್ರದಾನ ಮಾಡಿದ್ದಾರೆ.

ಕೇರಳದ ವೈಕಂನಲ್ಲಿ 'ವೈಕಂ ಹೋರಾಟ' ನಡೆದು ನೂರು ವರ್ಷಗಳಾಗಿವೆ. ಹೋರಾಟದಲ್ಲಿ ಪೆರಿಯಾರ್ ರಾಮಸ್ವಾಮಿ ಅವರು ಭಾಗಿಯಾಗಿದ್ದರ ಶತಮಾನೋತ್ಸವ ಸಮಾರಂಭ ಮತ್ತು ಪೆರಿಯಾರ್ ಸ್ಮಾರಕ ಉದ್ಘಾಟನಾ ಕಾರ್ಯಕ್ರಮವನ್ನು ಗುರುವಾರ ವೈಕಂನಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್, ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಪಾಲ್ಗೊಂಡಿದ್ದರು. ಇದೇ ಕಾರ್ಯಕ್ರಮದಲ್ಲಿ ತಮಿಳುನಾಡು ಸರ್ಕಾರವು ದೇವನೂರರಿಗೆ ಪ್ರಶಸ್ತಿ ಪ್ರದಾನ ಮಾಡಿದೆ. ಪ್ರಶಸ್ತಿ ಸ್ವೀಕರಿಸಿದ ದೇವನೂರ ಮಹಾದೇವ ಅವರು ತಾವು ಬರೆದಿರುವ 'ಆರ್‌ಎಸ್‌ಎಸ್ ಆಳ ಅಗಲ' ಪುಸ್ತಕದ ಕನ್ನಡ, ಇಂಗ್ಲಿಷ್ ಮತ್ತು ಮಲೆಯಾಳಂ ಅವತರಣಿಕೆಯನ್ನು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರಿಗೆ ಮತ್ತು ಕನ್ನಡ, ಇಂಗ್ಲಿಷ್, ತಮಿಳು ಅವತರಣಿಕೆಯನ್ನು ತಮಿಳುನಾಡು ಸಿಎಂ ಸ್ಟಾಲಿನ್ ಅವರಿಗೆ ನೀಡಿದರು. ವೈಕಂ ಪ್ರಶಸ್ತಿಯು 5 ಲಕ್ಷ ರೂ. ನಗದು ಮತ್ತು ಸ್ವರ್ಣಲೇಪಿತ ಪದಕವನ್ನು ಒಳಗೊಂಡಿದೆ. ಸಮಾಜದಲ್ಲಿ ತುಳಿತಕ್ಕೊಳಗಾದ ವರ್ಗಗಳ ಕಲ್ಯಾಣಕ್ಕಾಗಿ ಶ್ರಮಿಸಿದ ಗಣ್ಯ ವ್ಯಕ್ತಿಗಳು ಅಥವಾ ಸಂಸ್ಥೆಗಳಿಗೆ ವೈಕಂ ಪ್ರಶಸ್ತಿ ನೀಡಲಾಗುವುದು ಎಂದು ತಮಿಳುನಾಡು ಸರ್ಕಾರ ಹೇಳಿದೆ.

ಒಂದನೇ ಪುಟದಿಂದ

ವಿಶ್ವ ಚೆಸ್ ಸಾಮ್ರಾಟ

ಚಾಂಪಿಯನ್ ಚೀನಾದ ಡಿಂಗ್ ಲಿರೆನ್‌ಗೆ ಚೆಕ್ ಮೇಟ್ ನೀಡಿದ ಗುಕೇಶ್, ವಿಶ್ವನಾಥನ್ ಆನಂದ್ ನಂತರ ವಿಶ್ವ ಚೆಸ್ ಚಾಂಪಿಯನ್‌ಶಿಪ್ ಗೆದ್ದ ಎರಡನೇ ಭಾರತೀಯನೆನಿಸಿಕೊಂಡಿದ್ದಾರೆ. ಇದಲ್ಲದೆ ಕೇವಲ 18ನೇ ವಯಸ್ಸಿಗೆ ಚಾಂಪಿಯನ್ ಆಗುವ ಮೂಲಕ ಚೆಸ್ ಇತಿಹಾಸದಲ್ಲಿ ಈ ಸಾಧನೆ ಮಾಡಿದ ಅತ್ಯಂತ ಕಿರಿಯ ಚೆಸ್‌ಪಟು ಎಂಬ ದಾಖಲೆಯನ್ನು ಸೃಷ್ಟಿಸಿದ್ದಾರೆ.

14 ಸುತ್ತುಗಳಲ್ಲೂ ರೋಚಕ ಹಣಾಹಣಿ: 15 ದಿನಗಳ ಕಾಲ ನಡೆದ ಈ ವಿಶ್ವ ಚೆಸ್ ಪಂದ್ಯಾವಳಿಯಲ್ಲಿ ಉಭಯ ಆಟಗಾರರು ಪ್ರಬಲ ಪೈಪೋಟಿ ನೀಡಿದರು. ಹೀಗಾಗಿ ಇದಕ್ಕೂ ಮುನ್ನ ಆಡಿದ 13 ಸುತ್ತುಗಳಲ್ಲಿ ಇಬ್ಬರೂ ತಲಾ 2 ಪಂದ್ಯ ಗೆದ್ದಿದ್ದರೆ, ಉಳಿದ 9 ಪಂದ್ಯಗಳು ಡ್ರಾ ಆಗಿದ್ದವು. ಆದ್ದರಿಂದ ಇಬ್ಬರ ಬಳಿಯೂ ತಲಾ 6.5 ಅಂಕಗಳಿದ್ದವು. ಇಂತಹ ಪರಿಸ್ಥಿತಿ ಯಲ್ಲಿ ಈ ಪಂದ್ಯ ನಿರ್ಣಾಯಕವಾಗಿತ್ತು. ಒಂದು ವೇಳೆ ಈ ಪಂದ್ಯವೂ ಡ್ರಾ ಆಗಿದ್ದರೆ ಇಬ್ಬರೂ ತಲಾ 7 ಅಂಕ ಗಳಿಸಿ ಟೈಬ್ರೇಕರ್ ಮೂಲಕ ನಿರ್ಧಾರ ತೆಗೆದುಕೊಳ್ಳಬೇಕಿತ್ತು. ಆದರೆ ಇದಕ್ಕೆ ಅವಕಾಶ ನೀಡಿದ ಗುಕೇಶ್ ಅಂತಿಮವಾಗಿ 7.5–6.5 ಅಂಕಗಳ ಅಂತರದಿಂದ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡರು.

ಇತಿಹಾಸ ಸೃಷ್ಟಿಸಿದ ಗುಕೇಶ್: ಕೇವಲ 18ನೇ ವಯಸ್ಸಿಗೆ ಈ ಪ್ರಶಸ್ತಿ ಜಯಿಸುವ ಮೂಲಕ ಈ ಸಾಧನೆ ಮಾಡಿದ ಅತ್ಯಂತ ಕಿರಿಯ ಎಂಬ ದಾಖಲೆಯನ್ನು ಗುಕೇಶ್ ನಿರ್ಮಿಸಿದ್ದಾರೆ. ಇವರಿಗೂ ಮುನ್ನ ರಷ್ಯಾದ ಗ್ಯಾರಿ ಕಾಸ್ಪರೋವ್ ಅವರು 1985ರಲ್ಲಿ ಅನಾಟೊಲಿ ಕಾರ್ಪೋವ್ ಅವರನ್ನು ಸೋಲಿಸುವ ಮೂಲಕ ಕೇವಲ 22ನೇ ವಯಸ್ಸಿನಲ್ಲಿ ಈ ಪ್ರಶಸ್ತಿಯನ್ನು ಗೆಲ್ಲುವ ಮೂಲಕ ಈ ಸಾಧನೆ ಮಾಡಿದ ಅತೀ ಕಿರಿಯ ಎನಿಸಿಕೊಂಡಿದ್ದರು. ಆದರೀಗ ಗುಕೇಶ್ 18 ವರ್ಷ, ಎಂಟು ತಿಂಗಳು ಮತ್ತು 14 ದಿನಗಳಲ್ಲಿ ಈ ಸಾಧನೆ ಮಾಡಿ ಚೆನ್ನೈನ ಈ ಸಾಹಸಿ ಹೊಸ ಇತಿಹಾಸ ನಿರ್ಮಿಸಿದ್ದಾರೆ.

ಪ್ರಧಾನಿ, ರಾಷ್ಟ್ರಪತಿ ಅಭಿನಂದನೆ: ಚೆಸ್ ಪಟು ಗುಕೇಶ್‌ಗೆ ಪ್ರಧಾನಿ ನರೇಂದ್ರ ಮೋದಿ, ರಾಷ್ಟ್ರಪತಿ ದ್ರೌಪದಿ ಮುರ್ಮು ಸೇರಿದಂತೆ ಗಣ್ಯರು, ಸೆಲೆಬ್ರೆಟಿಗಳು, ದಿಗ್ಗಜರು ಶುಭಾಶಯಗಳ ಸುರಿಮಳೆ ಸುರಿಸಿದ್ದಾರೆ. ಭಾರತದೆಲ್ಲೆಡೆ ಸಂಭ್ರಮ ಮನೆ ಮಾಡಿದೆ.

ಯಾರು ಈ ಗುಕೇಶ್ ದೊಮ್ಮರಾಜು: ಗುಕೇಶ್ ಡಿ ಅಥವಾ ಗುಕೇಶ್ ದೊಮ್ಮರಾಜು ಹುಟ್ಟಿದ್ದು 2006ರಲ್ಲಿ. ಈಗ ಚೆನ್ನೈನಲ್ಲಿ ತನ್ನ ಪೋಷಕರ ಜೊತೆ ವಾಸವಾಗಿದ್ದಾರೆ. ತೆಲುಗು ಕುಟುಂಬವಾದರೂ ಹುಟ್ಟಿ ಬೆಳೆದಿದ್ದು ಚೆನ್ನೈನಲ್ಲಿ. ಗುಕೇಶ್ ತಂದೆ ಡಾ. ರಜನೀಕಾತ್ ಇಎನ್‌ಟಿ ಸರ್ಜನ್, ತಾಯಿ ಡಾ. ಪದ್ಮಾ ಮೈಕ್ರೋಬಯೋಲಜಿಸ್ಟ್, ತನ್ನ 7ನೇ ವಯಸ್ಸಿನಲ್ಲಿ ಚೆಸ್ ಅಭ್ಯಾಸ ಆರಂಭಿಸಿದ್ದಾರೆ. 2013ರಲ್ಲಿ ಗುಕೇಶ್ ವಾರದ ಮೂರು ದಿನ ತಲಾ ಒಂದು ಗಂಟೆಯಂತೆ ಚೆಸ್ ಆಡಲು ಆರಂಭಿಸಿದ್ದರು. ಅಷ್ಟೇ ವೇಗದಲ್ಲಿ ಗುಕೇಶ್ ಚೆಸ್ ಪಟುವಾಗಿ ಹೊರಹೊಮ್ಮಿದರು. ಹೀಗಾಗಿ ಅತೀ ಕಿರಿಯ ವಯಸ್ಸಿನಲ್ಲಿ ಗುಕೇಶ್ ಚೆಸ್ ಟೂರ್ನಮೆಂಟ್‌ಗಳಲ್ಲಿ ಪಾಲ್ಗೊಂಡು ಪ್ರಶಸ್ತಿ ಗೆಲ್ಲತೊಡಗಿದ್ದರು. 2015ರಲ್ಲಿ ನಡೆದ ಅಂಡರ್ 9 ಏಷ್ಯನ್ ಸ್ಕೂಲ್ ಆಫ್ ಚಾಂಪಿಯನ್‌ಶಿಪ್‌ನಲ್ಲಿ ಪಾಲ್ಗೊಂಡ ಗುಕೇಶ್ ಭಾರತ ಮಾತ್ರವಲ್ಲ ವಿಶ್ವದ ಗಮನ ಸೆಳೆದಿದ್ದರು. ಅಂಡರ್ 12 ವಿಭಾಗದಲ್ಲಿ ವಿಶ್ವ ಯೂಥ್ ಚೆಸ್ ಚಾಂಪಿಯನ್‌ಶಿಪ್‌ನಲ್ಲೂ ಪ್ರಶಸ್ತಿ ಗೆದ್ದುಕೊಂಡರು. ಕೇವಲ 12ನೇ ವಯಸ್ಸಿನಲ್ಲಿ ಗುಕೇಶ್ ಏಷ್ಯನ್ ಯೂಥ್ ಚಾಂಪಿಯನ್‌ಶಿಪ್ 2018ರಲ್ಲಿ ಬರೋಬ್ಬರಿ 5 ಚಿನ್ನದ ಪದಕ ಗೆದ್ದು ಇತಿಹಾಸ ನಿರ್ಮಿಸಿದ್ದರು.

2017ರಲ್ಲಿ ಗುಕೇಶ್ ಇಂಟರ್‌ನ್ಯಾಷನಲ್ ಮಾಸ್ಟರ್ ಬಿರುದು ಕೂಡ ಪಡೆದಿದ್ದಾರೆ. ಪ್ರತಿ ಟೂರ್ನಮೆಂಟ್‌ಗಳಲ್ಲಿ ಗುಕೇಶ್ ಅದ್ಭುತ ಪ್ರದರ್ಶನದ ಮೂಲಕ ಹೊಸ ಮೈಲಿಗಲ್ಲು ರಚಿಸಿದ್ದರು. 2023ರಲ್ಲಿ ಗುಕೇಶ್ ಚೆಸ್ ರೇಟಿಂಗ್ 2750 ತಲುಪಿತ್ತು. ಈ ಮೂಲಕ 37 ವರ್ಷಗಳ ಚೆಸ್ ಕರಿಯರ್‌ನಲ್ಲಿ ಭಾರತದ ಗ್ರ್ಯಾಂಡ್ ಮಾಸ್ಟರ್ ವಿಶ್ವನಾಥ್ ಆನಂದ್ ಗಳಿಸಿದ ರೇಟಿಂಗ್ ಹಿಂದಿಕ್ಕಿ ಹೊಸ ದಾಖಲೆ ಬರೆದಿದ್ದರು.

2024ರಲ್ಲಿ ಬುಡಾಪೆಸ್ಟ್‌ನಲ್ಲಿ ನಡೆದ ಚೆಸ್ ಒಲಿಂಪಿಯಾಡ್‌ನಲ್ಲಿ ನಡೆದ ಚಾಂಪಿಯನ್‌ಶಿಪ್ ಟೂರ್ನಿಯಲ್ಲಿ ಗುಕೇಶ್ ಅದ್ಭುತ ಪ್ರದರ್ಶನ ನೀಡಿದ್ದರು. ಚಿನ್ನದ ಪದಕ ಗೆದ್ದ ಸಾಧನೆ ಮಾಡಿದರು. ಇಷ್ಟೇ ಅಲ್ಲ ಒಲಿಂಪಿಯಾಡ್‌ನಲ್ಲಿ ಭಾರತ ಮೊದಲ ಚಿನ್ನದ ಪದಕ ಗೆದ್ದ ಸಾಧನೆ ಮಾಡಿತ್ತು. ಪ್ರತಿ ಟೂರ್ನಿಯಲ್ಲಿ ಚಾಂಪಿಯನ್ ಕಿರೀಟ ಮುಡಿಗೇರಿಸಿಕೊಂಡ ಸಾಧನೆ ಮಾಡಿದ್ದಾರೆ. 2023ರಲ್ಲಿ ಏಷ್ಯಾ ಚೆಸ್ ಫೌಂಡೇಷನ್ ಪ್ಲೇಯರ್ ಆಫ್ ದಿ ಇಯರ್ ಪ್ರಶಸ್ತಿ ನೀಡಿ ಗೌರವಿಸಿದೆ. ಇದರ ಜೊತೆಗೆ ಸಂಘ ಸಂಸ್ಥೆಗಳ ಪ್ರಶಸ್ತಿಗಳು ಡಿ ಗುಕೇಶ್‌ಗೆ ಒಲಿದು ಬಂದಿದೆ.

ಹಿಂದುಳಿದ ವರ್ಗಗಳ ನಿಗಮ–ಮಂಡಳಿಗಳಿಗೆ ಅನುದಾನ ಕಡಿತ ಖಂಡಿಸಿ

ಇಂದು ಬಿಜೆಪಿ ಹಿಂದುಳಿದ ವರ್ಗಗಳ ಯುವ ಮೋರ್ಚಾ ಪ್ರತಿಭಟನೆ



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ರಾಜ್ಯ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ರಘು ಆರ್.ಕೌಟಿಲ್ಯ ಮಾತನಾಡಿದರು

ಮೈಸೂರು,ಡಿ.12(ಎಂಟಿವೈ)– ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಬರುವ ವಿವಿಧ ನಿಗಮಗಳಿಗೆ ಅನುದಾನ ಬಿಡುಗಡೆ ಮಾಡದೇ ಇರುವುದನ್ನು ಖಂಡಿಸಿ, ರಾಜ್ಯ ಸರ್ಕಾರದ ವಿರುದ್ಧ ನಾಳೆ (ಡಿ.13) ಮೈಸೂರಿನ ಮಹಾತ್ಮಗಾಂಧಿ ವೃತ್ತದಲ್ಲಿ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ವತಿಯಿಂದ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ರಘು ಆರ್.ಕೌಟಿಲ್ಯ ತಿಳಿಸಿದ್ದಾರೆ.

ಮೈಸೂರಿನ ಚಾಮರಾಜ ಮೊಹಲ್ಲಾದಲ್ಲಿರುವ ಬಿಜೆಪಿ ಕಚೇರಿಯಲ್ಲಿ ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ಕಾಂಗ್ರೆಸ್ ಸರ್ಕಾರ ಹಿಂದುಳಿದ ವರ್ಗಗಳನ್ನು ನಿರ್ಲಕ್ಷಿಸುತ್ತಿದೆ. ಹಿಂದುಳಿದ ವರ್ಗಗಳ ನಾಯಕ ಎನಿಸಿಕೊಳ್ಳುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಿಂದುಳಿದ ವರ್ಗಗಳಿಗೆ ನ್ಯಾಯ ದೊರಕಿಸಿಕೊಡುವಲ್ಲಿ ವಿಫಲರಾಗಿದ್ದಾರೆ. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಬರುವ ವಿವಿಧ ನಿಗಮಗಳಿಗೆ ಅನುದಾನ ನೀಡಿಲ್ಲ. ನಿಗಮಗಳಿಗೆ ಅನುದಾನವೇ ಇಲ್ಲದೆ ಆ ಸಮುದಾಯಗಳನ್ನು ಅಭಿವೃದ್ಧಿಪಡಿಸಲು ಹೇಗೆ ಸಾಧ್ಯ? ನಿಗಮ ಮಂಡಳಿ ಮೂಲಕ ನೆರವು ಪಡೆದು ಸ್ವಯಂ ಉದ್ಯೋಗದಿಂದ ಸ್ವಾವಲಂಬಿಗಳಾಗಲು ಪ್ರಯತ್ನಿಸುತ್ತಾರೆ. ಆದರೆ, ಸರ್ಕಾರ ಕೇವಲ ಓಟ್ ಬ್ಯಾಂಕ್ ರಾಜಕಾರಣಕ್ಕೆ ಮಾತ್ರ ಹಿಂದುಳಿದ ವರ್ಗಗಳನ್ನು ಬಳಸಿಕೊಳ್ಳುತ್ತಿದೆ ಎಂದು ಕಿಡಿಕಾರಿದರು.

ರಾಜ್ಯ ಸರ್ಕಾರ ಪಂಚ ಗ್ಯಾರಂಟಿ ಯೋಜನೆಗಳನ್ನು ಹೊರತುಪಡಿಸಿದರೆ, ಯಾವುದೇ ಅಭಿವೃದ್ಧಿ ಯೋಜನೆಗಳನ್ನು ಜಾರಿಗೆ ತಂದಿಲ್ಲ. ರಾಜ್ಯ ಸರ್ಕಾರದ ಬೊಕ್ಕಸ ಬರಿದಾಗಿದೆ. ಅಭಿವೃದ್ಧಿ ಯೋಜನೆಗಳ ಅನುಷ್ಠಾನ ಮಾಡುತ್ತಿಲ್ಲ. ಆದರೆ, ಸಾವಿರಾರು ಕೋಟಿ ರೂ.ಗಳ ಘೋಷಣೆ ಮಾಡುವಲ್ಲಿ ಮಾತ್ರ ಸರ್ಕಾರ ಮುಂಚೂಣಿಯಲ್ಲಿದೆ ಎಂದು ಆರೋಪಿಸಿದರು.

ಈ ಹಿಂದೆ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿವಿಧ ನಿಗಮ ಮಂಡಳಿಗಳಿಗೆ 546 ಕೋಟಿ ರೂ. ಅನುದಾನ ನೀಡಿತ್ತು. ಪ್ರಸ್ತುತ ಸರ್ಕಾರ ಕೇವಲ 170 ಕೋಟಿ ರೂ. ನೀಡಿದೆ. ಅದರಲ್ಲಿ ಡಿ.ದೇವರಾಜ ಅರಸು ಹಿಂದುಳಿದ ಅಭಿವೃದ್ಧಿ ನಿಗಮಕ್ಕೆ 50 ಕೋಟಿ, ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮಕ್ಕೆ 6.50 ಕೋಟಿ, ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮಕ್ಕೆ 4.50 ಕೋಟಿ, ಕರ್ನಾಟಕ ಸವಿತಾ ಸಮಾಜದ ಅಭಿವೃದ್ಧಿ ನಿಗಮಕ್ಕೆ 2.50 ಕೋಟಿ, ಕರ್ನಾಟಕ ಅಲೆಮಾರಿ, ಅರೆ ಅಲೆಮಾರಿ ಅಭಿವೃದ್ಧಿ ನಿಗಮಕ್ಕೆ 6 ಕೋಟಿ, ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮಕ್ಕೆ 4.50 ಕೋಟಿ, ಕಾಡುಗೊಲ್ಲ ಅಭಿವೃದ್ಧಿ ನಿಗಮಕ್ಕೆ 7.50 ಕೋಟಿ, ಒಕ್ಕಲಿಗ ಅಭಿವೃದ್ಧಿ ನಿಗಮಕ್ಕೆ 30 ಕೋಟಿ ಹಾಗೂ ಕರ್ನಾಟಕ ಮರಾಠ ಅಭಿವೃದ್ಧಿ ನಿಗಮಕ್ಕೆ 25 ಕೋಟಿ ರೂ. ನೀಡಿದೆ ಎಂದರು.

ಬಜೆಟ್‌ನಲ್ಲಿ ವಿವಿಧ ನಿಗಮಗಳಿಗೆ 1600 ಕೋಟಿ ರೂ. ಬಿಡುಗಡೆ ಮಾಡುವುದಾಗಿ ಘೋಷಣೆ ಮಾಡಿತ್ತು. ಇದುವರೆಗೂ 347 ಕೋಟಿ ರೂ. ಮಾತ್ರ ಬಿಡುಗಡೆ ಮಾಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಎರಡನೇ ಅವಧಿಯಲ್ಲಿ ಮುಖ್ಯಮಂತ್ರಿಯಾಗಿ ಎರಡು ವರ್ಷ ಪೂರೈಸುತ್ತಿದ್ದಾರೆ. ಈ ವೇಳೆ ಅವರು ತಮ್ಮ ಖುರ್ಚಿ ಉಳಿಸಿಕೊಳ್ಳುವುದಕ್ಕಾಗಿ ಪರದಾಡುತ್ತಿದ್ದಾರೆ. ಇದರಿಂದ ಅವರಿಗೆ ಹಿಂದುಳಿದ ವರ್ಗಗಳ ಹಿತ ಕಾಯಲು ಸಾಧ್ಯವಾಗುತ್ತಿಲ್ಲ. ಇದನ್ನು ಮನಗಂಡು ರಾಜ್ಯ ಬಿಜೆಪಿ ಸದನದ ಒಳಗೆ ಹಾಗೂ ಹೊರಗೆ ಪ್ರತಿಭಟನೆ ನಡೆಸಲು ನಿರ್ಧರಿಸಿದ್ದು, ಹಿಂದುಳಿದ ವರ್ಗಗಳ ನಿಗಮಕ್ಕೆ ಅನುದಾನ ನೀಡದಿರುವ ರಾಜ್ಯ ಸರ್ಕಾರದ ಕ್ರಮ ಖಂಡಿಸಿ ರಾಜ್ಯಾದ್ಯಂತ ಏಕಕಾಲದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ನಾಳೆ ಮೈಸೂರಿನ ಮಹಾತ್ಮಗಾಂಧಿ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಗುತ್ತಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಮೈ.ನಾ. ಲೋಕೇಶ್, ಪಿ.ಗಿರೀಶ್, ಮುಖಂಡರಾದ ಮಹೇಶ್‌ರಾಜೇ ಅರಸ್, ಬಾಲಚಂದ್ರ, ರವಿಶಂಕರ್, ಪರಶುರಾಮಪ್ಪ, ದಯಾನಂದ್ ಪಾಟೀಲ್ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

13.12.2024 ಶುಕ್ರವಾರ, ಮಳೆ ನಕ್ಷತ್ರ: ಜ್ಯೇಷ್ಠ, 02.12.2024 ರಿಂದ 15.12.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ,
ತಿಥಿ: ತ್ರಯೋದಶಿ, ನಕ್ಷತ್ರ: ಭರಣಿ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಮೈಸೂರಿನ ಅವಧೂತ ದತ್ತ ಪೀಠ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ದತ್ತಾತ್ರೇಯ ಜಯಂತಿ ಪ್ರಯುಕ್ತ ವಿವಿಧ ಧಾರ್ಮಿಕ ಕಾರ್ಯಕ್ರಮ, ಬೆಳಿಗ್ಗೆ 7ಕ್ಕೆ ಕಾರ್ಯ ಸಿದ್ಧಿ ಹನುಮಂತನಿಗೆ ಅಭಿಷೇಕ. 9ಗಂಟೆಗೆ ಶ್ರೀ ಕಾಲಾಗ್ನಿ ಶಮನ ದತ್ತಾತ್ರೇಯ ಸ್ವಾಮಿಗೆ ಪಂಚಾಮೃತ ಅಭಿಷೇಕ, 10ಕ್ಕೆ ಶ್ರೀ ಚಕ್ರಪೂಜೆ, ಪುಣ್ಯಸ್ಮರಣೆ, ಅನಘ ವ್ರತ. 11ಗಂಟೆಗೆ ಶ್ರೀ ಹನುಮ ಜಯಂತಿ ಪೂಜೆ. ಸಂಜೆ 5ಕ್ಕೆ ಪಲ್ಲಕ್ಕಿ ಉತ್ಸವ. ಸಂಜೆ 7 ಹನುಮಾನ್ ಭಜನೆ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಮಧುಮೇಹ ಕಾಯಿಲೆಗೆ ಚಿಕಿತ್ಸಾ ಶಿಬಿರ, ಕುತ್ತಿಗೆ ಹಾಗೂ ಬೆನ್ನು ನೋವಿಗೆ ಅಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ವೆರಿಕೋಸ್ ವೇನ್ಸ್ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ರಿಂದ ಸಂಜೆ 4.30ರವರೆಗೆ.

■ **ತರಳಬಾಳು ಶಿಕ್ಷಣ ಕೇಂದ್ರ :** ವಾರ್ಷಿಕೋತ್ಸವ, ವಸ್ತುಪ್ರದರ್ಶನ, ಪ್ರತಿಭಾ ಪುರಸ್ಕಾರ, ಉದ್ಘಾಟನೆ : ಸಾರ್ವಜನಿಕ ಶಿಕ್ಷಣ ಆಡಳಿತ ಮಂಡಳಿ ಉಪನಿರ್ದೇಶಕ ಎಸ್.ಟಿ. ಜವರೇಗೌಡ, ಮುಖ್ಯ ಅತಿಥಿಗಳು : ನಿವೃತ್ತ ಪ್ರಾಧ್ಯಾಪಕ ಡಾ. ಜಿ.ಆರ್. ಶಿವಮೂರ್ತಿ, ಅಧ್ಯಕ್ಷತೆ : ತರಳಬಾಳು ಪದವಿಪೂರ್ವ ಕಾಲೇಜು ಪ್ರಾಂಶುಪಾಲ ಡಿ. ನಾಗೇಂದ್ರಪ್ಪ, ಉಪಸ್ಥಿತರು : ತರಳಬಾಳು ಪ್ರೌಢಶಾಲೆ ಮುಖ್ಯೋಪಾಧ್ಯಾಯ ವಿ. ಆನಂದಪ್ಪ, ಸ್ಥಳ: ಶಾಲೆ ಆವರಣ, ಬೆಳಗ್ಗೆ 9ಕ್ಕೆ.

■ **ಶಾಲಾ ಶಿಕ್ಷಣ ಇಲಾಖೆ, ಮೈಸೂರು ಜಿಲ್ಲಾ ಪಿಯು ವಾಣಿಜ್ಯಶಾಸ್ತ್ರ ವೇದಿಕೆ :** ಶೈಕ್ಷಣಿಕ ಕಾರ್ಯಾಗಾರ ಮತ್ತು ಪುಸ್ತಕ ಬಿಡುಗಡೆ ಸಮಾರಂಭ, ಉದ್ಘಾಟನೆ : ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಂ. ಮರಿಸ್ವಾಮಿ, ಉಪಸ್ಥಿತರು : ಜಿಲ್ಲಾ ಪ್ರಾಚಾರ್ಯರ ಸಂಘದ ಅಧ್ಯಕ್ಷೆ ಶ್ರೀಮತಿ ಹೆಚ್.ಹೆಚ್. ರಾಜೇಶ್ವರಿ, ಅಧ್ಯಕ್ಷತೆ : ವಿದ್ಯಾವರ್ಧಕ ಪದವಿಪೂರ್ವ ಕಾಲೇಜು ಪ್ರಾಂಶುಪಾಲ ಸಿದ್ದಯ್ಯ, ಸ್ಥಳ: ಪಿ.ಎಂ. ಚಿಕ್ಕಬೋರಯ್ಯ ಸಭಾಂಗಣ, ಶೇಷಾದ್ರಿ ಅಯ್ಯರ್ ರಸ್ತೆ, ಬೆಳಗ್ಗೆ 9ಕ್ಕೆ.

■ **ಶಾರದಾ ವಿದ್ಯಾಮಂದಿರ :** ವಾರ್ಷಿಕೋತ್ಸವ, ಶಾರದೋತ್ಸವ, ಮುಖ್ಯ ಅತಿಥಿಗಳು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಸ್ಥಳ: ಕಲಾಮಂದಿರ, ಬೆಳಗ್ಗೆ 9.30ಕ್ಕೆ.

■ **ದೀಪಾ ಶಾಲೆ :** ವಾರ್ಷಿಕ ಕ್ರೀಡಾಕೂಟ, ಉದ್ಘಾಟನೆ : ಮಾಜಿ ಸಿಂಡಿಕೇಟ್ ಸದಸ್ಯ ಎಚ್.ಎ. ವೆಂಕಟೇಶ್, ಮುಖ್ಯ ಅತಿಥಿಗಳು : ನ್ಯೂಕ್ಲಿಯರ್ ಇಂಜಿನಿಯರ್ ಮುರುಳಿ ಕೃಷ್ಣ, ಅಧ್ಯಕ್ಷತೆ : ದೀಪಾ ಶಿಕ್ಷಣ ಸಂಸ್ಥೆ ಅಧ್ಯಕ್ಷ ಎಂ. ರಾಮಪ್ಪ, ಸ್ಥಳ: ದೀಪಾ ಶಾಲೆ ಆಟದ ಮೈದಾನ, ರೂಪಾನಗರ, ಬೆಳಗ್ಗೆ 9.30ಕ್ಕೆ

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ 20ನೇ ಅವತರಣಿಕೆ, ಸ್ಥಳ: ರಾಮ್ ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.

■ **ಸುಯೋಗ್ ಆಸ್ಪತ್ರೆ :** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆ 10 ರಿಂದ.

■ **ಶ್ರೀ ಉತ್ತರಾದಿ ಮಠ, ಶ್ರೀ ಆಂಜನೇಯಸ್ವಾಮಿ ದೇವಸ್ಥಾನ :** ಬೆಳಗ್ಗೆ 10 ರಿಂದ ಶ್ರೀ ಹನುಮದ್ ವ್ರತ, ಅಧ್ಯಕ್ಷತೆ : ಡಾ. ಸತ್ಯಧ್ಯಾನಾಚಾರ್ಯ ಕಟ್ಟಿ, ನೇತೃತ್ವ : ಪಂಡಿತ್ ಶ್ರೀ ಅನಿರುದ್ಧಾಚಾರ್ಯ ಪಾಂಡುರಂಗಿ, ಪಂಡಿತ್ ಡಾ. ಸತ್ಯಧ್ಯಾನಾಚಾರ್ಯ ಕಟ್ಟಿ ಅವರಿಗೆ ಸನ್ಮಾನ, ಮುಖ್ಯ ಅತಿಥಿಗಳು : ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಮೈಸೂರು ನಗರ ಹಾಗೂ ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಪಾಲಿಕೆ ಮಾಜಿ ಸದಸ್ಯೆ ಶ್ರೀಮತಿ ಪ್ರಮೀಳಾ ಭರತ್, ಕಾಂಗ್ರೆಸ್ ಮುಖಂಡ ಎನ್.ಎಂ. ನವೀನ್‌ಕುಮಾರ್, ಮಧ್ಯಾಹ್ನ 12.30 ರಿಂದ ಅನ್ನಸಂತರ್ಪಣೆ, ತುಳಸಿ ಗಿಡ ವಿತರಣೆ, ಸ್ಥಳ: ಶ್ರೀ ಉತ್ತರಾದಿ ಮಠ, ಶ್ರೀ ಆಂಜನೇಯಸ್ವಾಮಿ ದೇವಸ್ಥಾನ, ಯಾದವಗಿರಿ.

■ **ಮಹಾರಾಣಿ ಮಹಿಳಾ ಕಲಾ ಕಾಲೇಜು, ಸ್ನಾತಕ ಮತ್ತು ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗ, ಕನ್ನಡ ಸಂಘ, ಕವಿತಾ ಪ್ರಕಾಶನ :** ಕುಮಾರಿ ವಿ.ವಿ.ಭುವನ ಅವರ 'ಆಗಸದಿ ಹಾರುವ ಹಕ್ಕಿಗಳಿರಾ' ಹಾಗೂ ಕನ್ನಡ ಪ್ರಾಧ್ಯಾಪಕರಾದ ಡಾ.ಬಿ.ವಿ.ವಸಂತಕುಮಾರ್ ಅವರ 'ಸತ್ತು ಬದುಕುವ ಸುಖ' ಕವನ ಸಂಕಲನಗಳ ಬಿಡುಗಡೆ ಹಾಗೂ ಕವಿಗೋಷ್ಠಿ, ಕೃತಿ ಬಿಡುಗಡೆ : ಹಿರಿಯ ಲೇಖಕ ಡಾ.ಮೊರಬದ ಮಲ್ಲಿಕಾರ್ಜುನ, ಉಪಸ್ಥಿತರು : ಕು. ವಿ.ವಿ. ಭುವನ, ಡಾ. ಬಿ.ವಿ. ವಸಂತಕುಮಾರ್, ಅಧ್ಯಕ್ಷತೆ : ಮಹಾರಾಣಿ ಮಹಿಳಾ ಕಲಾ ಕಾಲೇಜಿನ ಪ್ರಾಂಶುಪಾಲರಾದ ಡಾ. ಎಂ. ವಿಜಯಮ್ಮ, ಕವಿಗೋಷ್ಠಿಯಲ್ಲಿ ಕೆ.ಎನ್.ಲಾವಣ್ಯ ಪ್ರಭಾ, ಸುಚಿತ್ರಾ ಹೆಗಡೆ, ಎನ್.ಆರ್.ರೂಪಶ್ರೀ, ಲಾವಣ್ಯಾ ಎನ್., ನಂಜನಗೂಡು ಅನ್ನಪೂರ್ಣ, ತನುಜಾ ಎಚ್.ಎಂ., ಸ್ಫೂರ್ತಿ, ಮಂಜುಳಾ ಬಿ.ಎಸ್., ರಕ್ಷಿತಾ ಎಂ., ಸಹನಾ ಎಸ್., ಮಹಾಲಕ್ಷ್ಮಿ, ಲತಾಶ್ರೀ ಹಾಗೂ ವಿನೋದಾ ಭಾಗವಹಿಸುವರು. ಸ್ಥಳ: ಮಹಾರಾಣಿ ಮಹಿಳಾ ಕಲಾ ಕಾಲೇಜಿನ ಜಯಲಕ್ಷ್ಮಮ್ಮಣ್ಣಿ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಅಕ್ಷರ ಮೋಟಾರ್ಸ್ :** ನೂತನ ಶೋ ರೂಂ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಆರ್‌ಟಿಓ ಶ್ರೀಮತಿ ದೇವಿಕಾ, ಅತಿಥಿಗಳು : ಲಕ್ಷ್ಮೀಪುರಂ ಇನ್ಸ್‌ಪೆಕ್ಟರ್ ರವಿಶಂಕರ್, ಅಧ್ಯಕ್ಷತೆ : ಸುಭದೀಪ್ ದಾಸ್, ಸ್ಥಳ: ಚಾಮರಾಜ ಜೋಡಿ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕೇಂದ್ರ ಕಾರಾಗೃಹ :** ಕನ್ನಡ ರಾಜ್ಯೋತ್ಸವದ ಅಂಗವಾಗಿ ಮನರಂಜನೆಯಿಂದ ಮನಪರಿವರ್ತನೆ ಭಾವಪೂರ್ಣ ಕನ್ನಡ ಗೀತೆಗಳ ರಸಮಂಜರಿ, ಉದ್ಘಾಟನೆ : ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ, ಮುಖ್ಯ ಅತಿಥಿಗಳು : ಮುಖ್ಯ ಅಧೀಕ್ಷಕ ಪಿ.ಎಸ್. ರಮೇಶ್, ಅಧ್ಯಕ್ಷತೆ : ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಉಪಸ್ಥಿತರು : ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷರಾದ ಡಾ. ವೈ.ಡಿ. ರಾಜಣ್ಣ, ಎಂ. ಚಂದ್ರಶೇಖರ್, ಉಪಾಧ್ಯಕ್ಷ ಡೈರಿ ವೆಂಕಟೇಶ್, ಮೈಸೂರು ತಾಲೂಕು ಅಧ್ಯಕ್ಷ ಎ.ಸಿ. ಮಂಜುನಾಥ್, ಡಿ. ದೇವರಾಜ ಅರಸು ಪ್ರತಿಮೆ ಪ್ರತಿಷ್ಠಾಪನಾ ಸಮಿತಿ ಸಂಘಟನಾ ಕಾರ್ಯದರ್ಶಿ ಪ್ರಶಾಂತ್ ಆರ್ಯ, ಸಂಚಾಲಕ ರದಿವುಲ್ಲಾ ಖಾನ್, ರಸಮಂಜರಿ ಕಾರ್ಯಕ್ರಮಕ್ಕೆ ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್ ಚಾಲನೆ, ಸ್ಥಳ: ಕೇಂದ್ರ ಕಾರಾಗೃಹ ಆವರಣ, ಬೆಳಗ್ಗೆ 10.30ಕ್ಕೆ.

■ **ಹರಿ ವಿದ್ಯಾಲಯ :** 17ನೇ ವಾರ್ಷಿಕೋತ್ಸವ ಹರಿ ಸೌರಭ, ಅಧ್ಯಕ್ಷತೆ : ಕರ್ನಾಟಕ ಮುಕ್ತಕ ಸಾಹಿತ್ಯ ಅಕಾಡೆಮಿ ಸಂಸ್ಥಾಪಕ ಎಸ್. ರಾಮಪ್ರಸಾದ್, ಮುಖ್ಯ ಅತಿಥಿಗಳು : ರಂಗಕರ್ಮಿ ಅಡ್ಡಂಡ ಕಾರ್ಯಪ್ಪ, ಉಪಸ್ಥಿತರು : ಗಾಯಕಿ ದಿಯಾ ಹೆಗಡೆ, ಸಂಸ್ಥೆ ಅಧ್ಯಕ್ಷ ಶ್ರೀನಿವಾಸ ಹೊಸಮನೆ, ಕಾರ್ಯದರ್ಶಿ ಎಚ್.ಆರ್. ಭಗವಾನ್, ಶೈಕ್ಷಣಿಕ ನಿರ್ದೇಶಕ ಪ್ರೊ. ಕೆ.ವಿ. ಸತ್ಯನ್, ಸ್ಥಳ: ಹರಿ ವಿದ್ಯಾಲಯ, ಬೋಗಾದಿ, ಸಂಜೆ 4.30ಕ್ಕೆ.

■ **ಪಿಜಿಎಲ್ ಸಂಸ್ಮರಣಾ ವೇದಿಕೆ :** ಗಾನಕಲಾಭೂಷಣ ಪಿ.ಜಿ. ಲಕ್ಷ್ಮೀನಾರಾಯಣ್ ಅವರ ಸಂಸ್ಮರಣಾರ್ಥ ಸಂಗೀತ ಕಾರ್ಯಕ್ರಮ, ಗಾನಕಲಾ ಭೂಷಣ ಡಾ. ಆರ್.ಎನ್. ಶ್ರೀಲತಾ ಅವರಿಂದ ಗಾಯನ, ವಿದ್ವಾನ್ ವಿಶ್ವಜಿತ್ ಮತ್ತೂರು–ಪಿಟೀಲು, ವಿದ್ವಾನ್ ಜಿ.ಎಸ್. ರಾಮಾನುಜನ್–ಮೃದಂಗ, ವಿದ್ವಾನ್ ವಿ.ಎಸ್. ರಮೇಶ್–ಮೋರ್ಚಿಂಗ್, ಗಾನಕಲಾಭೂಷಣ ಡಾ. ಆರ್.ಎನ್. ಶ್ರೀಲತಾ ಅವರಿಗೆ ಗೌರವ ಸಮರ್ಪಣೆ, ಅಧ್ಯಕ್ಷತೆ : ಶ್ರೀ ನಾದಬ್ರಹ್ಮ ಸಂಗೀತ ಸಭಾ ಕಾರ್ಯದರ್ಶಿ ಕೆ.ಎಸ್.ಎನ್. ಪ್ರಸಾದ್, ಮುಖ್ಯ ಅತಿಥಿಗಳು : ಗಾನಕಲಾಭೂಷಣ ವಿದ್ವಾನ್ ಹೆಚ್.ಕೆ. ನರಸಿಂಹಮೂರ್ತಿ, ಸ್ಥಳ: ಶ್ರೀ ವಾಸುದೇವಾಚಾರ್ಯ ಭವನ, ಶ್ರೀ ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 6 ರಿಂದ.

■ **ಶ್ರೀ ಕ್ಷೇತ್ರ ಗೊಮ್ಮಟಗಿರಿ ಸೇವಾ ಸಮಿತಿ :** ಬೆಳಗ್ಗೆ 10.30 ರಿಂದ ಶ್ರೀಕ್ಷೇತ್ರ ಗೊಮ್ಮಟಗಿರಿ ಭಗವಾನ್ ಬಾಹುಬಲಿಸ್ವಾಮಿಯ 75ನೇ ಮಹಾಮಸ್ತಕಾಭಿಷೇಕ ಅಮೃತ ಮಹೋತ್ಸವ, ಜಾತ್ರಾ ಮಹೋತ್ಸವ, ಅರ್ಹದ್ದಾಸರ ಸಭಾ ಮಂಟಪದಲ್ಲಿ ಶ್ರೀ ಕ್ಷೇತ್ರ ಕನಕಗಿರಿಯ ಸ್ವಸ್ತಿಶ್ರೀ ಭುವನಕೀರ್ತಿ ಭಟ್ಟಾರಕ ಸ್ವಾಮೀಜಿ, ಹೊಂಬುಜ ಕ್ಷೇತ್ರದ ಸ್ವಸ್ತಿಶ್ರೀ ಡಾ. ದೇವೇಂದ್ರ ಕೀರ್ತಿ ಭಟ್ಟಾರಕ ಸ್ವಾಮೀಜಿ, ಶ್ರವಣಬೆಳಗೊಳದ ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಸ್ವಾಮೀಜಿಗಳ ಸಾನ್ನಿಧ್ಯದಲ್ಲಿ ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸ್ಮರಣ ಸಂಚಿಕೆ ಬಿಡುಗಡೆ, ಉದ್ಘಾಟನೆ : ಮೇಘಾಲಯ ರಾಜ್ಯಪಾಲ ಸಿ.ಹೆಚ್. ವಿಜಯಶಂಕರ್, ಮುಖ್ಯ ಅತಿಥಿಗಳು: ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ. ವೀರೇಂದ್ರ ಹೆಗ್ಗಡೆ, ಸಚಿವ ಡಿ.ಸುಧಾಕರ್, ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಭಾರತೀಯ ಜೈನ್ ಮಿಲನ್ ರಾಷ್ಟ್ರೀಯ ಕಾರ್ಯಾಧ್ಯಕ್ಷ ಡಿ. ಸುರೇಂದ್ರ ಕುಮಾರ್, ಶಾಸಕ ಜಿ.ಟಿ. ದೇವೇಗೌಡ, ಹಳೇಬೀಡು ಗ್ರಾಪಂ ಅಧ್ಯಕ್ಷೆ ಶ್ರೀಮತಿ ಕೆ.ಎಸ್. ಶೃತಿ, ಅಧ್ಯಕ್ಷತೆ : ಶಾಸಕ ಜಿ.ಡಿ. ಹರೀಶ್‌ಗೌಡ, ಸಂಜೆ 6 ಗಂಟೆಗೆ ಕಲಾವಿದೆ ಕಲ್ಪಿತಾ ಪ್ರಶಾಂತ್ ತಂಡದಿಂದ ಪುಷ್ಪಾಂಜಲಿ, ಗಣೇಶ ಸ್ತುತಿ, ವಿಠಲ ಕೃಷ್ಣ ಕುರಿತು ದೇವರನಾಮ, ಬಾಹುಬಲಿ ಕುರಿತು ವಿಶೇಷ ನೃತ್ಯ ರೂಪಕ, ಸ್ಥಳ: ಶ್ರೀಕ್ಷೇತ್ರ ಗೊಮ್ಮಟಗಿರಿ, ಇಲವಾಲ.

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಹನುಮ ಜಯಂತಿ ಮಹೋತ್ಸವ, ಬೆಳಗ್ಗೆ ವಿಶೇಷ ಪೂಜೆ, ಮಧ್ಯಾಹ್ನ 12ಕ್ಕೆ ಪ್ರಸಾದ ವಿನಿಯೋಗ, ಸಾನ್ನಿಧ್ಯ : ಇಳೈ ಆಳ್ವಾರ್ ಸ್ವಾಮೀಜಿ, ಶ್ರೀ ಶಾಸ್ತಾ ಪೀಠಂ ಧರ್ಮಾಧಿಕಾರಿ ಎಂ.ಎಸ್. ಮುರಳೀಧರ ಶಾಸ್ತ್ರಿ, ಸ್ಥಳ: ದೇವಸ್ಥಾನಂ, ರಾಘವೇಂದ್ರನಗರ.

■ **ಶ್ರೀ ಗೀತಾ ಪ್ರಚಾರಿಣೀ ಸಭಾ ಟ್ರಸ್ಟ್ :** ಶ್ರೀ ಗೀತಾ ಜಯಂತಿ ಮಹೋತ್ಸವ, ಬೆಳಗ್ಗೆ 7.30 ರಿಂದ ಸಾಮೂಹಿಕ ಭಗವದ್ಗೀತೆ ಪಾರಾಯಣ, ಬೆಳಗ್ಗೆ 8.30 ರಿಂದ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 5.30 ರಿಂದ ವಿಷ್ಣು ಸಹಸ್ರನಾಮ ಪಾರಾಯಣ, ಸಂಜೆ 6 ರಿಂದ ಚಿನ್ಮಯ ಭಜನಾ ಮಂಡಳಿಯಿಂದ ಭಜನೆ, ಸಂಜೆ 7 ರಿಂದ ಬಿ.ಎನ್. ಮಾಧವಾಚಾರ್ ಅವರಿಂದ ಭಗವದ್ಗೀತೆ ಪ್ರವಚನ–6ನೇ ಅಧ್ಯಾಯ ಕುರಿತು ಪ್ರವಚನ, ಸ್ಥಳ: ಗೀತಾ ಮಂದಿರ, ಅಶೋಕ ರಸ್ತೆ.

■ **ಶ್ರೀ ವೀರಾಂಜನೇಯಸ್ವಾಮಿ ದೇವಸ್ಥಾನ ಟ್ರಸ್ಟ್ :** ಹನುಮ ಜಯಂತಿ, ಬ್ರಾಹ್ಮಿ ಮುಹೂರ್ತದಲ್ಲಿ ಶ್ರೀ ಸ್ವಾಮಿಯವರಿಗೆ ಚತುಷ್ಪಾರ್ಚನೆ, ಪಂಚಾಮೃತ ಅಭಿಷೇಕ, ಬೆಳಗ್ಗೆ 7.30ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಬೆಳಗ್ಗೆ 9ಕ್ಕೆ ಶ್ರೀ ರಾಮತಾರಕ ಹೋಮ, ಶ್ರೀ ಆಂಜನೇಯ ಸಹಸ್ರನಾಮ, ಮಧ್ಯಾಹ್ನ 11ಕ್ಕೆ ಶ್ರೀ ವೀರಾಂಜನೇಯ ಸ್ವಾಮಿಯ ಉತ್ಸವ, ಮಹಾಮಂಗಳಾರತಿ, ಮಧ್ಯಾಹ್ನ 12ಕ್ಕೆ ಅನ್ನಸಂತರ್ಪಣೆ, ಸಂಜೆ 6.30ಕ್ಕೆ ಶ್ರೀಮತಿ ಭಾಗ್ಯದತ್ತ ಅವರಿಂದ ಸುಗಮ ಸಂಗೀತ, ಸ್ಥಳ: ಶ್ರೀ ವೀರಾಂಜನೇಯ ಸ್ವಾಮಿ ದೇವಸ್ಥಾನ ಟ್ರಸ್ಟ್, ಬನ್ನಿಮಂಟಪ 'ಸಿ' ಬಡಾವಣೆ, ಹನುಮಂತನಗರ.

ಸುತ್ತೂರು ಶ್ರೀ ಕ್ಷೇತ್ರದಲ್ಲಿಂದು

■ **ಶ್ರೀ ಸುತ್ತೂರು ಕ್ಷೇತ್ರ :** ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಕರ್ತೃಗದ್ದುಗೆಯಲ್ಲಿ ಶಿವದೀಪೋತ್ಸವ–ಕೃತ್ತಿಕೋತ್ಸವ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಜೆಎಸ್‌ಎಸ್ ವಸತಿ ಶಾಲಾ ಸಂಗೀತ ಶಿಕ್ಷಕರು, ಮಕ್ಕಳಿಂದ ಸಾಮೂಹಿಕ ಪ್ರಾರ್ಥನೆ, ಜಾತ್ರಾ ಮಹೋತ್ಸವ ಪ್ರಸಾರ ರಥಕ್ಕೆ ಚಾಲನೆ, ಪದವಿಪೂರ್ವ ಶಿಕ್ಷಣ ಇಲಾಖೆ ರಾಷ್ಟ್ರೀಯ ಸೇವಾ ಯೋಜನೆಯ ರಾಜ್ಯ ಸಂಯೋಜನಾಧಿಕಾರಿ ಡಾ.ಗುಬ್ಬಿಗೂಡು ರಮೇಶ್ ಉಪನ್ಯಾಸ, ರಾತ್ರಿ 8ಕ್ಕೆ ಮಹಾಮಂಗಳಾರತಿ, ಪ್ರಾಕಾರೋತ್ಸವ, ದೀಪೋತ್ಸವಗಳು.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಬಣ್ಣದ ಬಾನಾಡಿಗಳು– ಬಾನುಲಿ ಸರಣಿ, ರಚನೆ : ಡಾ. ಕಲೀಂವುಲ್ಲಾ, ಪ್ರಸ್ತುತಿ: ಜಿ. ಶಾಂತಕುಮಾರ್, 6.40 ಮತ್ತು ಸಂಜೆ 5.45 ಕರಾಮುವಿವಿ ಮುಕ್ತವಾಣಿ ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಭಾಗವಹಿಸುತ್ತಾರೆ: ನ್ಯಾಷನಲ್ ಅಕಾಡೆಮಿಕ್ ಡಿಪಾಸಿಟರಿ (ಅಂತಾರಾಷ್ಟ್ರೀಯ ಶೈಕ್ಷಣಿಕ ದಾಖಲಾತಿ) ಕುರಿತು ಮಾತನಾಡುತ್ತಾರೆ ಪ್ರಾಚೀನ ಇತಿಹಾಸ ಹಾಗೂ ಪುರಾತತ್ವ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಮುಖ್ಯಸ್ಥರಾದ ಡಾ. ಶೆಲ್ವಪಿಳ್ಳೈ ಅಯ್ಯಂಗಾರ್ ಪ್ರಾಯೋಜಕರು: ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯ, ಮೈಸೂರು. ಪ್ರಸ್ತುತಿ: ಎನ್. ಕೇಶವಮೂರ್ತಿ, 6.50 ರೈತರಿಗೆ ಸಲಹೆ, 7.15 KABHI-ಕರ್ನಾಟಕ–ಮೆದುಳು ಆರೋಗ್ಯ ಕುರಿತ ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ನಿಮ್ಹಾನ್ಸ್ ಸಂಸ್ಥೆ, ಬೆಂಗಳೂರು, 8.30 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಆರೋಗ್ಯ ಚಳಿಗಾಲದ ಋತುಚರ್ಯೆ–ಚಳಿಗಾಲದಲ್ಲಿ ಕಂಡುಬರುವ ಆರೋಗ್ಯ ಸಮಸ್ಯೆಗಳಿಗೆ ಆಯುರ್ವೇದ ಪರಿಹಾರ ಕುರಿತು ಡಾ. ಸದ್ಗುಣ. ಡಿ.ಎನ್ ಅವರೊಂದಿಗೆ ಮಾತುಕತೆ ನಂತರ 'ಗ್ಯಾಸ್ ಗೀಜರ್ ಸಿಂಡ್ರೋಮ್' ಕುರಿತು ಡಾ. ವೇಣುಗೋಪಾಲಕೃಷ್ಣ. ಕೆ.ಎಸ್.ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ : ಬೇದ್ರೆ ಮಂಜುನಾಥ್, 9.40 ಗಾಂಧಿ ಸ್ಮೃತಿ, 10.05 United Nations decade of sustainable energy for all, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಸಂಗೀತ ಸಂಭ್ರಮ ನಾದಲಯ ಸಂಗಮ, ಪ್ರಸ್ತುತಿ: ಹೆಚ್. ಎಲ್. ಶಿವಶಂಕರಸ್ವಾಮಿ

ಮಧ್ಯಾಹ್ನ: 12.35 ದೇವರನಾಮ, 12.45 ಕಾದಂಬರಿ ವಿಹಾರ – ಎಂ.ಆರ್. ಶ್ರೀನಿವಾಸಮೂರ್ತಿಯವರ 'ರಂಗಣ್ಣನ ಕನಸಿನ ದಿನಗಳು' ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ : ಉಮೇಶ್. ಎಸ್.ಎಸ್., 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಸಕ್ಕರೆ ನಾಡಿನ ಅಕ್ಕರೆಯ ಲೇಖಕರು, ಲೇಖಕರು ಹಾಗೂ ಪ್ರಸ್ತುತಿ : ಶಭಾನ ಮತ್ತು ಕೀರ್ತಿ. ಎಸ್. ಬೈಂದೂರು, ಪರಿಕಲ್ಪನೆ : ಅಬ್ದುಲ್ ರಶೀದ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ –ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ.ಕೆ.ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಕೃತಿ. ಹೆಚ್.ಆರ್–ಹಾಡುಗಾರಿಕೆ, 4.00 ಮಹಿಳಾರಂಗ, 4.30 ವೃತ್ತಿ ಮಾರ್ಗದರ್ಶನ 'ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ಹಾಗೂ ಸಂಶೋಧನೆಯ ಅವಕಾಶಗಳು' ಕುರಿತು ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ಹಾಗೂ ಸಂಶೋಧನಾ ವಿಭಾಗದ ಮುಖ್ಯಸ್ಥರಾದ ಡಾ. ಶೆಲ್ವ ಪಿಳ್ಳೈ ಅಯ್ಯಂಗಾರ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ : ಬೇದ್ರೆ ಮಂಜುನಾಥ್, 6.50 ಕೃಷಿರಂಗ : ಪ್ರಾಯೋಜಿತ ನೇರ ಫೋನ್ ಇನ್ ಕಾರ್ಯಕ್ರಮ, ಪ್ರಾಯೋಜಕರು : ಕೃಷಿ ಇಲಾಖೆ, ಕರ್ನಾಟಕ ಸರ್ಕಾರ, ವಿಷಯ : ಸಿರಿಧಾನ್ಯ ಸಾವಯವ ಕೃಷಿ ಮತ್ತು ಕೃಷಿ ಮೂಲಭೂತ ಸೌಕರ್ಯ ನಿಧಿ ಭಾಗವಹಿಸುತ್ತಾರೆ: ವೆಂಕಟರಾಮ ರೆಡ್ಡಿ. ಜೆ. ಪಾಟೀಲ್, ಅಪರ ಕೃಷಿ ನಿರ್ದೇಶಕರು, 7.20 ಕೃಷಿ ಹಾಡುಗಳು, 7.45 ಕನ್ನಡದಲ್ಲಿ ಭಾಷಣ, 8.00 ಸಂಸತ್ ಸಮೀಕ್ಷಾ, 8.15 ಕನ್ನಡ ಭಾರತಿ: ನಾಡೋಜ, ಹಿರಿಯ ಸಾಹಿತಿ, ಡಾ. ಹಂ.ಪ.ನಾ ಅವರೊಂದಿಗೆ ಸಂದರ್ಶನ, ಸಂದರ್ಶಕರು : ಟಿ.ವಿ.ವಿದ್ಯಾಶಂಕರ್, ನಂಜನಗೂಡು ತಿರುಮಲಾಂಬ–ಜೀವನ ಸಾಧನೆ ಕುರಿತು ಮಾತನಾಡುವವರು ಡಾ. ಕೆ. ಮಾಲತಿ, 9.30ಕರ್ನಾಟಕ ಶಾಸ್ತ್ರೀಯ ಸಂಗೀತ : ಮಧುರೈ ಜಿ.ಎಸ್.ಮಣಿ – ಹಾಡುಗಾರಿಕೆ, 10.00 ಸಂಸತ್ತಿನ ಪ್ರಶ್ನೋತ್ತರ ಅವಧಿಯ ಕಲಾಪಗಳ ಧ್ವನಿಮುದ್ರಣ

ಕಾವೇರಿ ಎಜುಕೇಷನ್ ಸೊಸೈಟಿ ಆಡಳಿತ ಮಂಡಳಿಯ

ಅಧ್ಯಕ್ಷರಾಗಿ ಮಂಡೇಪಂಡ ಸುಗುಣ ಮುತ್ತಣ್ಣ, ಗೌರವ ಕಾರ್ಯದರ್ಶಿಯಾಗಿ ಕೆ.ಪಿ.ಬೋಪಣ್ಣ

ಗೋಣಿಕೊಪ್ಪಲು, ಡಿ.12– ಕೊಡಗಿನ ಗೋಣಿಕೊಪ್ಪಲು ಕಾವೇರಿ ಎಜುಕೇಷನ್ ಸೊಸೈಟಿಯ ಆಡಳಿತ ಮಂಡಳಿಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ, ಅಧ್ಯಕ್ಷರಾಗಿ ಮಂಡೇಪಂಡ ಸುಗುಣ ಮುತ್ತಣ್ಣ, ಗೌರವ ಕಾರ್ಯದರ್ಶಿಯಾಗಿ ಕುಲ್ಲಚಂಡ ಪಿ.ಬೋಪಣ್ಣ, ಉಪಾಧ್ಯಕ್ಷರಾಗಿ ಕುಪ್ಪಂಡ ಮೋತಿ ಬೆಳ್ಯಪ್ಪ, ಖಜಾಂಚಿಯಾಗಿ ಚೊಟ್ಟೆಯಂಡಮಾಡ ಡಿ.ಮಾದಪ್ಪ ಆಯ್ಕೆಯಾಗಿದ್ದಾರೆ.

ಆಡಳಿತ ಮಂಡಳಿಯ ನಿರ್ದೇಶಕರಾಗಿ ಚೆರಿಯಪಂಡ ಕೆ.ಉತ್ತಪ್ಪ, ಮೂಕಳಮಾಡ ಕೆ.ಮೊಣ್ಣಪ್ಪ, ಚೆಪ್ಪುಡಿರ ಎಂ.ಅಪ್ಪಯ್ಯ, ಬುಟ್ಟಿಯಂಡ ಎ.ಚಂಗಪ್ಪ, ಹುಚ್ಚಿಮಾಡ ಟಿ.ಸುಬ್ಬಯ್ಯ, ಕೊಂಗಂಡ ಪಿ.ಅಚ್ಚಯ್ಯ, ಪಳಂಗಂಡ ವಾಣಿ ಚಂಗಪ್ಪ ಸಂಸ್ಥೆಯ ಸಂಸ್ಥಾಪಕರಲ್ಲಿ ಒಬ್ಬರಾದ ಸಿ.ಬಿ.ಮುತ್ತಣ್ಣ ಅವರ ಮೊಮ್ಮಗ ಚೆಕ್ಕೆರ ಜಫ್ರಿ ಡಿ.ಗಣಪತಿ, ಪಟ್ರಪಂಡ ಕೆ.ಚಿಣ್ಣಪ್ಪ, ಕುಪ್ಪಂಡ ಎ.ಚಿಣ್ಣಪ್ಪ ಹಾಗೂ ಅಣ್ಣೀರ ಸಜನ್ ಬಿದ್ದಯ್ಯ ಆಯ್ಕೆಯಾಗಿದ್ದಾರೆ.

ಹಿಂದಿನ ಸಾಲಿನ ಅಧ್ಯಕ್ಷರಾದ ಪ್ರೊ.ಇಟ್ಟಿರ ಬಿದ್ದಪ್ಪ ಅವರಿಂದ ಕಾಲೇಜಿನ ನಿರ್ವಹಣೆ ಜವಾಬ್ದಾರಿ ವಹಿಸಿಕೊಂಡ ನಂತರ ಮಾತನಾಡಿದ ಮಂಡೇಪಂಡ ಎಸ್.ಸುಗುಣ ಮುತ್ತಣ್ಣ, ತಾವು ಸಾರ್ವಜನಿಕ ಕ್ಷೇತ್ರದಲ್ಲಿ ಅನೇಕ ವರ್ಷಗಳು ಸೇವೆ ಸಲ್ಲಿಸಿದ ಅನುಭವದ ಆಧಾರದ ಮೇಲೆ ಈ ಪ್ರತಿಷ್ಠಿತ ಕಾವೇರಿ ವಿದ್ಯಾಸಂಸ್ಥೆಯನ್ನು ನಡೆಸಿಕೊಂಡು ಹೋಗುವುದರ ಜೊತೆಗೆ ಇದನ್ನು ಮಾದರಿ ಸಂಸ್ಥೆಯಾಗಿಸುವ ಪ್ರಯತ್ನದಲ್ಲಿ ಸರ್ವ ಸದಸ್ಯರ ಸಲಹೆ– ಸೂಚನೆಯಂತೆ ಕಾರ್ಯೋನ್ಮುಖರಾಗಲಿರುವುದಾಗಿ ತಿಳಿಸಿದರು.



ಕೊಡಗಿನ ಗೋಣಿಕೊಪ್ಪಲು ಕಾವೇರಿ ಎಜುಕೇಷನ್ ಸೊಸೈಟಿಯ ಆಡಳಿತ ಮಂಡಳಿಗೆ ಆಯ್ಕೆಗೊಂಡ ಪದಾಧಿಕಾರಿಗಳು.

ನೂತನ ಅಧ್ಯಕ್ಷರಿಗೆ ಅಧಿಕಾರ ಹಸ್ತಾಂತರಿಸಿದ ನಿಕಟಪೂರ್ವ ಅಧ್ಯಕ್ಷ ಪ್ರೊ.ಇಟ್ಟಿರ ಬಿದ್ದಪ್ಪ ಮಾತನಾಡಿ, ಕಾವೇರಿ ವಿದ್ಯಾ ಸಂಸ್ಥೆಯ ಬೆಳವಣಿಗೆಗೆ ಕಾರಣಕರ್ತರಾದ ಹಿರಿಯರ ಸೇವೆಯ ಶ್ಲಾಘಿಸಿದರು. ಎಂದಿಗೂ ಕಾಲೇಜು ಆವರಣದಲ್ಲಿ ರಾಜಕೀಯ ನುಸುಳಬಾರದು. ಸರ್ವ ಧರ್ಮೀಯರು ವಿದ್ಯಾಭ್ಯಾಸ ಮಾಡುವಂತಹ ಕಾಲೇಜಿನಲ್ಲಿ ಶಿಸ್ತಿಗೆ ಮೊದಲ ಆದ್ಯತೆ ನೀಡುವುದು ಅವಶ್ಯವೆಂದರು.

ಕುಲ್ಲಚಂಡ ಪಿ.ಬೋಪಣ್ಣ ಮಾತನಾಡಿ, 2ನೇ ಅವಧಿಗೆ ಗೌರವ ಕಾರ್ಯದರ್ಶಿಯಾಗಿ ತನ್ನನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ. ನಿರ್ದೇಶಕರು ನನ್ನ ಮೇಲೆ ಇಟ್ಟಿರುವ ವಿಶ್ವಾಸಕ್ಕೆ ಚ್ಯುತಿ ಬಾರದ ಹಾಗೆ ಕರ್ತವ್ಯ ನಿರ್ವಹಿಸುವುದಾಗಿ ಹೇಳಿದರು.

ಉಪಾಧ್ಯಕ್ಷರಾದ ಕುಪ್ಪಂಡ ಮೋತಿ ಬೆಳ್ಯಪ್ಪ ಮಾತನಾಡಿ, ಕಾವೇರಿ ವಿದ್ಯಾ ಸಂಸ್ಥೆಗೆ ಕುಪ್ಪಂಡ ಕುಟುಂಬದ ಕೊಡುಗೆ ಅಪಾರವಾದುದು. ನಾನೀಗ ಉಪಾಧ್ಯಕ್ಷನಾಗಿ ಆಯ್ಕೆಗೊಂಡಿದ್ದು, ಪಾರದರ್ಶಕವಾಗಿ ಸೇವೆ ಸಲ್ಲಿಸುವ ವಿಶ್ವಾಸ ವ್ಯಕ್ತಪಡಿಸಿದರು. ಖಜಾಂಚಿ ಚೊಟ್ಟೆಯಂಡಮಾಡ ಡಿ.ಮಾದಪ್ಪ, ಉತ್ತಮ ಸದಸ್ಯರನ್ನು ಆಡಳಿತ ಮಂಡಳಿ ಹೊಂದಿದ್ದು, ಕಾಲೇಜಿನ ಬೆಳವಣಿಗೆಗೆ ಪೂರಕವಾದ ವಾತಾವರಣವಿದೆ ಎಂದು ಅಭಿಪ್ರಾಯಪಟ್ಟರು. ಕೊನೆಗೆ ಆಡಳಿತ ಮಂಡಳಿಯ ಗೌರವ ಕಾರ್ಯದರ್ಶಿ ಕೆ.ಪಿ.ಬೋಪಣ್ಣ ಸ್ವಾಗತಿಸಿ, ವಂದಿಸಿದರು.

ಮಸೀದಿ, ಮಂದಿರಗಳ ಸಮೀಕ್ಷೆಗೆ ಆದೇಶ ನೀಡದಂತೆ ವಿಚಾರಣಾ ನ್ಯಾಯಾಲಯಗಳಿಗೆ ಸುಪ್ರೀಂಕೋರ್ಟ್ ಆದೇಶ

ನವದೆಹಲಿ, ಡಿ.12– ಪೂಜಾ ಸ್ಥಳಗಳ (ವಿಶೇಷ ನಿಬಂಧನೆ) ಕಾಯಿದೆ 1991ರ ಅಡಿಯಲ್ಲಿ ಮಸೀದಿ, ಮಂದಿರ ಸೇರಿದಂತೆ ಯಾವುದೇ ಧಾರ್ಮಿಕ ಸ್ಥಳಗಳ ಸಮೀಕ್ಷೆ ಸೇರಿದಂತೆ ಯಾವುದೇ ಪರಿಣಾಮಕಾರಿ ಆದೇಶಗಳನ್ನು ನೀಡದಂತೆ ಸುಪ್ರೀಂಕೋರ್ಟ್ ಗುರುವಾರ ದೇಶಾದ್ಯಂತ ವಿಚಾರಣಾ ನ್ಯಾಯಾಲಯಗಳಿಗೆ ನಿರ್ದೇಶನ ನೀಡಿದೆ.



1991ರ ಕಾಯಿದೆಯ ಕೆಲವು ನಿಬಂಧನೆಗಳನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಗಳ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್ ಈ ಆದೇಶ ನೀಡಿದೆ. "ಈ ವಿಷಯವು ನಮ್ಮ ಮುಂದೆ ಇರುವುದರಿಂದ, ಮೊಕದ್ದಮೆಗಳನ್ನು ಸಲ್ಲಿಸಬಹುದಾದರೂ, ಈ ನ್ಯಾಯಾಲಯದ ಮುಂದಿನ ಆದೇಶದವರೆಗೆ ಯಾವುದೇ ಮೊಕದ್ದಮೆಗಳನ್ನು ನೋಂದಾಯಿಸಲಾಗುವುದಿಲ್ಲ ಮತ್ತು ಮುಂದಿನ ಆದೇಶದವರೆಗೆ ಪ್ರಕ್ರಿಯೆಗಳನ್ನು ಕೈಗೊಳ್ಳಲಾಗುವುದಿಲ್ಲ. ಬಾಕಿ ಇರುವ ಮೊಕದ್ದಮೆಗಳಲ್ಲಿ, ನ್ಯಾಯಾಲಯಗಳು ಪರಿಣಾಮಕಾರಿ ಮತ್ತು ಅಂತಿಮ ಆದೇಶಗಳನ್ನು ನೀಡುವಂತಿಲ್ಲ "ಎಂದು ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ನೇತೃತ್ವದ ಪೀಠ ಹೇಳಿದೆ.

ಮುಂದಿನ ವಿಚಾರಣೆಯ ದಿನಾಂಕದವರೆಗೆ ಸಮೀಕ್ಷೆಗಳು ಸೇರಿದಂತೆ ಯಾವುದೇ ಪರಿಣಾಮಕಾರಿ ಆದೇಶಗಳನ್ನು ರವಾನಿಸಬಾರದು ಎಂದು ಪೀಠ ತೀರ್ಪು ನೀಡಿದೆ.

ಕೇಂದ್ರ ಸರ್ಕಾರ ಈ ಬಗ್ಗೆ ತನ್ನ ಪ್ರತಿಕ್ರಿಯೆಯನ್ನು ಸಲ್ಲಿಸುವವರೆಗೆ ಯಾವುದೇ ವಿಚಾರಣೆ ನಡೆಸುವುದಿಲ್ಲ ಎಂದು ಸುಪ್ರೀಂಕೋರ್ಟ್ ಹೇಳಿದ್ದು, ಸಾಲಿಸಿಟರ್ ಜನರಲ್ ಅವರು ಶೀಘ್ರದಲ್ಲೇ ಪ್ರತಿಕ್ರಿಯೆಯನ್ನು ಸಲ್ಲಿಸಲಾಗುವುದು ಎಂದು ನ್ಯಾಯಾಲಯಕ್ಕೆ ಭರವಸೆ ನೀಡಿದರು.

ವಾರಣಾಸಿಯ ಜ್ಞಾನವಾಪಿ ಮಸೀದಿ ಮತ್ತು ಮಥುರಾದ ಶಾಹಿ ಈದ್ಗಾ ಮಸೀದಿ ಸೇರಿದಂತೆ ಧಾರ್ಮಿಕ ಸ್ಥಳಗಳ ಮಾಲೀಕತ್ವವನ್ನು ಪ್ರಶ್ನಿಸಿ ದೇಶದ ವಿವಿಧ ನ್ಯಾಯಾಲಯಗಳಲ್ಲಿ ಸಲ್ಲಿಸಲಾದ ಕನಿಷ್ಠ ಹತ್ತು ಅರ್ಜಿಗಳ ಮೇಲೆ ಈ ಆದೇಶ ಪರಿಣಾಮ ಬೀರುತ್ತದೆ.

ಆಗಸ್ಟ್ 15, 1947ರಂದು ಇದ್ದಂತೆ ಯಾವುದೇ ಪೂಜಾ ಸ್ಥಳದ ಧಾರ್ಮಿಕ ಸ್ವರೂಪವು ಬದಲಾಗದೆ ಉಳಿಯುತ್ತದೆ ಎಂದು ಪೂಜಾ ಸ್ಥಳಗಳ ಕಾಯಿದೆಯು ಸೂಚಿಸುತ್ತದೆ. ಅಂತಹ ಸೈಟ್‌ಗಳ ಸ್ವರೂಪವನ್ನು ಮರುಪಡೆಯಲು ಅಥವಾ ಬದಲಾಯಿಸಲು ಮೊಕದ್ದಮೆಗಳನ್ನು ಸಲ್ಲಿಸುವುದನ್ನು ಕಾಯಿದೆಯು ನಿಷೇಧಿಸುತ್ತದೆ. ಈ ಕಾಯ್ದೆಯನ್ನು ಪ್ರಶ್ನಿಸಿ ವಕೀಲ ಅಶ್ವಿನಿ ಉಪಾಧ್ಯಾಯ ಅವರು ಸಲ್ಲಿಸಿರುವ ಅರ್ಜಿ ಸೇರಿದಂತೆ ಹಲವು ಅರ್ಜಿಗಳು ಸುಪ್ರೀಂಕೋರ್ಟ್‌ನಲ್ಲಿ ಬಾಕಿ ಉಳಿದಿವೆ.

ಮೈಸೂರಲ್ಲಿ ತುಂತುರು ಮಳೆ; ಇಂದು ಸಾಧಾರಣ ಮಳೆ ಸಂಭವ



ಮೈಸೂರು,ಡಿ.12(ಪಿಎಂ)– ಮೈಸೂರು ನಗರದಲ್ಲಿ ಗುರುವಾರ ಸಂಜೆ ಸಾಧಾರಣದಿಂದ ಕೂಡಿದ ತುಂತುರು ಮಳೆಯಾಗಿದೆ. ಅಂತೆಯೇ ಶುಕ್ರವಾರ ಮೈಸೂರು, ಕೊಡಗು, ಹಾಸನ, ಮಂಡ್ಯ, ಚಾಮರಾಜನಗರ, ತುಮಕೂರು ಹಾಗೂ ಚಿಕ್ಕಮಗಳೂರು ಜಿಲ್ಲೆಗಳ ಒಂದೆರಡು ಕಡೆಗಳಲ್ಲಿ ಹಗುರದಿಂದ ಕೂಡಿದ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ ಎಂದು ಭಾರತ ಹವಾಮಾನ ಇಲಾಖೆಯ ಬೆಂಗಳೂರು ಹವಾಮಾನ ಕೇಂದ್ರದ ವರದಿ ತಿಳಿಸಿದೆ.

ಗುರುವಾರ ಪ್ರಕಟಿಸಿರುವ ದೈನಂದಿನ ವರದಿಯಲ್ಲಿ ಈ ಅಂಶಗಳನ್ನು ಉಲ್ಲೇಖಿಸಲಾಗಿದೆ. ಅದರಂತೆ ಶುಕ್ರವಾರ ಕರಾವಳಿಯ ಕೆಲವು ಕಡೆಗಳಲ್ಲಿಯೂ ಹಗುರದಿಂದ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ. ದಕ್ಷಿಣ ಒಳನಾಡಿನ ಉಳಿದ ಜಿಲ್ಲೆಗಳ ಒಂದೆರಡು ಕಡೆಗಳಲ್ಲಿ ಹಗುರ ಮಳೆಯಾಗುವ ಸಾಧ್ಯತೆ ಇದೆ. ಉತ್ತರ ಒಳನಾಡಿನಲ್ಲಿ ಒಣಹವೆ ಇರುವ ಸಾಧ್ಯತೆ ಇದೆ. ಡಿ.14, 15 ಮತ್ತು 16ರಂದು ರಾಜ್ಯಾದ್ಯಂತ ಒಣಹವೆ ಇರುವ ಸಾಧ್ಯತೆ ಇದೆ. ಉತ್ತರ ಒಳನಾಡಿನ ಒಂದೆರಡು ಕಡೆಗಳಲ್ಲಿ ಹಗುರ ಮಂಜು ಕವಿಯುವ ಸಾಧ್ಯತೆ ಇದೆ.

ಸೋಮವಾರ ನಂತರ ಭತ್ತ ಕೊಯ್ಲು ಸೂಕ್ತ: 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ನಾಗನಹಳ್ಳಿ ಸಾವಯವ ಕೃಷಿ ಸಂಶೋಧನಾ ಕೇಂದ್ರದ ನಿವೃತ್ತ ಪ್ರಾಧ್ಯಾಪಕ ಪ್ರೊ.ಗೋವಿಂದರಾಜು, ಫೆಂಗಲ್ ಚಂಡಮಾರುತ ಮುಂದುವರೆದಿರುವ ಹಿನ್ನೆಲೆಯಲ್ಲಿ ಮೈಸೂರು ಹಾಗೂ ನೆರೆ ಜಿಲ್ಲೆಗಳಲ್ಲಿಯೂ ಇನ್ನು ಮೂರು ದಿನಗಳು ಮಳೆ ಸಾಧ್ಯತೆ ಇದೆ. ಮೈಸೂರು ಮತ್ತು ನೆರೆ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಸೋಮವಾರದ ನಂತರ ಭತ್ತ ಕೊಯ್ಲು ಮಾಡಿದರೆ ಸೂಕ್ತವಾಗುತ್ತದೆ. ಇಲ್ಲವಾದರೆ ಮೊಳಕೆ ಬರುವುದು ಹಾಗೂ ಭತ್ತ ಉದುರುವ ಸಮಸ್ಯೆ ಎದುರಿಸಬೇಕಾಗುತ್ತದೆ. ಇದರಿಂದ ನಷ್ಟ ಅನುಭವಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಸೋಮವಾರದ ನಂತರದಲ್ಲಿ ಭತ್ತ ಕೊಯ್ಲು ಮಾಡಿಕೊಳ್ಳುವುದು ಒಳ್ಳೆಯದು. ತುಂತುರು ಮಳೆಯಾದ್ದರಿಂದ ಕೊಯ್ಲು ಮಾಡಿದರೂ ನೆನೆಯದಂತೆ ಸಂಗ್ರಹ ಮಾಡುವುದು ಮುಖ್ಯ. ಕೊಯ್ಲು ನಂತರ ಮೂರು ದಿನಗಳ ಒಳಗೆ ಭತ್ತ ಬಡಿಯಬೇಕು. ದೀರ್ಘಾವಧಿ ತಳಿಯಾದರೆ ವಾರದವರೆಗೂ ಬಡಿಯದೇ ಶೇಖರಣೆ ಮಾಡಿಕೊಳ್ಳಬಹುದು. ಅಲ್ಪಾವಧಿ ತಳಿಗಳಾದರೆ ಭತ್ತ ಬೇಗ ಉದುರಲಿವೆ ಎಂದು ಹೇಳಿದರು.

ಮೈಸೂರು ವಿಮಾನ ನಿಲ್ದಾಣದಲ್ಲಿ ತುರ್ತು ಪರಿಸ್ಥಿತಿ ನಿರ್ವಹಣೆ ಅಣಕು ಕಾರ್ಯಾಚರಣೆ



ಮೈಸೂರು, ಡಿ.12(ಆರ್‌ಕೆ)–ತುರ್ತು ಸಂದರ್ಭದಲ್ಲಿ ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ಇಂದು ಸಂಜೆ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಅಣಕು ಪ್ರದರ್ಶನ ನಡೆಸಲಾಯಿತು.

ನಾಗರಿಕ ವಿಮಾನ ಯಾನದ ಡೈರೆಕ್ಟೋರೇಟ್ ಜನರಲ್ (DGCA) ಸಲಹೆಯಂತೆ ಮೈಸೂರು ವಿಮಾನ ನಿಲ್ದಾಣದಲ್ಲಿ ಸಂಭವಿಸಬಹುದಾದ ತುರ್ತು ಸಂದರ್ಭವನ್ನು ಯಶಸ್ವಿಯಾಗಿ ನಿರ್ವಹಿಸಬೇಕಾದ ಕಾರ್ಯಾಚರಣೆ ಬಗ್ಗೆ ಅಣಕು ಪ್ರದರ್ಶನ ನಡೆಸಲಾಯಿತು.

ಫೈರ್ ಸೇಫ್ಟಿ ಮ್ಯಾನ್ಯುಯಲ್ ಮತ್ತು ಏರೋಡ್ರಮ್ ಎಮರ್ಜೆನ್ಸಿ ಪ್ಲಾನ್ ಬಗ್ಗೆ ಸ್ಟೇಕ್ ಹೋಲ್ಡರ್ಸ್, ಟೆಸ್ಟ್ ಕಮ್ಯುನಿಕೇಷನ್ ಸಿಸ್ಟಮ್ಸ್, ರಿಸೋರ್ಸಸ್, ಪ್ರೊಸೀಜರ್ಸ್ ಕುರಿತಂತೆ ಇಂದು ನಡೆದ ಅಣಕು ಪ್ರದರ್ಶನದಲ್ಲಿ ಪ್ರಸ್ತುತಪಡಿಸಲಾಯಿತು.

ವಿಮಾನ ಇಳಿಯುವಾಗ ಮತ್ತು ಹಾರುವ ಸಂದರ್ಭ ಬೆಂಕಿ ಕಾಣಿಸಿಕೊಂಡಲ್ಲಿ ಅಥವಾ ವಿಮಾನದ ಎಂಜಿನ್‌ನಲ್ಲಿ ತಾಂತ್ರಿಕ ತೊಂದರೆ ಕಾಣಿಸಿಕೊಂಡಾಗ ಪ್ರಯಾಣಿಕರ ಸುರಕ್ಷತೆಗೆ ಕೈಗೊಳ್ಳಬೇಕಾದ ಕ್ಷಿಪ್ರ ಕಾರ್ಯಾಚರಣೆಯ ಅಣಕು ಪ್ರದರ್ಶನದಲ್ಲಿ ತೋರಿಸಲಾಯಿತು.

ವಿಮಾನ ನಿಲ್ದಾಣದ ರಕ್ಷಣೆ, ಫೈರ್ ಫೈಟಿಂಗ್ ಸರ್ವೀಸಸ್, ಸಂಚಾರ ನಿಯಂತ್ರಣ, ಏರ್‌ಪೋರ್ಟ್ ಟರ್ಮಿನಲ್ ಮ್ಯಾನೇಜ್‌ಮೆಂಟ್, ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ, ಅಗ್ನಿಶಾಮಕ ದಳ, ಪೊಲೀಸ್ ಘಟಕ, ಆರೋಗ್ಯ ಇಲಾಖೆ, ಆಸ್ಪತ್ರೆಗಳಲ್ಲಿ ಸಿದ್ಧತೆ, ಕ್ರೌಡ್ ಕಂಟ್ರೋಲ್, ಕ್ಷಿಪ್ರ ಕಾರ್ಯಾಚರಣೆ ತಂಡಗಳು ನಿರ್ವಹಿಸಬೇಕಾದ ತುರ್ತು ಕಾರ್ಯದ ಬಗ್ಗೆಯೂ ಮಾಕ್‌ಡ್ರಿಲ್‌ನಲ್ಲಿ ಪ್ರಸ್ತುತಪಡಿಸಲಾಯಿತು.

ಏರ್‌ಪೋರ್ಟ್ ಸೆಕ್ಯೂರಿಟಿ, ಅಗ್ನಿಶಾಮಕ ಸೇವೆ ಹಾಗೂ ಆಸ್ಪತ್ರೆಗಳ ಕಾರ್ಯ, ಇಲಾಖೆಗಳ ನಡುವಿನ ಸಮನ್ವಯತೆ, ಸಾವು–ನೋವುಗಳನ್ನು ತಡೆಗಟ್ಟಲು ಕೈಗೊಳ್ಳಬೇಕಾದ ಕ್ರಮಗಳು, ಪೊಲೀಸ್ ಹಾಗೂ ಜಿಲ್ಲಾಡಳಿತದ ಸಹಕಾರ ಕುರಿತು ಇಂದಿನ ಅಣಕು ಪ್ರದರ್ಶನದಲ್ಲಿ ಜಾಗೃತಿ ಮೂಡಿಸಲಾಯಿತು.

ಮೈಸೂರು ರಿಂಗ್ ರಸ್ತೆಗೆ ಎಸ್.ಎಂ.ಕೃಷ್ಣ ಹೆಸರಿಡಿ

ವಿಧಾನಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಆಗ್ರಹ

ಮೈಸೂರು, ಡಿ.12(ಆರ್‌ಕೆ)–ಮೈಸೂರಿನ ಹೊರ ವರ್ತುಲ ರಸ್ತೆ (ರಿಂಗ್ ರೋಡ್) ಅಭಿವೃದ್ಧಿಗೆ ಕಾರಣರಾದ ಮಾಜಿ ಮುಖ್ಯಮಂತ್ರಿ ದಿವಂಗತ ಎಸ್.ಎಂ.ಕೃಷ್ಣ ಅವರ ಹೆಸರನ್ನು ಈ ರಸ್ತೆಗೆ ನಾಮಕರಣ ಮಾಡಿ, ಫಲಕ ಅಳವಡಿಸಬೇಕೆಂದು ವಿಧಾನಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಸರ್ಕಾರವನ್ನು ಒತ್ತಾಯಿಸಿದ್ದಾರೆ.


ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಇಂದು ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ರಿಂಗ್ ರೋಡ್ ನಿರ್ಮಿಸಿ ಮೈಸೂರಿನ ಬೆಳವಣಿಗೆಗೆ ನಾಂದಿ ಹಾಡಿದ ಎಸ್.ಎಂ.ಕೃಷ್ಣ, ಮೈಸೂರನ್ನು ಪಾರಂಪರಿಕ ನಗರವನ್ನಾಗಿ ಘೋಷಿಸಿದ್ದರು. ಆದರೆ ಇಂದು ಇಲ್ಲಿನ ಪಾರಂಪರಿಕ ಕಟ್ಟಡ ಹಾಗೂ ಸ್ಮಾರಕಗಳು ಪಾಳು ಬಿದ್ದಿವೆ ಎಂದು ವ್ಯಂಗ್ಯವಾಡಿದರು.

ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ಅಂತ್ಯಕ್ರಿಯೆಯನ್ನು ಗೌರವಯುತವಾಗಿ ನೆರವೇರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಧನ್ಯವಾದ ತಿಳಿಸಿದ ವಿಶ್ವನಾಥ್, ಆದರೆ, ಹೈಕಮಾಂಡ್ ನಡೆ ಬಗ್ಗೆ ಬೇಸರ ವ್ಯಕ್ತಪಡಿಸಿದ್ದಾರೆ.

ಸೋನಿಯಾ ನಿಲುವಿಗೆ ಬೇಸರ: ಎಐಸಿಸಿ ಮಾಜಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಎಸ್.ಎಂ.ಕೃಷ್ಣ ನಿಧನಕ್ಕೆ ಸಂತಾಪ ಸೂಚಿಸಿಲ್ಲ, ಕಂಬನಿ ಮಿಡಿಯಲಿಲ್ಲ. ಹಾಗಾದರೆ ಕೃಷ್ಣ ಅವರು ಕಾಂಗ್ರೆಸ್ಸಿಗೆ ದುಡಿದಿಲ್ಲವೇ? ಎಂದು ಪ್ರಶ್ನಿಸಿದ ಅವರು, ಸಾವಿನಲ್ಲಿ ರಾಜಕಾರಣ ಮಾಡಬಾರದಿತ್ತು. ಬಿಜೆಪಿಗೆ ಸೇರಿದರು ಎಂಬ ಕಾರಣಕ್ಕಾಗಿ ಸಂತಾಪ ಸೂಚಿಸದಿರುವುದು ಸರಿಯಲ್ಲ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.



ದಿ.ಎಸ್.ಎಂ.ಕೃಷ್ಣ



ಎ.ಹೆಚ್.ವಿಶ್ವನಾಥ್

ವಿ.ಪಿ.ಸಿಂಗ್, ಪಿ.ವಿ.ನರಸಿಂಹರಾವ್, ಚಂದ್ರಶೇಖರ್, ಹಿಂದುಳಿದ ವರ್ಗಗಳ ಅಭಿವೃದ್ಧಿ ಹರಿಕಾರರಾಗಿದ್ದ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರು ನಿಧನರಾದಾಗಲೂ ಕಾಂಗ್ರೆಸ್ ಹೈಕಮಾಂಡ್ ಸಂತಾಪ ಸೂಚಿಸಿರಲಿಲ್ಲ. ಎಸ್.ಎಂ.ಕೃಷ್ಣ ಅವರು ಎಂದೂ ದ್ವೇಷದ ರಾಜಕಾರಣ ಮಾಡಿದವರಲ್ಲ. ಬದಲಾಗಿ ಅಭಿವೃದ್ಧಿ ಹರಿಕಾರರಾಗಿದ್ದರು ಎಂದು ವಿಶ್ವನಾಥ್ ನುಡಿದರು.

ಈ ರಾಜ್ಯದಲ್ಲಿ ಐಟಿ–ಬಿಟಿ ಕಂಪನಿಗಳ ಬೆಳವಣಿಗೆಗೆ ಎಸ್.ಎಂ.ಕೃಷ್ಣ ಕಾರಣರಾಗಿದ್ದಾರೆ. ಆದರೆ ಅವರ್‍ಯಾರೂ ನೆನಪು ಮಾಡಿಕೊಳ್ಳಲಿಲ್ಲ. ಮೈಸೂರಲ್ಲಿ ಇನ್‌ಫೋಸಿಸ್‌ನಂತಹ ದೊಡ್ಡ ದೊಡ್ಡ ಕಂಪನಿಗಳು ಬರಲು ಶ್ರಮಿಸಿದ್ದ ಧೀಮಂತ ನಾಯಕನನ್ನು ಐಟಿ–ಬಿಟಿ ಕಂಪನಿಗಳು ನೆನಪಿಸಿಕೊಳ್ಳದಿರುವುದು ವಿಷಾದನೀಯ ಎಂದು ಅವರು ತಿಳಿಸಿದರು.

ಬಿಸಿಯೂಟ ಯೋಜನೆಯಲ್ಲಿ ರಾಜ್ಯದಾದ್ಯಂತ 84 ಲಕ್ಷ ಶಾಲಾ ಮಕ್ಕಳು ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದಾರೆ. ಸ್ತ್ರೀಶಕ್ತಿ ಸಂಘಗಳ ಮೂಲಕ ಲಕ್ಷಾಂತರ ಮಹಿಳೆಯರು ಆರ್ಥಿಕವಾಗಿ ಸಬಲರಾಗಿದ್ದಾರೆ. ಪಂಚಮಸಾಲಿ ಲಿಂಗಾಯತರಿಗೆ 2ಎ ಮೀಸಲಾತಿ ಕೊಡುವ ವಿಚಾರ ಮುಗಿದುಹೋಗಿದೆ. ಎಂ.ವೀರಪ್ಪ ಮೊಯ್ಲಿ ಅವಧಿಯಲ್ಲೇ 15 ಸಮುದಾಯಗಳನ್ನು 2ಎಗೆ ಸೇರಿಸಲಾಗಿತ್ತು. ಈಗ 45 ಸಮುದಾಯಗಳು ಇದರಡಿ ಬರುತ್ತಿವೆ ಎಂದು ವಿಶ್ವನಾಥ್ ನುಡಿದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಕೇವಲ ಸಂವಿಧಾನದ ಬಗ್ಗೆ ಮಾತನಾಡುತ್ತಾರೆ. 2ಎ ಮೀಸಲಾತಿ ಬಗ್ಗೆಯೂ ರಿವ್ಯೂ ಮಾಡಬೇಕು ಎಂದ ಅವರು, ಈ ಬಗ್ಗೆ ತಾವು ಬಸವ ಜಯಮೃತ್ಯುಂಜಯ ಸ್ವಾಮೀಜಿ ಅವರಿಗೆ ಮನವಿ ಮಾಡಿಕೊಳ್ಳುತ್ತೇನೆ ಎಂದರು. ಹುಣಸೂರಿನ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಅವರು ತಮ್ಮ ಕುಟುಂಬದ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿರುವ ಬಗ್ಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದ ವಿಶ್ವನಾಥ್, ನನ್ನ ಕುಟುಂಬದ ಬಗ್ಗೆ ಮಾತನಾಡಿದರೆ ತಕ್ಕ ಶಾಸ್ತಿ ಮಾಡುವುದಾಗಿ ತಿಳಿಸಿದರು.

ಮೈಸೂರು ರಿಂಗ್ ರಸ್ತೆಗೆ 'ಎಸ್.ಎಂ.ಕೃಷ್ಣ ರಸ್ತೆ' ನಾಮಕರಣವಾಗಿತ್ತು

ಪಾಲಿಕೆ ನಿರ್ಣಯ ಅನುಷ್ಠಾನಕ್ಕೆ ತರದ ಅಧಿಕಾರಿಗಳು

ಮೈಸೂರು, ಡಿ.12(ಎಸ್‌ಬಿಡಿ)– ಮೈಸೂರಿನ ಹೊರವರ್ತುಲ ರಸ್ತೆ(ರಿಂಗ್ ರೋಡ್)ಗೆ ಮಾಜಿ ಮುಖ್ಯಮಂತ್ರಿ ದಿವಂಗತ ಎಸ್.ಎಂ.ಕೃಷ್ಣ ಅವರ ಹೆಸರನ್ನು ನಾಮಕರಣ ಮಾಡುವ ನಗರಪಾಲಿಕೆ ನಿರ್ಣಯವನ್ನು ಅನುಷ್ಠಾನಗೊಳಿಸುವಂತೆ ಮಾಜಿ ಮೇಯರ್ ಸಂದೇಶ್ ಸ್ವಾಮಿ ಆಗ್ರಹಿಸಿದ್ದಾರೆ.

ನಾನು ಮೇಯರ್ ಆಗಿದ್ದಾಗ 2011ರ ಮಾರ್ಚ್ 10ರಂದು ನಾಮಕರಣ ಸಮಿತಿ ರಚಿಸಿ, ರಿಂಗ್ ರಸ್ತೆಗೆ 'ಎಸ್.ಎಂ.ಕೃಷ್ಣ ರಸ್ತೆ' ಎಂದು ನಾಮಕರಣ ಮಾಡಲು ನಿರ್ಣಯ ಕೈಗೊಳ್ಳಲಾಗಿತ್ತು. ಆದರೆ ದಶಕ ಕಳೆದರೂ ರಸ್ತೆಗೆ ನಾಮಫಲಕ ಅಳವಡಿಸದೆ ಅಧಿಕಾರಿಗಳು ನಿರ್ಲಕ್ಷ್ಯ ತೋರಿರುವುದು ಖಂಡನೀಯ. ಈ ಕೂಡಲೇ ಪಾಲಿಕೆ ನಿರ್ಣಯವನ್ನು ಅನುಷ್ಠಾನಗೊಳಿಸಲು ಪಾಲಿಕೆ ಆಯುಕ್ತರು ಅಧಿಕಾರಿಗಳಿಗೆ ಸೂಚನೆ ನೀಡಬೇಕು ಎಂದು ತಿಳಿಸಿದ್ದಾರೆ.



ಮೈಸೂರಿನ ರಿಂಗ್ ರಸ್ತೆ ಎಸ್.ಎಂ. ಕೃಷ್ಣ ಅವರ ಕೊಡುಗೆ. ಅವರು ಮುಖ್ಯಮಂತ್ರಿಯಾಗಿದ್ದಾಗ 2003ರಲ್ಲಿ ರಿಂಗ್ ರಸ್ತೆ ನಿರ್ಮಾಣಕ್ಕೆ ಚಾಲನೆ ನೀಡಿ, ಅಗತ್ಯ ಅನುದಾನದ ಜೊತೆಗೆ ಎಲ್ಲಾ ರೀತಿಯ ನೆರವು ನೀಡಿದರು. ಆ ವೇಳೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದ ಅಧ್ಯಕ್ಷರಾಗಿದ್ದ ನನ್ನ ಸಹೋದರರಾದ ಸಂದೇಶ್ ನಾಗರಾಜು ಅವರ ಪರಿಶ್ರಮದಿಂದ ಎಸ್.ಎಂ.ಕೃಷ್ಣ ಅವರ ಅಧಿಕಾರಾವಧಿಯಲ್ಲೇ ರಿಂಗ್ ರಸ್ತೆ ಕಾಮಗಾರಿ ಬಹುತೇಕ ಪೂರ್ಣಗೊಂಡು, ಉದ್ಘಾಟನೆಯನ್ನೂ ನೆರವೇರಿಸಿದ್ದು ವಿಶೇಷ. ಕೃಷ್ಣ ಅವರ ಕೊಡುಗೆಯಾದ ರಿಂಗ್ ರಸ್ತೆಯಿಂದ ನಗರ ವ್ಯಾಪ್ತಿಯ ಸಂಚಾರ ನಿರ್ವಹಣೆಗೆ ಎಷ್ಟೊಂದು ಅನುಕೂಲವಾಗಿದೆ ಎಂಬುದನ್ನು ಮರೆಯಬಾರದು ಎಂದು ಹೇಳಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಗುಂಡ ಒಂದೇ ಉಸಿರಿನಲ್ಲಿ ಬಂದು

ಗುಂಡ : ಸಾರ್ ನನ್ನ ಹೆಂಡತಿ ನಿನ್ನೆ ರಾತ್ರಿಯಿಂದ ಕಾಣ್ತಾಯಿಲ್ಲ.

ಪೋಸ್ಟ್ ಆಫೀಸರ್ : ನಿನ್ನ ಹೆಂಡತಿ ಕಳೆದು ಹೋದರೆ ಪೊಲೀಸ್ ಸ್ಟೇಷನ್‌ನಲ್ಲಿ ಕಂಪ್ಲೇಂಟ್ ಕೊಡು. ಪೋಸ್ಟ್ ಆಫೀಸ್‌ಗೆ ಯಾಕೆ ಬಂದಿದ್ದೀಯಾ.

ಗುಂಡ : ಓ ಓ ಸಾರಿ ಸಾರ್. ನನ್ ಮಗಂದ್...ಖುಷಿಲಿ ಎಲ್ಲಿಗೆ ಹೋಗಬೇಕು, ಏನ್ ಮಾಡಬೇಕು ಅಂತ ಗೊತ್ತಾಗಿಲ್ಲ ಸಾರ್...!

ಮೈಸೂರು ಮಿತ್ರ

ಶುಕ್ರವಾರ, 13 ಡಿಸೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಪ್ರೀತಿಸುವವರನ್ನು ಪಡೆಯುವುದು ಕಠಿಣ, ಅದಕ್ಕೂ ಕಠಿಣ ಕೆಡದಂತೆ ಪ್ರೀತಿಯ ಕಾಯ್ದುಕೊಂಡು ಹೋಗುವುದು. –ಸಿದ್ದಯ್ಯ ಪುರಾಣಿಕ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ದೂರವಿದ್ದ ಮಗನಿಗೂ, ಹತ್ತಿರವಿದ್ದ ಮಗನಿಗೂ ಸರಿಬಾರದು.

ನಿಮ್ಮ ಪತ್ರಗಳು

ಸಾಹಿತ್ಯ ಸಮ್ಮೇಳನ ಮತ್ತು ಬಾಡೂಟದ ಬಡಿದಾಟ

ಮಾನ್ಯರೆ,

'ಬೇಳೆ ಜೊತೆಗೆ ಮೂಳೆ; ಹಪ್ಪಳದೊಂದಿಗೆ ಕಬಾಬ್; ಕೋಸಂಬರಿ ಜೊತೆ ಎಗ್‌ಬುರ್ಜಿ; ಮುದ್ದೆಯೊಂದಿಗೆ ಬೋಟಿ' ಇದು ಮಂಡ್ಯದಲ್ಲಿ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಊಟದ ಬಗ್ಗೆ ಮಂಡ್ಯ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರೆಂದು ಕೊಂಡಿರುವವರ ಕೂಗು. ವ್ಯವಸ್ಥೆಗೆ ವಿರುದ್ಧವಾಗಿ ಕೂಗುವವರು ಪ್ರಗತಿಪರರಾಗುತ್ತಾರೆ!!? ಆಹಾರ ಪದ್ಧತಿ ಅವರವರ ವೈಯಕ್ತಿಕ ವಿಷಯ. ಆದರೆ ಸರ್ವ ಜನಾಂಗದವರು, ಸರ್ವ ಧರ್ಮದವರೂ ಸೇರುವಂತಹ ಸಭೆ–ಸಮಾರಂಭಗಳಲ್ಲಿ ಸರ್ವರಿಗೂ ಒಪ್ಪಿತವಾಗುವಂತಹ ಆಹಾರವಿದ್ದಲ್ಲಿ ಸೂಕ್ತ. ಈ ನಾಡಿನಲ್ಲಿರುವ ಕನ್ನಡಿಗರಲ್ಲಿ ಕನ್ನಡ ಸಾಹಿತ್ಯವನ್ನು ಬಲ್ಲವರು ಹಾಗೂ ಅದರಲ್ಲಿ ತೊಡಗಿಕೊಂಡಿರುವ ಹೋರಾಟಗಾರರು ಹಲವಾರು ಜನಾಂಗ, ಧರ್ಮ, ಜಾತಿ, ಪಂಗಡಕ್ಕೆ ಸೇರಿದವರು ಇದ್ದಾರೆ. ಅವರುಗಳೆಲ್ಲಾ ಅವರವರು ಸೇವಿಸುವ ವಿವಿಧ ರೀತಿಯ ಪ್ರಾಣಿಗಳ ಆಹಾರ ಪೂರೈಸುವಂತೆ ಒತ್ತಾಯ ಮಾಡುವುದಾದರೆ ಈಗ ನಾವೇ ಮಾಂಸದೂಟ ಹಾಕಿಸುತ್ತೇವೆ ಎಂದು ಅಭಿಯಾನಕ್ಕೆ ಸಿದ್ಧವಾಗಿರುವವರ ಮೆನುವಿನಲ್ಲಿ ಇರುವ ಮೊದಲನೇ ದಿನ ಮೊಟ್ಟೆ, ಎರಡನೇ ದಿನ ನಾಟಿ ಕೋಳಿ ಮುದ್ದೆ, ಮೂರನೇ ದಿನ ಚಿಕನ್ ಬಿರಿಯಾನಿಯನ್ನು ಒಪ್ಪುತ್ತಾರೆಯೇ? ಹಾಗಾಗಿ ಸರ್ವರ ಸೇವನೆಗೂ ಯೋಗ್ಯವಾಗುವಂತಹ ಸಸ್ಯಹಾರ ಸೂಕ್ತ ಹಾಗೂ ಸಮಂಜಸ. ಇದು ಯಾರ ಆಹಾರ ಪದ್ಧತಿಯ ವಿರುದ್ಧವೂ ಅಲ್ಲ, ಪರವೂ ಅಲ್ಲ. ಅಲ್ಲದೇ ಇದು ಕನ್ನಡ ಸಾಹಿತ್ಯ ಸಮ್ಮೇಳನ. ಚರ್ಚಿತವಾಗಬೇಕಾಗಿರುವುದು ಕನ್ನಡ ಭಾಷೆ, ಗಡಿ, ಸಾಹಿತ್ಯ ಮತ್ತು ಅದರ ಬೆಳವಣಿಗೆ ಬಗ್ಗೆಯೇ ಹೊರತು ಆಹಾರ ಪ್ರಮುಖವಾಗಬಾರದು. ಮೂರು ದಿವಸ ಬಾಡೂಟ ಇಲ್ಲದಿದ್ದರೆ ಬಾಡೂಟ ಸೇವಿಸುವವರ ಆರೋಗ್ಯದಲ್ಲೇನೂ ವ್ಯತ್ಯಾಸವಾಗುವುದಿಲ್ಲ. ಆದಾಗ್ಯೂ ಮಾಂಸಹಾರಿಗಳು ಪ್ರತಿ ದಿನವೂ ಬಾಡೂಟ ಸೇವಿಸುವುದಿಲ್ಲ. ಬಾಡೂಟ ಮತ್ತು ಸಸ್ಯಹಾರ ಎರಡಕ್ಕೂ ಹೋಲಿಸಿದಾಗ ಅವರು ಹೆಚ್ಚು ಸೇವಿಸುವುದು, ಎಲ್ಲಾ ಕಡೆಯೂ ಸೇವಿಸುವುದು ಸಸ್ಯಹಾರವೇ ಹೊರತು ಮಾಂಸಹಾರವಲ್ಲ. ಆದುದರಿಂದ ಇದನ್ನು ಪ್ರತಿಷ್ಠೆಯಾಗಿ ತೆಗೆದುಕೊಳ್ಳದೇ ಬಾಡೂಟಕ್ಕೆ ಬಡಿದಾಡದೆ ಸರ್ವರ ಹಿತ ಹಾಗೂ ಸಮ್ಮೇಳನದ ಯಶಸ್ಸು ದೃಷ್ಟಿಯಿಂದ ಎಲ್ಲರೂ ಸಹಕಾರ ನೀಡುವುದು ಅವಶ್ಯ.

–ಕೆ.ಎಂ. ನಾಗರಾಜು, ವಿಜಯನಗರ 1ನೇ ಹಂತ, ಮೈಸೂರು

ಈ ರಸ್ತೆಯಲ್ಲಿ ಫುಟ್‌ಪಾತ್ ಮುಕ್ತವಾಗಲಿ



ಮಾನ್ಯರೆ,

ಮೈಸೂರಿನ ಉದಯರವಿ ರಸ್ತೆಯ ಇಸ್ಕಾನ್ ದೇವಾಲಯದಿಂದ ಅಗರವಾಲ್ ಕಣ್ಣಿನ ಆಸ್ಪತ್ರೆವರೆಗಿನ ರಸ್ತೆಯ ಇಕ್ಕೆಲಗಳಲ್ಲಿ ಸಾರ್ವಜನಿಕರು ಓಡಾಡಲು ಫುಟ್‌ಪಾತ್ ವ್ಯವಸ್ಥೆ ಇಲ್ಲದೇ ಸಾರ್ವಜನಿಕರಿಗೆ ತೊಂದರೆಯಾಗಿದೆ. ಮುಖ್ಯವಾಗಿ ಈ ರಸ್ತೆಯ ಇಕ್ಕೆಲಗಳಲ್ಲಿ ಸಾರ್ವಜನಿಕರು ಕಸತಂದು ಹಾಕುವುದರಿಂದ ಹಂದಿಗಳ ಕಾಟ ಹೆಚ್ಚಾಗಿದೆ ಮತ್ತು ಈ ರಸ್ತೆಯ ಇಕ್ಕೆಲಗಳು ಬಯಲು ಶೌಚಾಲಯವಾಗಿದೆ. ಈ ರಸ್ತೆಯಲ್ಲಿ ಕೂಡಲೇ ಸಾರ್ವಜನಿಕರ ಸುಗಮ ಸಂಚಾರಕ್ಕೆ ಮುಕ್ತವಾಗಲಿ. –ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.

ಶ್ರೀ ಶಿವಕುಮಾರ ಸ್ವಾಮಿಗಳ ಭಾವಚಿತ್ರ ಅಳವಡಿಸಿ

ಮಾನ್ಯರೆ,

ಬೆಳಗಾವಿಯ ಸುವರ್ಣಸೌಧದಲ್ಲಿ ನಡೆಯುತ್ತಿರುವ ಅಧಿವೇಶನದಲ್ಲಿ ಚಿಕ್ಕಬಳ್ಳಾಪುರದ ಶಾಸಕ ಪ್ರದೀಪ್ ಈಶ್ವರ್ ಅವರು ಈ ಸಭಾಂಗಣದಲ್ಲಿ ತ್ರಿವಿದ ದಾಸೋಹಿ ಶ್ರೀ ಶಿವಕುಮಾರ ಸ್ವಾಮೀಜಿಯವರ ಫೋಟೋವನ್ನು ಹಾಕಿ ಎಂದು ಧ್ವನಿ ಎತ್ತಿದ್ದಾರೆ. ಹೌದು, ಸಭಾಂಗಣದಲ್ಲಿ ಬೇರೆ ಬೇರೆ ಮಹಾನ್ ವ್ಯಕ್ತಿಗಳ ಚಿತ್ರಗಳು ಇರುವುದರಿಂದ ಸ್ವಾಮೀಜಿಯವರ ಫೋಟೋ ಇಲ್ಲದಿರುವುದು ಬೇಸರದ ಸಂಗತಿಯಾಗಿದೆ. ಬಸವಣ್ಣನವರ ತತ್ವಗಳನ್ನು ತಿಳಿಸಿಕೊಟ್ಟ, ಸಾವಿರಾರು ಮಕ್ಕಳಿಗೆ ಉಚಿತ ದಾಸೋಹ, ವಿದ್ಯೆ, ವಸತಿಯನ್ನು ಕೊಡುತ್ತಿರುವ ಸಿದ್ದಗಂಗಾ ಕ್ಷೇತ್ರದ ತ್ರಿವಿಧ ದಾಸೋಹಿ ನಡೆದಾಡುವ ದೇವರು ಶ್ರೀ ಡಾ। ಶಿವಕುಮಾರ ಸ್ವಾಮೀಜಿ ಅವರ ಚಿತ್ರವನ್ನು ಸಭಾಂಗಣದಲ್ಲಿ ಹಾಕಿಸಬೇಕೆಂದು ಮುಖ್ಯಮಂತ್ರಿಗಳು, ವಿಧಾನಸಭಾ ಅಧ್ಯಕ್ಷರು, ವಿಧಾನ ಪರಿಷತ್ ಸಭಾಪತಿಗಳಲ್ಲಿ ಮನವಿ.

–ಮಹಾಂತೇಶ್ ಬಸಪ್ಪ, ಬಳ್ಳೂರುಹುಂಡಿ ಗ್ರಾಮ, ನಂಜನಗೂಡು ತಾ.

ಸುಪ್ರೀಂಕೋರ್ಟಿನ ಮಹತ್ವದ ಆದೇಶ

ಮಾನ್ಯರೆ,

ದೇಶದಲ್ಲಿ ವರದಕ್ಷಿಣೆ ಕಾಯ್ದೆ ಹಾಗೂ ಇತರ ಮಹಿಳಾ ಪರ ಕಾಯ್ದೆಗಳ ಅಡಿ ಪುರುಷರ ವಿರುದ್ಧ ಹೆಚ್ಚು ಸುಳ್ಳು ಪ್ರಕರಣಗಳು ದಾಖಲಾಗುತ್ತಿರುವ ಬಗ್ಗೆ ಸರ್ವೋಚ್ಚ ನ್ಯಾಯಾಲಯ ಕಳವಳ ವ್ಯಕ್ತಪಡಿಸಿದೆ.

ತೆಲಂಗಾಣ ಹೈಕೋರ್ಟಿನ ಆದೇಶವನ್ನು ಪ್ರಶ್ನಿಸಿ, ತೆಲಂಗಾಣ ವ್ಯಕ್ತಿಯೊಬ್ಬರು ಸಲ್ಲಿಸಿದ್ದ ಅರ್ಜಿಯ ವಿಲೇವಾರಿ ಮಾಡುವ ಸಂದರ್ಭದಲ್ಲಿ ಈ ಕಳವಳ ವ್ಯಕ್ತಪಡಿಸಿದ ಗೌರವಾನ್ವಿತ ನ್ಯಾಯಮೂರ್ತಿಗಳಾದ ಬಿ.ವಿ.ನಾಗರತ್ನ ಹಾಗೂ ಕೋಟೀಶ್ವರ ಸಿಂಗ್ ನೇತೃತ್ವದ ದ್ವಿಸದಸ್ಯದ ಪೀಠ, ಇಂತಹ ಸುಳ್ಳು ಪ್ರಕರಣಗಳನ್ನು ಮೊಳಕೆಯಲ್ಲಿಯೇ ಚಿವುಟಿ ಹಾಕಬೇಕೆಂದು ವಿಚಾರಣಾ ನ್ಯಾಯಾಲಯಗಳಿಗೆ ಆದೇಶಿಸಿದೆ.

ಯಾವುದೇ ಸಕಾರಣಗಳಿಲ್ಲದೇ, ಕೇವಲ ತಮ್ಮ ಗಂಡಂದಿರನ್ನು ಹಾಗೂ ಅತ್ತೆ–ಮಾವ ಸೇರಿದಂತೆ, ಇತರ ಸಂಬಂಧಿಗಳನ್ನು ಬ್ಲಾಕ್‌ಮೇಲ್ ಮಾಡಲು ಕೆಲವು ವಿವಾಹಿತ ಮಹಿಳೆಯರು, ವರದಕ್ಷಿಣೆ ಕಾಯ್ದೆ ಹಾಗೂ ಭಾರತೀಯ ದಂಡ ಸಂಹಿತೆಯ ಕಲಂ 498 ಎ ಅಡಿ ಸುಳ್ಳು ಪ್ರಕರಣಗಳನ್ನು ದಾಖಲಿಸಿ, ತಮ್ಮ ಗಂಡಂದಿರಿಗೆ ಹಾಗೂ ಅತ್ತೆ–ಮಾವಂದಿರಿಗೆ ಅನಗತ್ಯ ಕಿರುಕುಳ ಹಾಗೂ ಮುಜುಗರವನ್ನು ಉಂಟು ಮಾಡುತ್ತಿದ್ದಾರೆ. ಸಮಾಜದಲ್ಲಿ ಗೌರವಯುತ ಸ್ಥಾನದಲ್ಲಿರುವವರಿಗೆ ಈ ರೀತಿಯ ಕಿರುಕುಳ ನೀಡಿ, ಅವರ ತೇಜೋವಧೆ ಮಾಡುವುದರ ಜೊತೆಗೆ ಅವರನ್ನು ಕೋರ್ಟಿನ ಕಟಕಟೆಗೆ ತಂದು ನಿಲ್ಲಿಸುತ್ತಿರುವ ಪ್ರಕರಣಗಳು ಹೆಚ್ಚುತ್ತಿವೆ. ಹೀಗಾಗಿ ಪೊಲೀಸರು ಇಂತಹ ದೂರುಗಳು ಬಂದಾಗ, ಗಂಡ ಹಾಗೂ ಅವರ ಮನೆಯವರಿಗೆ ಅಂದರೆ ಆರೋಪಿಗಳನ್ನು ವಿಚಾರಣೆಗೆ ಒಳಪಡಿಸಿ, ನೈಜ ಸಂಗತಿಗಳನ್ನು ಅರಿಯಲು ಪ್ರಯತ್ನಿಸಿ, ಅವರಿಗೆ ಆಪ್ತ ಸಮಾಲೋಚನೆ (counseling) ಮಾಡಬಹುದು. ಸುಖಾ ಸುಮ್ಮನೇ ಅವರ ವಿರುದ್ಧ ಎಫ್‌ಐಆರ್ ದಾಖಲಿಸಿ ಅವರನ್ನು ಬಂಧಿಸಬಾರದು. ಈ ಬಗ್ಗೆ ಸರ್ವೋಚ್ಚ ನ್ಯಾಯಾಲಯದ ಮಾರ್ಗದರ್ಶಿ ಸೂತ್ರಗಳೇ ಇವೆ. ಒಟ್ಟಿನಲ್ಲಿ, ಅಮಾಯಕ ಪುರುಷರು ತಮ್ಮ ಪತ್ನಿಯರಿಂದ ಅನಗತ್ಯ ಕಿರುಕುಳಕ್ಕೆ ಒಳಗಾಗುವುದು ತಪ್ಪಬೇಕು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಚಿಂತನೆ

ಜೀವಮಾನಪೂರ್ತಿ ಸೇಡು ಸಾಧುವೇ...?



ನಮಗೆ ಜೀವನದ ಮೂಲ ಅವಶ್ಯಕತೆಗಳು ದಕ್ಕಿದ ನಂತರ ನಮ್ಮ ಜೀವನದ ಗತಿಯೇ ಬದಲಾಗಿ ಬಿಡುತ್ತದೆ. ಅಲ್ಲಿಯವರೆಗೆ ನಮಗೆ ಬೇಕೆನಿಸಿದ್ದ, ಅಗತ್ಯ ಎನಿಸಿದ್ದ ವಸ್ತುಗಳು ನಂತರ ನಗಣ್ಯವೆನಿಸುತ್ತದೆ. ಅದರಲ್ಲೂ ಹಣ ಸೇರಿದ ನಂತರ ಆದ್ಯತೆಗಳು ಬದಲಾಗುತ್ತವೆ. ಬೇಕಿಲ್ಲದ ಪೈಪೋಟಿಗಳು, ಬೇಕಿಲ್ಲದ ವೈಮನಸ್ಯಗಳು ಆವರಿಸುತ್ತವೆ. ನಮಗೆ ಸಂಬಂಧ ಪಡದವರ ಬಗ್ಗೆಯೂ ನಾವು ದ್ವೇಷ ಬೆಳೆಸಿಕೊಳ್ಳುತ್ತೇವೆ. ನಮ್ಮ ಜೊತೆಗಾರರು ನಮಗಿಂತ ಶ್ರೀಮಂತರಾದರೆ, ನಮಗಿಂತ ಪ್ರಭಾವಶಾಲಿಗಳಾದರೆ ಅದನ್ನು ನಾವು ಸಹಿಸಿಕೊಳ್ಳದ ಮನೋಭಾವಕ್ಕೆ ಒಳಗಾಗುತ್ತೇವೆ. ಕೆಲವೊಮ್ಮೆ ನನ್ನ ಜೀವ ಹೋದರೂ ಸರಿಯೇ, ಅವನಿಗೆ ಬುದ್ಧಿ ಕಲಿಸದೇ ಬಿಡುವುದಿಲ್ಲ ಎಂಬ ಕೋಪದ ಮಾತುಗಳೂ ನಮ್ಮ ಬಾಯಿಂದ ಹೊರಹೊಮ್ಮುತ್ತವೆ. ನಾವು ಸತ್ತ ನಂತರ ಏನಾಗುತ್ತದೆಂಯೋ ನಮಗೆ ಗೊತ್ತಿಲ್ಲ. ಆದರೂ ನಾನು ಸತ್ತ ನಂತರವೂ ಅವನನ್ನು ಕಾಡುತ್ತೇನೆ, ನನ್ನ ಜೀವ ಹೋದರೂ ಬಿಡುವುದಿಲ್ಲ ಎಂಬ ಮಾತುಗಳು ಹೊರಬೀಳುತ್ತವೆ.

ಇದೇಕೆ ಹೀಗೆ? ಎಂದರೆ, ಅದೇ ನಮ್ಮ ಕನಿಷ್ಠ ಅವಶ್ಯಕತೆಗಳು ಒದಗಿದ ನಂತರ ನಮಗೆ ಬರುವ ಮನೋಭಾವ ಎಂದು ಹೇಳಬಹುದು. ನನಗೆ ಎರಡು ಹೊತ್ತು ಊಟಕ್ಕೇ ಗತಿಯಿಲ್ಲ ಎಂಬ ಸ್ಥಿತಿಯವರ ಬಾಯಿಯಲ್ಲಿ ಈ ರೀತಿಯ ಮಾತುಗಳು ಬರುವುದಿಲ್ಲ. ಅವರ ಆಲೋಚನೆ ಹೇಗಾದರೂ ಆಹಾರ ಹೊಂದಿಸುವುದೇ ಆಗಿರುತ್ತದೆ. ಆ ಯೋಚನೆ ಇಲ್ಲದಿದ್ದಾಗ ನಮ್ಮಲ್ಲಿರುವ ಹಣ ನಮ್ಮ ಮನಸ್ಥಿತಿಯನ್ನು ಕೆಡಿಸುತ್ತದೆ.

ಇತ್ತೀಚೆಗೆ ನ್ಯಾಯಾಲಯ ಒಂದಕ್ಕೆ ಹೋಗುವ ಪ್ರಸಂಗ ಬಂದಿತ್ತು. ಅಲ್ಲಿ ಬಂದಿದ್ದ ಜನರಲ್ಲಿ ಎಲ್ಲ ವರ್ಗದವರೂ ಇದ್ದರು. ಗ್ರಾಮೀಣ ಭಾಗದ ಅತ್ಯಂತ ಬಡವರು, ಮಧ್ಯಮವರ್ಗದವರು ಹಾಗೂ ಶ್ರೀಮಂತರು ಎಲ್ಲರೂ ಕಂಡು ಬಂದರು. ಎಷ್ಟು ನ್ಯಾಯಾಲಯಗಳು ಇವೆಯೋ ಅಲ್ಲೆಲ್ಲಾ ಜನರ ಗುಂಪು ಕಾಣಿಸಿತು. ಕೆಲವರಲ್ಲಿ ಆತಂಕ, ಕೆಲವರಲ್ಲಿ ದುಗುಡ, ಕೆಲವರಲ್ಲಿ ದರ್ಪ ಎಲ್ಲವನ್ನೂ ಅಲ್ಲಿ ಕಾಣಬಹುದಾಗಿತ್ತು. ಹೆಚ್ಚಿನ ಪ್ರಕರಣಗಳು ಸಂಬಂಧಿಕರ ನಡುವೆಯೇ ಇರುವಂತಹುದು. ಕೆಲವರು ಹತ್ತಿರದ ರಕ್ತ ಸಂಬಂಧಿಗಳು. ಆದರೆ ನ್ಯಾಯಾಲಯದ ಆವರಣದಲ್ಲಿ ಒಬ್ಬರು ಇನ್ನೊಬ್ಬರ ಮುಖವನ್ನು ನೋಡದೇ ಕುಳಿತಿದ್ದರು. ತಾವೇ ಮಾತನಾಡಿ ಬಗೆಹರಿಸಿಕೊಳ್ಳಬಹುದಾದ ಸಣ್ಣ ವಿಷಯವನ್ನೂ ಅವರು ನ್ಯಾಯಾಲಯಕ್ಕೆ ತಂದಿದ್ದರು. ಅದರಲ್ಲಿ ಹಲವರು ಮಧ್ಯಮ ವರ್ಗಕ್ಕೆ ಸೇರಿದವರು. ಅವರು ತಮ್ಮ ಪ್ರಕರಣವನ್ನು ಗೆದ್ದರೂ ಅಂತಹ ಲಾಭವೇನೂ ಆಗುವುದಿಲ್ಲ. ಆದರೆ ಮನಸ್ಸಿನಲ್ಲಿರುವ ಸೇಡು ನ್ಯಾಯಾಲಯದಲ್ಲಿ ಪ್ರಕರಣ ಹೂಡುವಂತೆ ಮಾಡುತ್ತದೆ. ನನ್ನ ಒಂದು ಕಣ್ಣು ಹೋದರೂ ಪರವಾಗಿಲ್ಲ, ಎದುರಾಳಿಯ ಎರಡೂ ಕಣ್ಣು ಹೋಗಬೇಕು ಎಂಬ ಮನೋಭಾವ ಅವರಿಂದ ಇಂತಹ ಕೆಲಸ ಮಾಡಿಸುತ್ತದೆ. ಹಿಂದೆ ಹೀಗಿರಲಿಲ್ಲ. ಅದರಲ್ಲೂ ಕೂಡುಕುಟುಂಬಗಳಿದ್ದಾಗ, ಮನೆಯವರ ನಡುವೆ ಇಂತಹ ಮನಸ್ಥಿತಿ ಇರುತ್ತಿರಲಿಲ್ಲ. ಸಣ್ಣಪುಟ್ಟ ಸಮಸ್ಯೆ ಬಂದರೆ ಮನೆಯ ಮುಖ್ಯಸ್ಥ ಅದನ್ನು ಬಗೆಹರಿಸುತ್ತಿದ್ದ. ಅಕಸ್ಮಾತ್ ಅಲ್ಲೂ ಇತ್ಯರ್ಥವಾಗದಿದ್ದರೆ, ಪಂಚಾಯತಿಯಲ್ಲಿ ಪರಿಹಾರವಾಗುತ್ತಿತ್ತು. ಅಲ್ಲಿಂದ ಮುಂದೆ ನ್ಯಾಯ ಅರಸಿ ಹೋಗುವವರು ಕಂಡುಬರುತ್ತಿರಲಿಲ್ಲ. ಆದರೆ ಯಾವಾಗ ನಾವು ಈ ಕೂಡುಕುಟುಂಬ ವ್ಯವಸ್ಥೆಯಿಂದ ಹೊರಬಂದೆವೋ ಆಗ ನಮ್ಮ ವೈಮನಸ್ಯ ಜಾಸ್ತಿಯಾಗುತ್ತಾ, ನ್ಯಾಯಾಲಯಗಳಿಗೆ ಎಡತಾಕುವಂತೆ ಆಗಿದೆ. ಜಮೀನು ಭಾಗವಾಗಿದೆ, ಕೆಲ ಭಾಗದ ಜಮೀನಿಗೆ ಹೋಗಲು ದಾರಿ ಇಲ್ಲ, ಹೋಗಬೇಕಾದರೆ ಮೇಲಿನ ಜಮೀನಿನವರು ಜಾಗ ಕೊಡಬೇಕು. ಆದರೆ ಸೇಡಿನ ಮನೋಭಾವ ಹಾಗೆ ಜಾಗ ಕೊಡಲು ಇಚ್ಚಿಸುವುದಿಲ್ಲ. ಕುಟುಂಬದಲ್ಲಿ ಇಬ್ಬರನ್ನೂ ಕೂರಿಸಿ ಮಾತನಾಡಿ ಸಮಾಧಾನ ಪಡಿಸುವವರು ಇಲ್ಲ. ಹಾಗಾಗಿ ಸಲೀಸಾಗಿ ನ್ಯಾಯಾಲಯಕ್ಕೆ ಹೋಗಿ ಪ್ರಕರಣ ದಾಖಲಿಸುತ್ತಾರೆ. ಗ್ರಾಮಕ್ಕೆ ಬರ ಬಂದಾಗ ಎರಡೂ ಜಮೀನಿನವರ ಜಮೀನಿನಲ್ಲಿ ಬೆಳೆ ಬೆಳೆಯುವುದಿಲ್ಲ. ನೀರು ಹರಿಯುವಾಗ ಅದನ್ನು ತಡೆದು ನಿಲ್ಲಿಸಲೂ ಯಾರಿಗೂ ಆಗುವುದಿಲ್ಲ. ಒಂದಷ್ಟು ವಿವೇಚನೆ ಉಪಯೋಗಿಸಿ, ಅವರ ಜಮೀನಿಗೆ ಹೋಗಲು ದಾರಿ ಕೊಟ್ಟರೆ ಸಮಸ್ಯೆಯೇ ಇರುವುದಿಲ್ಲ. ಅಲ್ಲದೆ ಅಕಸ್ಮಾತ್ ನನ್ನ ಜಮೀನು ಕೆಳ ಭಾಗದಲ್ಲಿದ್ದರೆ ನಾನೂ ಇಂತಹ ಸಮಸ್ಯೆ ಎದುರಿಸಬೇಕಾಗಿತ್ತು ಎಂಬ ಆಲೋಚನೆ ಮಾಡದೇ ನ್ಯಾಯಾಲಯಕ್ಕೆ ಅಲೆಯುತ್ತಾರೆ. ಮಾಡಲು ಬೇಕಾದಷ್ಟು ಬೇರೆ ಕೆಲಸಗಳಿದ್ದರೂ ಇಡೀ ದಿನ ನ್ಯಾಯಾಲಯದಲ್ಲಿ ಕಾಲ ಕಳೆಯುತ್ತಾರೆ. ಇಲ್ಲಿ ಕಾಣುವುದು ದ್ವೇಷದ ಮನೋಭಾವ.

> “ ನಮ್ಮ ಮಕ್ಕಳಿಗೆ ಮೊದಲು ದೇಶದ ಬಗ್ಗೆ ಕಲಿಸಬೇಕು, ಮಾನವೀಯತೆಯ ಬಗ್ಗೆ ಕಲಿಸಬೇಕು. ಇದನ್ನು ಕಲಿಸುವುದು ಶಾಲೆಗಳಲ್ಲ, ಬದಲಾಗಿ ಮನೆಗಳು ಹಾಗೂ ಮನೆಯವರು. ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲಾ ಎಂಬ ಮಾತೇ ಇದೆ. ತಂದೆ, ತಾಯಿ ಯಾವಾಗಲೂ ದ್ವೇಷದ ಮಾತುಗಳನ್ನೇ ಆಡುತ್ತಿದ್ದರೆ ಮಕ್ಕಳು ಅದೇ ಸರಿ ಎಂದು ಭಾವಿಸುತ್ತಾರೆ. ನಾವು ದ್ವೇಷ ಮಾಡುವುದಾದರೆ ನನ್ನ ವಿರುದ್ಧವೇ ದ್ವೇಷ ಮಾಡಿಕೊಳ್ಳಬೇಕು. ನಾನು ಹೇಗೆ ನಡೆದುಕೊಳ್ಳಬೇಕಾಗಿದೆಯೋ ಹಾಗೆ ನಡೆದುಕೊಳ್ಳುತ್ತಿದ್ದೇನೆಯೇ? ನನ್ನಿಂದ ಈ ಸಮಾಜಕ್ಕೆ ಏನಾದರೂ ಉಪಕಾರವಾಗುತ್ತಿದೆಯೇ? ನಾನು ನನ್ನ ಊರಿಗಾಗಿ, ನನ್ನ ಜನಗಳಿಗಾಗಿ ಏನಾದರೂ ಮಾಡಬಹುದಾಗಿತ್ತಲ್ಲವೇ?

ನಮಗೆ ಏಕೆ ಇಂತಹ ಮನೋಭಾವ ಬೆಳೆಯುತ್ತಿದೆ. ಕೆಲವರನ್ನು ಕಂಡರೆ ಜೀವನ ಪೂರ್ತಿ ದ್ವೇಷದಲ್ಲಿಯೇ ಕಾಲ ಕಳೆಯುವಂತೆ ಕಂಡುಬರುತ್ತಾರೆ. ಹೀಗೆ ಜೀವನಪೂರ್ತಿ ದ್ವೇಷ ಮಾಡುವಷ್ಟು ನಮಗೆ ಆಯಸ್ಸು ಇದೆಯೇ? ಇನ್ನೊಬ್ಬ ನೋವನ್ನು ಪಟ್ಟರೆ ನಮಗೆ ಹೇಗೆ ಆನಂದ ಸಿಗಲು ಸಾಧ್ಯ? ಹೊಂದಾಣಿಕೆಯೇ ಜೀವನ ಅಲ್ಲವೇ? ನನಗೆ ಸ್ವಲ್ಪ ನಷ್ಟವಾದರೂ ಪರವಾಗಿಲ್ಲ, ಮತ್ತೊಬ್ಬ ಸಂತೋಷವಾಗಿದ್ದರೆ ಸಾಕು ಎಂದು ಹಿಂದಿನವರು ಹೊಂದಿದ್ದ ಮನೋಭಾವ ಈಗ ಏಕೆ ಕಡಿಮೆಯಾಗುತ್ತಿದೆ? ನಮ್ಮ ಸಣ್ಣಪುಟ್ಟ ವೈಮನಸ್ಯಗಳಿಂದ ನಮ್ಮ ಊರು, ದೇಶ ಸಮಸ್ಯೆಯಲ್ಲಿರುವುದು ನಮಗೆ ಗೊತ್ತೇ ಆಗುವುದಿಲ್ಲ. ನಮಗೆ ನಮ್ಮ ಸೇಡೇ ಮುಖ್ಯವಾಗುತ್ತಿದೆ.

ನಾವು ಎಷ್ಟು ವರ್ಷ ಬದುಕುತ್ತೇವೆ? ಎಂಬುದು ಯಾರಿಗೂ ಗೊತ್ತಿಲ್ಲದ ಸಂಗತಿ. ಹಾಗಾಗಿ ಜೀವಮಾನ ಪೂರ್ತಿ ದ್ವೇಷ ಸಾಧಿಸುವುದಾದರೆ, ನಮಗಾಗಿ, ನಮ್ಮನ್ನು ನಂಬಿದವರಿಗಾಗಿ ಬದುಕುವುದು ಯಾವಾಗ? ಸತ್ಯ ಹರಿಶ್ಚಂದ್ರನ, ಕರ್ಣನ ಕಥೆ ಹೇಳುವ, ಕೇಳುವ ನಾವು ಹಾಗೆ ಕೊಂಚವಾದರೂ ಏಕೆ ಆಲೋಚನೆ ಮಾಡುತ್ತಿಲ್ಲ ಎಂಬುದು ಉತ್ತರಿಸಲಾಗದ ಪ್ರಶ್ನೆಯಾಗಿ ಕಂಡುಬರುತ್ತದೆ. ಕೊಡುವುದರಲ್ಲಿ ಸುಖವಿದೆ ಎಂಬುದೇ ನಮಗೆ ಮರೆತುಹೋಗಿ, ದ್ವೇಷವೇ ನಮ್ಮ ಜೀವನ ಎಂಬಂತಾಗುತ್ತಿರುವುದು ಬೇಸರದ ವಿಷಯವೇ. ಇದು ಸರಿಯಾಗಬೇಕಾದರೆ ನಮ್ಮ ಮನಸ್ಥಿತಿ ಬದಲಾಗಬೇಕು.

ಇಂದು ದೇಶದಲ್ಲಿ ನಡೆಯುತ್ತಿರುವ ವಿದ್ಯಮಾನಗಳು ಆತಂಕ ಹುಟ್ಟಿಸುವಂತಿವೆ. ನಮ್ಮ ಪ್ರಜಾಪ್ರಭುತ್ವ ಆಡಳಿತದಲ್ಲಿ ವಿಪಕ್ಷಗಳು ದ್ವೇಷದ ಮನೋಭಾವವನ್ನೇ ತೋರ್ಪಡಿಸುತ್ತಿವೆ. ಹೀಗಾಗಿ ಜನರು ಯಾರನ್ನು ನಂಬಬೇಕು ಎಂಬುದೇ ತಿಳಿಯದಂತಾಗಿದೆ. ಮೂಲ ರಾಜಕಾರಣದ ಅರ್ಥವೇ ಕಳೆದುಹೋಗುತ್ತಿದೆ. ಇತ್ತೀಚೆಗೆ ಗಮನಿಸಿದ ಒಂದು ಪ್ರಕರಣ; ಒಂದು ಶಾಲೆಯ ಮುಖ್ಯ ಉಪಾಧ್ಯಾಯಿನಿ ತುರ್ತಾಗಿ ತನ್ನ ಸಹೋದ್ಯೋಗಿ ಶಿಕ್ಷಕರ ಒಂದು ಸಭೆ ಕರೆಯುತ್ತಾರೆ. ಅವರು ಒಬ್ಬ ಶಿಕ್ಷಕನಿಗೆ ನಿಮಗೆ ಒಂಬತ್ತನೇ ತರಗತಿಯಲ್ಲಿ ಎಷ್ಟು ಅಂಕ ಬಂದಿತ್ತು ಎಂದು ಕೇಳುತ್ತಾರೆ, ಆತ ನೆನಪಿಲ್ಲ ಎನ್ನುತ್ತಾನೆ. ಕಾಲೇಜಿನಲ್ಲಿ ಎಷ್ಟು ಅಂಕ ಗಳಿಸಿದ್ದಿರಿ ಎಂದಾಗಲೂ ಆತ ನೆನಪಿಲ್ಲ ಎನ್ನುತ್ತಾನೆ. ಮತ್ತೊಬ್ಬ ಶಿಕ್ಷಕರಿಗೆ ನೀವು ಓದುವಾಗ ಎಲ್ಲದರಲ್ಲೂ ಮೊದಲ ಸ್ಥಾನ ಪಡೆಯುತ್ತಿದ್ದೀರಿ ಅಲ್ಲವೇ. ಹಾಗಾದರೆ ನಿಮ್ಮ ನಂತರದ ಸ್ಥಾನ ಪಡೆಯುತ್ತಿದ್ದವರು, ಕಡಿಮೆ ಅಂಕ ಪಡೆಯುತ್ತಿದ್ದವರು, ಫೇಲಾಗುತ್ತಿದ್ದವರು ಮುಂದೆ ಏನಾದರು ಎಂಬುದನ್ನು ಗಮನಿಸಿದ್ದೀರಾ ಎಂದಾಗ ಅವರು ಕೆಲವರು ಕೆಲಸ ಮಾಡುತ್ತಿದ್ದಾರೆ, ಕೆಲವರು ತಮ್ಮದೇ ಕಂಪನಿ ಆರಂಭಿಸಿದ್ದಾರೆ, ಕೆಲವರು ವಿದೇಶಗಳಲ್ಲಿ ನೆಲೆಸಿದ್ದಾರೆ ಎನ್ನುತ್ತಾರೆ. ಅದಕ್ಕೆ ಮುಖ್ಯ ಶಿಕ್ಷಕರು ಇದರ ಅರ್ಥ ಎಲ್ಲರೂ ಏನಾದರೂ ಕೆಲಸ ಮಾಡುತ್ತಿದ್ದಾರೆ ಅಲ್ಲವೇ, ಹಾಗಾದರೆ ನಿಮಗೂ ಅವರಿಗೂ ಏನು ವ್ಯತ್ಯಾಸ, ನೀವೂ ಹಣಕ್ಕಾಗಿ ಕೆಲಸ ಮಾಡುತ್ತಿದ್ದೀರಿ, ಅವರೂ ಮಾಡುತ್ತಿದ್ದಾರೆ, ಅವರೂ ಜೀವನ ಮಾಡುತ್ತಿದ್ದಾರೆ ಅಲ್ಲವೇ. ನಿಮಗಿಂತ ಕಡಿಮೆ ಅಂಕ ತೆಗೆದುಕೊಂಡವರು, ಅನುತ್ತೀರ್ಣರಾದವರು ನಿಮಗಿಂತ ಕಷ್ಟದ ಜೀವನ ನಡೆಸಬೇಕಾಗಿತ್ತು ಅಲ್ಲವೇ. ಆದರೆ ಹಾಗಾಗಿಲ್ಲ. ಕೆಲವರು ಪರಿಶ್ರಮದಿಂದ ಮೇಲೆ ಬಂದಿದ್ದಾರೆ. ಹೀಗಿರುವಾಗ ನೀವು ಶಿಕ್ಷಕರಾಗಿ ಮಕ್ಕಳು ಹೆಚ್ಚು ಅಂಕ ಗಳಿಸಲೇಬೇಕು ಎಂದು ಏಕೆ ಒತ್ತಡ ಹಾಕುತ್ತೀರಿ. ಮಕ್ಕಳು ಹೇಗೆ ಮತ್ತು ಏನು ಕಲಿಯುತ್ತಿದ್ದಾರೆ ಎಂಬುದು ಮುಖ್ಯವೇ ಹೊರತು ಅವರು ಗಳಿಸುವ ಅಂಕಗಳಲ್ಲ. ಅಂಕ ಪಟ್ಟಿಗಳು ನೆಪಮಾತ್ರ, ಅದು ಮುಂದೆ ಮರೆತೇ ಹೋಗುತ್ತದೆ. ನಾನೂ ಶಾಲೆಯಲ್ಲಿ ಅಂತಹ ಹೆಚ್ಚು ಅಂಕ ಗಳಿಸುತ್ತಿರಲಿಲ್ಲ. ಆದರೆ ಇಂದು ಈ ಶಾಲೆಯ ಮುಖ್ಯೋಪಾಧ್ಯಾಯಿನಿಯಾಗಿದ್ದೇನೆ. ನೀವು ನನ್ನ ಎದುರಲ್ಲಿ ನಿಂತಿದ್ದೀರಿ. ಜೀವನದಲ್ಲಿ ದೊಡ್ಡದೊಡ್ಡ ಸಾಧನೆ ಮಾಡಿದವರು ರ‍್ಯಾಂಕ್ ಪಡೆದ ವಿದ್ಯಾರ್ಥಿಗಳೇನೂ ಅಲ್ಲ. ಆದರೆ ಅವರ ಪರಿಶ್ರಮ ಅವರನ್ನು ಮುಂದಕ್ಕೆ ತಂದಿದೆ. ಮಕ್ಕಳನ್ನು ಅವರು ಪಡೆಯುವ ಅಂಕಗಳ ಮೇಲೆ ಶ್ರೇಷ್ಠ ಎಂದು ಪರಿಗಣಿಸುವ ಮನೋಭಾವಕ್ಕಿಂತ ಅವರು ಏನು ಕಲಿಯುತ್ತಿದ್ದಾರೆ ಎಂಬುದನ್ನು ಗುರುತಿಸಿ ಪ್ರೋತ್ಸಾಹಿಸಿ, ಅವರಿಗೆ ಮಾನವೀಯತೆ ಹೇಳಿಕೊಡಿ ಎಂದು ಹೇಳುತ್ತಾರೆ.

ಇದರ ಅರ್ಥ ಮಕ್ಕಳು ಹೆಚ್ಚು ಅಂಕ ಗಳಿಸಬಾರದು ಎಂದಲ್ಲ. ಬದಲಾಗಿ ಅವರು ಮುಂದೆ ಉತ್ತಮ ನಾಗರಿಕರಾಗುವಂತೆ ಕಲಿಯುತ್ತಿದ್ದಾರೆಯೇ? ಎಂಬುದನ್ನು ಗಮನಿಸಬೇಕು. ಮಕ್ಕಳಲ್ಲಿ ದ್ವೇಷದ ಮನೋಭಾವ ಬೆಳೆಯುತ್ತಿದೆ ಎಂದಾದಾಗ ಅದನ್ನು ಗುರುತಿಸಿ ಸರಿಪಡಿಸಬೇಕು. ಮಕ್ಕಳು ಸಣ್ಣ ಕಾರಣಕ್ಕೆ ಜಗಳವಾಡುತ್ತಾರೆ. ಅದು ಅಲ್ಲಿಗೇ ಮುಗಿಯಬೇಕು. ಅದು ಮುಂದುವರೆಯಬಾರದು. ಮಕ್ಕಳು ಎಲ್ಲವನ್ನೂ ಬೇಗ ಕಲಿಯುತ್ತಾರೆ. ಅವರಿಗೆ ಸರಿಯಾದ ತಿಳುವಳಿಕೆ ಬರುವಂತೆ ಕಲಿಸಬೇಕು. ಹಾಗಾದಾಗ ಈ ರೀತಿ ಸಣ್ಣಪುಟ್ಟ ಕಾರಣಗಳಿಗೆ ನ್ಯಾಯಾಲಯಕ್ಕೆ ಅಲೆಯುವುದು ತಪ್ಪುತ್ತದೆ. ನ್ಯಾಯಾಲಯಕ್ಕೆ ಬೇರೆಯದೇ ಕೆಲಸಗಳಿರುತ್ತವೆ. ಆದರೆ ಇಂತಹ ಕ್ಷುಲ್ಲಕ ವಿಷಯಗಳಿಂದಾಗಿ ಮುಖ್ಯವಾದ ಪ್ರಕರಣಗಳ ವಿಲೇವಾರಿ ನಿಧಾನವಾಗುತ್ತದೆ. ಆದರೆ ನ್ಯಾಯಾಲಯಕ್ಕೆ ಬರಬೇಡಿ ಎಂದು ನ್ಯಾಯಾಲಯಗಳು ಹೇಳಲಾಗುವುದಿಲ್ಲ. ಬದಲಾಗಿ ನಮ್ಮ ವ್ಯವಸ್ಥೆ ಸುಧಾರಿಸಬೇಕಾಗುತ್ತದೆ.

ನಮ್ಮ ಮಕ್ಕಳಿಗೆ ಮೊದಲು ದೇಶದ ಬಗ್ಗೆ ತಿಳಿಸಬೇಕು, ಮಾನವೀಯತೆಯ ಬಗ್ಗೆ ಕಲಿಸಬೇಕು. ಇದನ್ನು ಕಲಿಸುವುದು ಶಾಲೆಗಳಲ್ಲ, ಬದಲಾಗಿ ಮನೆಗಳು ಹಾಗೂ ಮನೆಯವರು. ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲಾ ಎಂಬ ಮಾತೇ ಇದೆ. ತಂದೆ, ತಾಯಿ ಯಾವಾಗಲೂ ದ್ವೇಷದ ಮಾತುಗಳನ್ನೇ ಆಡುತ್ತಿದ್ದರೆ ಮಕ್ಕಳು ಅದನ್ನೇ ಮೈಗೂಡಿಸಿಕೊಳ್ಳುತ್ತಾರೆ. ನಾವು ದ್ವೇಷ ಮಾಡುವುದಾದರೆ ನನ್ನ ವಿರುದ್ಧವೇ ದ್ವೇಷ ಮಾಡಿಕೊಳ್ಳಬೇಕು. ನಾನು ಹೇಗೆ ನಡೆದುಕೊಳ್ಳಬೇಕಾಗಿದೆಯೋ ಹಾಗೆ ನಡೆದುಕೊಳ್ಳುತ್ತಿದ್ದೇನೆಯೇ, ನನ್ನಿಂದ ಈ ಸಮಾಜಕ್ಕೆ ಏನಾದರೂ ಉಪಕಾರವಾಗುತ್ತಿದೆಯೇ, ನಾನು ನನ್ನ ಊರಿಗಾಗಿ, ನನ್ನ ಜನಗಳಿಗಾಗಿ ಏನಾದರೂ ಮಾಡಬಹುದಾಗಿತ್ತಲ್ಲವೇ, ಹಾಗೆ ಮಾಡುವ ಮನೋಭಾವ ನಾನು ಬೆಳೆಸಿಕೊಳ್ಳದಿರುವ ಬಗ್ಗೆ ನನ್ನನ್ನು ನಾನು ದ್ವೇಷಿಸಿಕೊಂಡರೆ ಅದು ಪ್ರಗತಿಗೆ ದಾರಿಯಾಗುತ್ತದೆ. ಇಂತಹ ಮನೋಭಾವ ಬೆಳೆಯಬೇಕಾಗಿರುವುದು ಇಂದಿನ ಮುಖ್ಯ ಅವಶ್ಯಕತೆ ಎನ್ನಿಸುತ್ತದೆ.

ಹರವೆ ಹರೀಶ್ ಹತ್ಯೆ ಪ್ರಕರಣ: ವಿವಿಧ ಸಂಘಟನೆಗಳಿಂದ ಪ್ರತಿಭಟನೆ



ಹರವೆ ಗ್ರಾಮದ ಹೆಚ್.ಸಿ.ಹರೀಶ್ ಅವರ ಕೊಲೆ ಪ್ರಕರಣ ಮರು ತನಿಖೆಗೆ ಆಗ್ರಹಿಸಿ ಅಪರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಮೈಸೂರು, ಡಿ.12(ಜಿಎ)–ಮೈಸೂರು ಜಿಲ್ಲೆಯ ಹುಣಸೂರು ತಾಲೂಕಿನ ಹರವೆ ಗ್ರಾಮದ ಹೆಚ್.ಸಿ.ಹರೀಶ್ ಅವರ ಕೊಲೆ ಪ್ರಕರಣ ಮರು ತನಿಖೆಗೆ ಆಗ್ರಹಿಸಿ ಕರ್ನಾಟಕ ದಲಿತ ಚಳವಳಿ ನಿರ್ಮಾಣ ವೇದಿಕೆ, ಮೈಸೂರು ಜಿಲ್ಲಾ ಮಡಿವಾಳ ಮಾಚಿದೇವರ ಸಂಘ, ಕರ್ನಾಟಕ ರಾಜ್ಯ ಹಿಂದುಳಿದ ಜಾಗೃತಿ ವೇದಿಕೆ ವತಿಯಿಂದ ಮೈಸೂರು ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಈ ವೇಳೆ ಕರ್ನಾಟಕ ರಾಜ್ಯ ಹಿಂದುಳಿದ ಜಾಗೃತಿ ವೇದಿಕೆ ರಾಜ್ಯಾಧ್ಯಕ್ಷ ಶಿವರಾಮು ಮಾತನಾಡಿ, ಹರೀಶ್ ಕೊಲೆಯ ಬಗ್ಗೆ ಎಲ್ಲರೂ ಸಂಶಯ ವ್ಯಕ್ತಪಡಿಸಿರುವ ಹಿನ್ನೆಲೆಯಲ್ಲಿ ಮರು ತನಿಖೆಗೆ ಹಿರಿಯ ಪೊಲೀಸ್ ಅಧಿಕಾರಿಗಳು ಸೂಚಿಸಬೇಕು. ಕಾನೂನು ಪ್ರಕಾರ ಸಮಗ್ರ ತನಿಖೆಗೆ ಹಿರಿಯ ಅಧಿಕಾರಿಗಳ ನೇಮಿಸಬೇಕೆಂದು ಆಗ್ರಹಿಸಿದರು.

ಅಹಿಂದ ಜವರಪ್ಪ ಮಾತನಾಡಿ, ಗ್ರಾಮಾಂತರ ಭಾಗದಲ್ಲಿ ಪೊಲೀಸರು ಒತ್ತಡಕ್ಕೆ ಮಣಿದು ಕೆಲವೊಂದು ಪ್ರಕರಣಗಳನ್ನು ಮುಚ್ಚಿ ಹಾಕುವ ಪ್ರಯತ್ನ ಮಾಡುತ್ತಿದ್ದಾರೆ. ಸದರಿ ಸಾಲಿನಲ್ಲಿ ಹರೀಶ್ ಪ್ರಕರಣವೂ ಸೇರಿದೆ ಎಂದು ಕಿಡಿಕಾರಿದರು.

ಕರ್ನಾಟಕ ದಲಿತ ಚಳವಳಿ ನಿರ್ಮಾಣ ವೇದಿಕೆಯ ಹರಿಹರ ಆನಂದಸ್ವಾಮಿ ಮಾತನಾಡಿ, ಹರೀಶ್ ಹತ್ಯೆಯ ಆರೋಪಿ ವಾಲೆ ರವಿಯನ್ನು ಬಂಧಿಸಬೇಕು. ಮೃತ ಹರೀಶ್ ಕುಟುಂಬಕ್ಕೆ 25 ಲಕ್ಷ ರೂ. ಪರಿಹಾರ ನೀಡುವುದರ ಜೊತೆಗೆ ಮೃತರ ಕುಟುಂಬಕ್ಕೆ ಸೂಕ್ತ ರಕ್ಷಣೆ ನೀಡಬೇಕೆಂದು ಮನವಿ ಮಾಡಿದರು.

ಪ್ರತಿಭಟನೆಯಲ್ಲಿ ರವಿನಂದನ್, ಯೋಗೇಶ್ ಉಪ್ಪಾರ್, ದೇವಪ್ಪನಾಯಕ, ಎಂ.ಮಾದೇಶ್‌ಕುಮಾರ್, ನಾಗೇಶ್, ಟಿ.ಈರಯ್ಯ, ಸೀಗೂರು ವಿಜಯಕುಮಾರ್, ಹೆಚ್.ಡಿ.ರಮೇಶ್, ಪಿ.ಪಿ.ಪುಟ್ಟನಾಯಕ, ಕೃಷ್ಣಶೆಟ್ಟಿ, ಮಹದೇವ, ವೆಂಕಟೇಶ್, ರಾಜಶೆಟ್ಟಿ, ಪ್ರಸನ್ನಕುಮಾರ್, ಜಯರಾಮ್, ಚೌಡಶೆಟ್ಟಿ ಹರೀಶ್ ಮೊಣ್ಣ ಪಾಲ್ಗೊಂಡಿದ್ದರು.

ಇಂದು ದರ್ಶನ್ ಜಾಮೀನು ಅರ್ಜಿ ತೀರ್ಪು



ಬೆಂಗಳೂರು: ಚಿತ್ರದುರ್ಗದ ರೇಣುಕಾ ಸ್ವಾಮಿ ಕೊಲೆ ಪ್ರಕರಣದಲ್ಲಿ ಎ2 ಆರೋಪಿಯಾಗಿರುವ ನಟ ದರ್ಶನ್ ಜಾಮೀನು ಅರ್ಜಿಯ ತೀರ್ಪನ್ನು ಹೈಕೋರ್ಟ್ ಡಿ.13ರ ಮಧ್ಯಾಹ್ನ ಪ್ರಕಟಿಸಲಿದೆ.

ರೆಗ್ಯುಲರ್ ಜಾಮೀನು ಕೋರಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ದರ್ಶನ್ ಪರ ವಕೀಲ ಸಿ.ವಿ.ನಾಗೇಶ್ ವಾದ ಮಂಡಿಸಿದ್ದು, ಎಸ್‌ಪಿಪಿ ಪ್ರಸನ್ನ ಕುಮಾರ್ ಪ್ರತಿವಾದ ಮಂಡಿಸಿದ್ದಾರೆ. ಸುದೀರ್ಘ ವಾದ–ಪ್ರತಿವಾದ ಆಲಿಸಿದ ನ್ಯಾಯಾಧೀಶರು ದಿನಾಂಕ ಘೋಷಿಸದೆ ತೀರ್ಪು ಕಾಯ್ದಿರಿಸಿ, ಆದೇಶ ಬರುವವರೆಗೂ ನಟ ದರ್ಶನ್ ವೈದ್ಯಕೀಯ ಜಾಮೀನು ಅವಧಿಯನ್ನು ವಿಸ್ತರಿಸಿದ್ದರು.

ನಾಳೆ ಚಿತ್ರದುರ್ಗದಲ್ಲಿ ರಾಜ್ಯಮಟ್ಟದ ಮಾದಿಗ ವಕೀಲರ ಬೃಹತ್ ಸಮಾವೇಶ

ಮೈಸೂರು,ಡಿ.12(ಪಿಎಂ)– ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ವತಿಯಿಂದ ಸುಪ್ರೀಂಕೋರ್ಟ್ ಆದೇಶದನ್ವಯ ಪರಿಶಿಷ್ಟ ಜಾತಿಗಳ ಒಳಮೀಸಲಾತಿ ಜಾರಿಗಾಗಿ ಡಿ.14ರಂದು ಚಿತ್ರದುರ್ಗದಲ್ಲಿ ಪ್ರಥಮ ರಾಜ್ಯಮಟ್ಟದ ಮಾದಿಗ ವಕೀಲರ ಬೃಹತ್ ಸಮಾವೇಶ ಹಮ್ಮಿಕೊಳ್ಳಲಾಗಿದೆ.

ಅಂದು ಬೆಳಗ್ಗೆ 10.30ಕ್ಕೆ ಚಿತ್ರದುರ್ಗದ ತರಾಸು ರಂಗಮಂದಿರದಲ್ಲಿ ಚಿತ್ರದುರ್ಗದ ಸಂಸದರೂ ಆದ ಮಾಜಿ ಉಪಮುಖ್ಯ ಮಂತ್ರಿ ಗೋವಿಂದ ಎಂ.ಕಾರಜೋಳ ಉದ್ಘಾಟಿಸಲಿದ್ದಾರೆ. ಚಿತ್ರದುರ್ಗದ ಮಾದರ ಚನ್ನಯ್ಯ ಮಠದ ಶ್ರೀ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ್ ಮಹನೀಯರ ಭಾವಚಿತ್ರಗಳಿಗೆ ಪುಷ್ಪಾರ್ಚನೆ ಮಾಡಲಿದ್ದಾರೆ. ಕೇಂದ್ರ ಮಾಜಿ ರಾಜ್ಯ ಸಚಿವ ಎ.ನಾರಾಯಣಸ್ವಾಮಿ, ಮಾಜಿ ಸಚಿವ ಹೆಚ್.ಆಂಜನೇಯ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆಯ ಅಧ್ಯಕ್ಷ ಎಸ್.ಅರುಣ್ ಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ.

ಮಾಜಿ ಸಚಿವ ಆಲ್ಕೋಡ್ ಹನುಮಂತಪ್ಪ, ಬಹುಜನ ಚಳವಳಿಗಾರ ಮಾರಸಂದ್ರ ಮುನಿಯಪ್ಪ ಹಿರಿಯ ವಕೀಲ ಎಸ್. ಮಾರೆಪ್ಪ ಮಾಜಿ ಶಾಸಕ ವೀರಭದ್ರಪ್ಪ ಹಾಲರವಿ, ಚಿತ್ರದುರ್ಗದ ಜಿಲ್ಲಾ ವಕೀಲರ ಸಂಘದ ಮಾಜಿ ಅಧ್ಯಕ್ಷ ವಿಜಯ್ ಕುಮಾರ್ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಮಧ್ಯಾಹ್ನ 2.30ಕ್ಕೆ 'ಸುಪ್ರೀಂಕೋರ್ಟ್ ತೀರ್ಪಿನ ಅನ್ವಯ ಪರಿಶಿಷ್ಟ ಜಾತಿಗಳ ಮೀಸಲಾತಿ ವರ್ಗೀಕರಣಕ್ಕಾಗಿ ಕರ್ನಾಟಕ ಸರ್ಕಾರ ನೇಮಿಸಿರುವ ನಿವೃತ್ತ ನ್ಯಾ. ಹೆಚ್.ಎನ್.ನಾಗಮೋಹನ್ ದಾಸ್ ಅವರ ಏಕ ಸದಸ್ಯ ಆಯೋಗದ ಮುಂದೆ ಇರುವ ನಮ್ಮ ಸವಾಲುಗಳು' ಕುರಿತು ವಿಚಾರ ಗೋಷ್ಠಿ ನಡೆಯಲಿದೆ.

ರಾಜ್ಯಸಭಾ ಮಾಜಿ ಸದಸ್ಯ ಡಾ.ಎಲ್. ಹನುಮಂತಯ್ಯ, ನಿವೃತ್ತ ಐಎಎಸ್ ಅಧಿಕಾರಿಗಳಾದ ಲಕ್ಷ್ಮೀ ನಾರಾಯಣ, ಗೋನಾಳ್ ಭೀಮಪ್ಪ, ಬಾಬುರಾವ್ ಮುಡುಬಿ, ತೇಗನೂರ್, ಬಿ.ಹೆಚ್.ಅನಿಲ್‌ಕುಮಾರ್, ಐಆರ್‌ಎಸ್ ಅಧಿಕಾರಿ ಭೀಮಾಶಂಕರ್, ಬೆಂಗಳೂರಿನ ಮಾತಂಗ ಫೌಂಡೇಷನ್‌ನ ಆರ್.ಲೋಕೇಶ್ ವಿಶೇಷ ಆಹ್ವಾನಿತರಾಗಿ ಭಾಗವಹಿಸಲಿದ್ದಾರೆ. ಇದಕ್ಕೂ ಮುನ್ನ ಬೆಳಗ್ಗೆ 10ಕ್ಕೆ ತರಾಸು ಮಂದಿರದಿಂದ ತಮಟೆ ಕಲಾತಂಡದೊಂದಿಗೆ ಸಮಾಜದ ವಕೀಲರು ಮೆರವಣಿಗೆ ಪ್ರಾರಂಭಿಸಿ, ವಾಲ್ಮೀಕಿ ವೃತ್ತ ಬಳಸಿ, ಡಾ.ಬಿ.ಆರ್.ಅಂಬೇಡ್ಕರ್ ಅವರ ಪುತ್ಥಳಿಗೆ ಮಾಲಾರ್ಪಣೆ ನೆರವೇರಿಸಿ ತರಾಸು ಮಂದಿರಕ್ಕೆ ಮರಳಲಿದ್ದಾರೆ.

ಡಿ.16 ಒಳ ಮೀಸಲಾತಿಗಾಗಿ ಬೆಳಗಾವಿಯಲ್ಲಿ ಸಮಾವೇಶ

ಮೈಸೂರು, ಡಿ.12(ಜಿಎ)– ಸರ್ವೋಚ್ಚ ನ್ಯಾಯಾಲಯ ಒಳಮೀಸಲು ಜಾರಿಗೆ ಆದೇಶಿಸಿ ನಾಲ್ಕು ತಿಂಗಳಾದರೂ ಕಾಲಾಹರಣ ಮಾಡುತ್ತಿರುವ ಕಾಂಗ್ರೆಸ್ ಸರ್ಕಾರದ ವಿರುದ್ಧ ಡಿ.16ಕ್ಕೆ ಒಳ ಮೀಸಲಾತಿಗೆ ಆಗ್ರಹಿಸಿ ಮಾದಿಗ ಮತ್ತು ಮಾದಿಗ ಉಪ ಜಾತಿಗಳ ಸಂಘಟನೆಗಳ ಒಕ್ಕೂಟದ ವತಿಯಿಂದ ಬೆಳಗಾವಿಯಲ್ಲಿ ಹಕ್ಕೊತ್ತಾಯ ಸಮಾವೇಶ ಹಮ್ಮಿಕೊಳ್ಳಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ರಾಜ್ಯ ಸಹ ಸಂಚಾಲಕ ಜಿ.ಶ್ರೀನಿವಾಸ್ ಈ ವಿಷಯ ತಿಳಿಸಿ, ಕಾಂಗ್ರೆಸ್ ಸರ್ಕಾರ ಕಾಟಾಚಾರಕ್ಕೆ ಪ್ರೊ.ನಾಗಮೋಹನ್‌ದಾಸ್ ಅವರ ಆಯೋಗ ರಚಿಸಿದ್ದು ಬಿಟ್ಟರೆ ಏನೂ ಮಾಡಿಲ್ಲ. ಆಯೋಗ ಯಾವುದೇ ಕಾರ್ಯ ಇದುವರೆಗೂ ಆರಂಭಿಸಿಲ್ಲ. ಹೀಗಿರುವಾಗ ಒಳಮೀಸಲು ವಿಚಾರದಲ್ಲಿ ಸರ್ಕಾರದ ನಿರ್ಲಕ್ಷ್ಯ ಧೋರಣೆ ಖಂಡಿಸಿ ಡಿ.16ಕ್ಕೆ ಬೆಳಗಾವಿಯಲ್ಲಿ ಬೃಹತ್ ಹಕ್ಕೊತ್ತಾಯ ಸಮಾವೇಶ ನಡೆಯಲಿದ್ದು, ಮೈಸೂರಿನಿಂದಲೂ ಸಾವಿರಾರು ಮಂದಿ ಬೆಳಗಾವಿಗೆ ಆಗಮಿಸಲಿದ್ದಾರೆ ಎಂದು ತಿಳಿಸಿ, ಇದಕ್ಕೂ ಮುನ್ನ ಡಿ.14ಕ್ಕೆ ಒಳ ಮೀಸಲಾತಿ ವಿಚಾರದಲ್ಲಿ ಮೌನ ವಹಿಸಿರುವ ಎಲ್ಲಾ ಶಾಸಕರ ಕಚೇರಿ ಎದುರು ತಮಟೆ ಚಳವಳಿಯನ್ನು ಸಾಂಕೇತಿಕವಾಗಿ ನಡೆಸಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ಸುಬ್ರಹ್ಮಣಿ, ಧರ್ಮರಾಜ್, ಕುಮಾರ್, ವೆಂಕಟರಾಮು, ಗಂಗಣ್ಣ ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581/1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ ಶುಕ್ರವಾರ 13 ಡಿಸೆಂಬರ್ 2024

ಸರ್ಕಾರ, ಪೊಲೀಸರ ಕ್ರಮ ಸಮರ್ಥನೀಯ

● ಪ್ರತಿಭಟನೆಗೆ ಅಗತ್ಯ ಅವಕಾಶ ಮಾಡಿಕೊಡಲಾಗಿತ್ತು ● ಕಾನೂನು–ಸುವ್ಯವಸ್ಥೆ ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಪೊಲೀಸರ ಕ್ರಮ ಅನಿವಾರ್ಯ



ಬೆಳಗಾವಿ,ಸುವರ್ಣವಿಧಾನಸೌಧ, ಡಿ.12(ಕೆಎಂಶಿ)–ಪಂಚಮಸಾಲಿ ಲಿಂಗಾಯತ ಸಮುದಾಯಕ್ಕೆ ಹಿಂದುಳಿದ ವರ್ಗಗಳ ಪ್ರವರ್ಗ 2ಎ ಅಡಿ ಮೀಸಲಾತಿಗೆ ಆಗ್ರಹಿಸಿ ಪಂಚಮಸಾಲಿ ಪೀಠಾಧಿಪತಿ ಬಸವ ಜಯಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ನಡೆದ ಪ್ರತಿಭಟನೆ ವೇಳೆ ಸರ್ಕಾರ ಮತ್ತು ಪೊಲೀಸ್ ಇಲಾಖೆ ಜವಾಬ್ದಾರಿಯುತವಾಗಿ ನಡೆದುಕೊಂಡಿದೆ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ್ ವಿಧಾನಪರಿಷತ್‌ನಲ್ಲಿ ಸಮರ್ಥಿಸಿಕೊಂಡಿದ್ದಾರೆ.

ಶೂನ್ಯ ಅವಧಿಯಲ್ಲಿ ಮಾತನಾಡಿದ ಅವರು, ಪ್ರತಿಭಟನಾಕಾರರಿಗೆ ಶಾಂತಿಯುತ ಪ್ರತಿಭಟನೆ ನಡೆಸಲು ಎಲ್ಲಾ ಅವಕಾಶ ನೀಡಲಾಗಿತ್ತು. ಆದರೆ, ಪ್ರತಿಭಟನಾಕಾರರು ಕಾನೂನು ಮತ್ತು ಸುವ್ಯವಸ್ಥೆಗೆ ಭಂಗ ತರುವ ರೀತಿಯಲ್ಲಿ ಆದೇಶಗಳನ್ನು ಉಲ್ಲಂಘಿಸಿ ಸುವರ್ಣ ವಿಧಾನಸೌಧಕ್ಕೆ ಮುತ್ತಿಗೆ ಹಾಕಲು ಯತ್ನಿಸಿದ ಕಾರಣ ಲಘು ಲಾಠಿ ಪ್ರಹಾರ ನಡೆಸಿದ್ದು, ಪ್ರತಿಭಟನಾಕಾರರನ್ನು ಮುಂಜಾಗ್ರತಾ ಕ್ರಮವಾಗಿ ಬಂಧನ ಮಾತ್ರ ಮಾಡಲಾಯಿತು ಎಂದರು.

ಇದಕ್ಕೂ ಮುನ್ನ ಸದನದ ಹೊರಗೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಂಚಮಸಾಲಿ ಸಮುದಾಯದ ಮೀಸಲಾತಿ ಪ್ರತಿಭಟನೆ ಸಂದರ್ಭದಲ್ಲಿ ಜರುಗಿದ ಲಾಠಿಚಾರ್ಜ್ ಘಟನೆಗೆ ಸಂಬಂಧಿಸಿದಂತೆ ಕಾನೂನು ಸುವ್ಯವಸ್ಥೆ ಪಾಲನೆ ಜವಾಬ್ದಾರಿಯನ್ನು ಸರ್ಕಾರ ಸರಿಯಾಗಿಯೇ ನಿಭಾಯಿಸಿದೆ.

ಮೀಸಲಾತಿ ಬಗ್ಗೆ ಪ್ರತಿಕ್ರಿಯಿಸುವುದಿಲ್ಲ, ಸ್ವಾಮೀಜಿಯವರು, ಪಂಚಮಸಾಲಿ ಸಮುದಾಯಕ್ಕೆ ಮೀಸಲಾತಿ ಕುರಿತಂತೆ ಬೆಳಗಾವಿಯಲ್ಲಿ 5 ಸಾವಿರ ಟ್ರ್ಯಾಕ್ಟರ್ ತಂದು ಪ್ರತಿಭಟನೆ ಮಾಡುವುದಾಗಿ ಕರೆ ಕೊಟ್ಟಿದ್ದರು, ಪ್ರತಿಭಟನೆ ಎಲ್ಲರ ಹಕ್ಕು, ಆದರೆ 5 ಸಾವಿರ ಟ್ರ್ಯಾಕ್ಟರ್‌ಗಳನ್ನು ತಂದರೆ ಏನಾಗುತ್ತದೆ ಎಂಬ ಬಗ್ಗೆ ಪೊಲೀಸ್ ಅಧಿಕಾರಿಗಳೊಂದಿಗೆ ಚರ್ಚಿಸಿ, ಟ್ರ್ಯಾಕ್ಟರ್‌ನಲ್ಲಿ ಬರಲು ಅವಕಾಶ ನಿರಾಕರಿಸಿ, ಟ್ರ್ಯಾಕ್ಸ್ ಅಥವಾ ಕ್ರೂಸರ್ ವಾಹನಗಳಲ್ಲಿ ಬಂದು, ಪ್ರತಿಭಟನೆ ಮಾಡಲು ಸ್ಥಳ ನಿಗದಿ ಮಾಡಿಕೊಟ್ಟಿದ್ದೆವು. ಸುವರ್ಣ ವಿಧಾನಸೌಧದ 500 ಮೀಟರ್ ವ್ಯಾಪ್ತಿಯಲ್ಲಿ ಪ್ರತಿಬಂಧಕಾಜ್ಞೆ ವಿಧಿಸಿ, ನಿರ್ಬಂಧಿತ ಪ್ರದೇಶದ ಬಗ್ಗೆಯೂ ಆದೇಶ ಹೊರಡಿಸಲಾಗಿತ್ತು.

ಧಾರವಾಡ ಹೈಕೋರ್ಟ್ ಸಹಾ, ಶಾಂತಿಯುತ ಪ್ರತಿಭಟನೆಗೆ ಸ್ಥಳ ನಿಗದಿಪಡಿಸಿ, ಅವಕಾಶ ಕಲ್ಪಿಸಲು ಮತ್ತು ಅಹಿತಕರ ಘಟನೆಗಳು ಜರುಗದಂತೆ ಸೂಕ್ತ ಮುಂಜಾಗ್ರತಾ ಕ್ರಮ ಕೈಗೊಳ್ಳಲು ಸೂಚನೆ ನೀಡಿತ್ತು. ಸ್ವತಃ ಮುಖ್ಯಮಂತ್ರಿ ಅವರೇ, ಸಚಿವರುಗಳಾದ ಡಾ.ಮಹದೇವಪ್ಪ, ಸುಧಾಕರ್, ಲಕ್ಷ್ಮೀ ಹೆಬ್ಬಾಳ್ಕರ್, ವೆಂಕಟೇಶ್ ಅವರನ್ನು ಪ್ರತಿಭಟನಾ ಸ್ಥಳಕ್ಕೆ ತೆರಳಿ, ಸ್ವಾಮೀಜಿಗಳೂ ಸೇರಿದಂತೆ, ಕೆಲವು ಮುಖಂಡರನ್ನು ಭೇಟಿಯಾಗಿ, ಮಾತುಕತೆಗೆ ಬರುವಂತೆ ಆಹ್ವಾನಿಸುವಂತೆ ತಿಳಿಸಿದ್ದರು. ಮುಖಂಡರು ಸಚಿವರ ಮಾತಿಗೆ ಸ್ಪಂದಿಸದೆ, ಮುಖ್ಯಮಂತ್ರಿಗಳೇ ಪ್ರತಿಭಟನಾ ಸ್ಥಳಕ್ಕೆ ಆಗಮಿಸಬೇಕೆಂದು ಆಗ್ರಹಿಸಿದರು. ಎಲ್ಲ ಪ್ರತಿಭಟನೆಗಳಿಗೂ ಮುಖ್ಯಮಂತ್ರಿಗಳೇ ಹೋಗಬೇಕೆಂದರೆ ಸಾಧ್ಯವೇ? ಎಂದು ಪರಮೇಶ್ವರ್ ಪ್ರಶ್ನಿಸಿದರು. ಪ್ರತಿಭಟನಾಕಾರರನ್ನು ಸುವರ್ಣ ವಿಧಾನಸೌಧದೆಡೆಗೆ ನುಗ್ಗಲು ಪ್ರಚೋದಿಸಿದ ಕಾರಣ, ಪೊಲೀಸ್ ಬ್ಯಾರಿಕೇಡ್‌ಗಳನ್ನು ನೂಕಿ, ಸುವರ್ಣ ವಿಧಾನಸೌಧದೆಡೆಗೆ ಸುಮಾರು 10 ಸಾವಿರ ಜನರು ಏಕಕಾಲಕ್ಕೆ ನುಗ್ಗಲು ಯತ್ನಿಸಿದರು. ಅಲ್ಲದೆ, ಪ್ರತಿಭಟನಾಕಾರರು ಕಲ್ಲು ತೂರಾಟ ನಡೆಸಿದ ಕಾರಣ 24 ಪೊಲೀಸರು ಗಾಯಗೊಂಡರು, ಈ ಬಗ್ಗೆ ಸೂಕ್ತ ವಿಡಿಯೋ ದಾಖಲೆಗಳು ಇವೆ. ಸಾವಿರಾರು ಮಂದಿ ಸುವರ್ಣ ವಿಧಾನಸೌಧದೆಡೆಗೆ ನುಗ್ಗಿದರೆ ಕಾನೂನು ಸುವ್ಯವಸ್ಥೆ ಹಾಳಾಗುತ್ತದೆ ಎಂಬ ಕಾರಣಕ್ಕಾಗಿ ಪೊಲೀಸರು ಲಘು ಲಾಠಿ ಚಾರ್ಜ್ ಮಾಡಿ ತಡೆದಿದ್ದಾರೆ. ಕಾನೂನು ಕೈಗೆತ್ತಿಕೊಳ್ಳಲು ಅವಕಾಶ ನೀಡುವುದಿಲ್ಲ, ಯಾರೇ ಕಾನೂನು ಉಲ್ಲಂಘಿಸಲು ಅವಕಾಶ ಕೊಡುವುದಿಲ್ಲ. ಘಟನೆಗೆ ಸಂಬಂಧಿಸಿದಂತೆ ಪೊಲೀಸರು ಜವಾಬ್ದಾರಿಯುತವಾಗಿಯೇ ವರ್ತಿಸಿದ್ದಾರೆ ಎಂದರು.

ಪಂಚಮಸಾಲಿ ಲಿಂಗಾಯತರ ಮೇಲೆ ಲಾಠಿಚಾರ್ಜ್ ಖಂಡಿಸಿ ಬಿಜೆಪಿ ಪ್ರತಿಭಟನೆ

ಪ್ರತಿಭಟನಾನಿರತ ಪಂಚಮಸಾಲಿ ಶ್ರೀಗಳ ಭೇಟಿ ಮಾಡದ ಸಿಎಂ ವರ್ತನೆಗೆ ಖಂಡನೆ



ರಾಜ್ಯ ಬಿಜೆಪಿ ಬೆಳಗಾವಿ ಸುವರ್ಣ ವಿಧಾನಸೌಧದ ಡಾ. ಬಿ.ಆರ್.ಅಂಬೇಡ್ಕರ್ ಪ್ರತಿಮೆ ಬಳಿ ಇಂದು ಪ್ರತಿಭಟನೆ ನಡೆಸಿತು.

ಬೆಂಗಳೂರು,ಡಿ.12(ಕೆಎಂಶಿ)–ಮೀಸಲಾತಿಗೆ ಒತ್ತಾಯಿಸಿ ಹೋರಾಟ ನಡೆಸುತ್ತಿದ್ದ ಪಂಚಮಸಾಲಿ ಲಿಂಗಾಯತ ಸಮುದಾಯದವರ ಮೇಲೆ ಪೊಲೀಸ್ ಲಾಠಿ ಚಾರ್ಜ್ ಖಂಡಿಸಿ ರಾಜ್ಯ ಬಿಜೆಪಿ ಬೆಳಗಾವಿ ಸುವರ್ಣ ವಿಧಾನಸೌಧದ ಡಾ. ಬಿ.ಆರ್.ಅಂಬೇಡ್ಕರ್ ಪ್ರತಿಮೆ ಬಳಿ ಇಂದು ಪ್ರತಿಭಟನೆ ನಡೆಸಿತು.

ಈ ಸಂದರ್ಭದಲ್ಲಿ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಪಂಚಮಸಾಲಿ ಸಮುದಾಯದವರು ಹೋರಾಟ ನಡೆಸುತ್ತಿದ್ದಾಗ ಮುಖ್ಯಮಂತ್ರಿ ಸಿದ್ದರಾಮಯ್ಯ ಸುವರ್ಣಸೌಧದಲ್ಲೇ ಇದ್ದರೂ ಪ್ರತಿಭಟನಾಕಾರರನ್ನು ಭೇಟಿ ಮಾಡಲಿಲ್ಲ, ಹೋರಾಟದ ಸ್ಥಳಕ್ಕೆ ತೆರಳಿ ಮನವಿ ಸ್ವೀಕರಿಸಬಹುದಿತ್ತು ಎಂದರು.

ಹೋರಾಟದ ನೇತೃತ್ವ ವಹಿಸಿದ್ದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಅವರನ್ನು ಭೇಟಿ ಮಾಡುವ ಸೌಜನ್ಯವನ್ನೂ ತೋರಲಿಲ್ಲ, ಬದಲಿಗೆ ಶಾಂತಿಯುತ ಹೋರಾಟ ಮಾಡುತ್ತಿದ್ದ ಅಮಾಯಕರ ಮೇಲೆ ಲಾಠಿಚಾರ್ಜ್ ಮಾಡಿಸಿದ್ದು ಅಕ್ಷಮ್ಯ ಅಪರಾಧ. ಚನ್ನಮ್ಮನ ನಾಡಿನಲ್ಲಿ ಹೋರಾಟಗಾರರ ಮೇಲೆ ನಡೆದ ಲಾಠಿಚಾರ್ಜ್ ಮುಖ್ಯಮಂತ್ರಿ ಅವರ ನಡವಳಿಕೆ, ಅಧಿಕಾರದ ದರ್ಪ ತೋರುತ್ತದೆ, ದರ್ಪ ಮೆರೆದ ಪೊಲೀಸ್ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. ಕಾಂಗ್ರೆಸ್ ಸರ್ಕಾರ 139 ಶಾಸಕರಿದ್ದೇವೆ ಎಂಬ ಕಾರಣಕ್ಕೆ ದುರಹಂಕಾರದಿಂದ ನಡೆದುಕೊಳ್ಳುತ್ತಿದೆ. ಅಧಿಕಾರ ಶಾಶ್ವತ ಎಂಬ ಭ್ರಮೆ ಇದ್ದಂತಿದೆ, ಸಿದ್ದರಾಮಯ್ಯ ಹಿಂದಿನ ಆಡಳಿತಾವಧಿಯಲ್ಲೂ ಇದೇ ರೀತಿ ನಡೆದುಕೊಂಡಿದ್ದಾರೆ.

ಸರ್ಕಾರದ ಈ ಕ್ರಮವನ್ನು ಸದನದ ಒಳಗೆ ಮತ್ತು ಹೊರಗೆ ಪ್ರಶ್ನಿಸಲಾಗುವುದು. ಬಿಜೆಪಿ ಮತ್ತು ಜೆಡಿಎಸ್ ಒಟ್ಟಾಗಿ ಹೋರಾಟ ನಡೆಸಲಿವೆ ಎಂದರು. ಪ್ರತಿಭಟನಾಕಾರರು, ಕಾಂಗ್ರೆಸ್ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಪ್ರತಿಭಟನೆಯಲ್ಲಿ ವಿಧಾನಮಂಡಲದ ವಿರೋಧ ಪಕ್ಷದ ನಾಯಕರಾದ ಆರ್.ಅಶೋಕ್, ಛಲವಾದಿ ನಾರಾಯಣಸ್ವಾಮಿ, ಮಾಜಿ ಸಚಿವರು, ಶಾಸಕರು ಮತ್ತು ವಿಧಾನಪರಿಷತ್ ಸದಸ್ಯರು ಪಾಲ್ಗೊಂಡಿದ್ದರು.

ದೆಹಲಿಯಲ್ಲಿ ಗೃಹಲಕ್ಷ್ಮಿ: ಪ್ರತಿ ತಿಂಗಳು ಮಹಿಳೆಯರ ಖಾತೆಗೆ 1000 ರೂ.



ನವದೆಹಲಿ, ಡಿ.12– 2025ರ ದೆಹಲಿ ವಿಧಾನಸಭೆ ಚುನಾವಣೆಗೂ ಮೊದಲು ದೆಹಲಿ ಮುಖ್ಯಮಂತ್ರಿ ಅತಿಶಿ ಸರ್ಕಾರವು ಸಚಿವ ಸಂಪುಟ ಸಭೆಯ ನಂತರ ಅರವಿಂದ್ ಕೇಜ್ರಿವಾಲ್ ಅವರ ಗ್ಯಾರಂಟಿಯನ್ನು ಈಡೇರಿಸುವತ್ತ ಒಂದು ಹೆಜ್ಜೆ ಮುಂದಿಟ್ಟಿದೆ. ದೆಹಲಿ ಕ್ಯಾಬಿನೆಟ್ ಮುಖ್ಯಮಂತ್ರಿ ಮಹಿಳಾ ಸಮ್ಮಾನ್ ಯೋಜನೆಗೆ ಅನುಮೋದನೆ ನೀಡಿದ್ದು ಅದರಂತೆ ದೆಹಲಿಯ ಮಹಿಳೆಯರು ಪ್ರತಿ ತಿಂಗಳು 1000 ರೂಪಾಯಿ ಪಡೆಯಲಿದ್ದಾರೆ.

ದೆಹಲಿ ವಿಧಾನಸಭಾ ಚುನಾವಣೆಯ ನಂತರ ಪಕ್ಷವು ಸರ್ಕಾರ ರಚಿಸಿದರೆ, ದೆಹಲಿ ಸರ್ಕಾರವು ಮಹಿಳೆಯರಿಗೆ ನೀಡುವ 1000 ರೂ.ಗಳನ್ನು ತಿಂಗಳಿಗೆ 2100 ರೂ.ಗೆ ಹೆಚ್ಚಿಸಲಿದೆ ಎಂದು ಅರವಿಂದ್ ಕೇಜ್ರಿವಾಲ್ ಘೋಷಿಸಿದ್ದಾರೆ. ದೆಹಲಿ ಸರ್ಕಾರದ ಅನುಮೋದನೆಯ ನಂತರ ಈಗ ಈ ಯೋಜನೆಗೆ ಲೆಫ್ಟಿನೆಂಟ್ ಗವರ್ನರ್ ಅವರ ಅನುಮೋದನೆಯ ಅಗತ್ಯವಿರುತ್ತದೆ. ಅದರ ನಂತರವೇ ಅದನ್ನು ಕಾರ್ಯಗತಗೊಳಿಸಬಹುದು.

ದೆಹಲಿ ಸರ್ಕಾರದ ಮುಖ್ಯಮಂತ್ರಿ ಮಹಿಳಾ ಸಮ್ಮಾನ್ ಯೋಜನೆ ಅಡಿಯಲ್ಲಿ 18 ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆಯರು ಈ ಯೋಜನೆಯ ಪ್ರಯೋಜನವನ್ನು ಪಡೆಯುತ್ತಾರೆ. ಈ ಯೋಜನೆಗಾಗಿ ದೆಹಲಿ ಸರ್ಕಾರವು ಹಣಕಾಸು ವರ್ಷಕ್ಕೆ 2000 ಕೋಟಿ ರೂಪಾಯಿಗಳನ್ನು ಬಜೆಟ್ ಅನ್ನು ನಿಗದಿಪಡಿಸಿದೆ.

ದೆಹಲಿ ಸರ್ಕಾರದ ಈ ಯೋಜನೆಯ ಪ್ರಯೋಜನವು ಸರ್ಕಾರಿ ನೌಕರರಲ್ಲದ ಅಥವಾ ಆದಾಯ ತೆರಿಗೆ ಸ್ಲ್ಯಾಬ್‌ನಲ್ಲಿರುವ ಮಹಿಳೆಯರಿಗೆ ಲಭ್ಯವಿರುತ್ತದೆ. ಇದಲ್ಲದೇ ಬೇರೆ ಯಾವುದೇ ಪಿಂಚಣಿ ಪಡೆಯದವರಿಗೂ ಈ ಹಣವನ್ನು ನೀಡಲಾಗುವುದು. ಮಹಿಳೆಯರು ಆಧಾರ್ ಕಾರ್ಡ್‌ನಿಂದ ಬ್ಯಾಂಕ್ ಖಾತೆಗೆ ಮಾಹಿತಿ ನೀಡಬೇಕು.

ಮೇಘಾಲಯ ರಾಜ್ಯಪಾಲರಿಂದ ಸಾಂತ್ವನ



ಇತ್ತೀಚೆಗೆ ಮೈಸೂರು ತಾಲೂಕಿನ ಕಡಕೊಳ ಗ್ರಾಮದಲ್ಲಿ ನಿಧನರಾದ ನಿವೃತ್ತ ರೈಲ್ವೇ ಇಲಾಖೆ ನೌಕರರಾದ ಬಸವಯ್ಯ ಅವರ ನಿವಾಸಕ್ಕೆ ಮೇಘಾಲಯದ ರಾಜ್ಯಪಾಲರಾದ ಸಿ.ಹೆಚ್.ವಿಜಯಶಂಕರ್ ಗುರುವಾರ ಭೇಟಿ ನೀಡಿ, ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ಈ ವೇಳೆ ಮಹೇಶ್, ಡೈರಿ ನಿರ್ದೇಶಕ ಸಿ.ಡಿ.ಮಹದೇವ್, ಮುಖಂಡರಾದ ದೊಡ್ಡನಂಜೇಗೌಡರು, ಮಹದೇವ, ರಮೇಶ್, ಪುರುಷೋತ್ತಮ್, ಶ್ರೀಮತಿ ಬಸಮ್ಮ ಇನ್ನಿತರರಿದ್ದರು.

ಅಂತರರಾಷ್ಟ್ರೀಯ ವಿಶೇಷಚೇತನರ ಸ್ನೂಕರ್ ಚಾಂಪಿಯನ್‌ಶಿಪ್‌ಗೆ ಅಲೋಕ್ ಜೈನ್ ಆಯ್ಕೆ



ಡಿ.14ರಂದು ಅಮೆರಿಕದ ಲಾಸ್ ಎಂಜಲೀಸ್‌ನಲ್ಲಿ ನಡೆಯುತ್ತಿರುವ ಅಂತರರಾಷ್ಟ್ರೀಯ ವಿಶೇಷ ಚೇತನರ ಸ್ನೂಕರ್ ಸ್ಪರ್ಧೆಗೆ ಭಾರತದ ಪ್ರತಿನಿಧಿಯಾಗಿರುವ ಮೈಸೂರಿನ ಅಲೋಕ್ ಜೈನ್‌ನನ್ನು ಅಭಿನಂದಿಸಲಾಯಿತು.

ಮೈಸೂರು, ಡಿ. 12–ಮೈಸೂರಿನ ಸಿದ್ಧಾರ್ಥನಗರ ನಿವಾಸಿ ಅಲೋಕ್ ಆರ್ ಜೈನ್ ಡಿ.14ರಂದು ವರ್ಲ್ಡ್ ಪೂಲ್ ಅಸೋಸಿಯೇಷನ್ ವತಿಯಿಂದ ಅಮೆರಿಕದ ಲಾಸ್ ಎಂಜಲೀಸ್‌ನಲ್ಲಿ ನಡೆಯುತ್ತಿರುವ ಅಂತರರಾಷ್ಟ್ರೀಯ ವಿಶೇಷ ಚೇತನರ ಸ್ನೂಕರ್ ಸ್ಪರ್ಧೆಗೆ ಭಾರತದ ಪ್ರತಿನಿಧಿಯಾಗಿ 7 ಜನ ಸ್ಪರ್ಧಿಸುತ್ತಿದ್ದು, ಅದರಲ್ಲಿ 5 ಜನ ಕರ್ನಾಟಕದವರು.

ಅವರಲ್ಲಿ ಮೈಸೂರಿನ ಅಲೋಕ್ ಆರ್ ಜೈನ್ ಒಬ್ಬರು. ಅವರಿಗೆ ಪಾತಿ ಫೌಂಡೇಶನ್ ವತಿಯಿಂದ ದಿವಾನ್ಸ್ ರಸ್ತೆಯಲ್ಲಿರುವ ಖಾಸಗಿ ಹೋಟೆಲ್‌ನಲ್ಲಿ ಶುಭ ಕೋರಲಾಯಿತು.

ಇದೇ ಸಂದರ್ಭದಲ್ಲಿ ನಗರಪಾಲಿಕೆ ಮಾಜಿ ಸದಸ್ಯ ಎಂ.ಡಿ.ಪಾರ್ಥಸಾರಥಿ ಮಾತನಾಡಿ, ಅಂತರರಾಷ್ಟ್ರೀಯ ಮಟ್ಟದಲ್ಲಿ ಮೈಸೂರಿನ ಹುಡುಗ ಸ್ಪರ್ಧಿಸುತ್ತಿರುವುದು ಹೆಮ್ಮೆಯ ವಿಚಾರ. ಇತ್ತೀಚಿನ ದಿನಗಳಲ್ಲಿ ವಿಶೇಷಚೇತನರು ತಮ್ಮ ನ್ಯೂನತೆ ಮೆಟ್ಟಿ ನಿಂತು, ಸಾಧನೆಗಳ ಹಾದಿಯಲ್ಲಿ ನಡೆಯುತ್ತಿರುವುದು ಶ್ಲಾಘನೀಯ ಎಂದು ಬಣ್ಣಿಸಿದರು. ಯಾವುದೇ ಸಾಧನೆ ಮಾಡಲು ಮನಸ್ಸು ಗಟ್ಟಿಯಾಗಿರಬೇಕು. ಆ ನಿಟ್ಟಿನಲ್ಲಿ ವಿಕಲಚೇತನರ ಸಾಧನೆಗೆ ಪ್ರೋತ್ಸಾಹ ನೀಡಬೇಕಾಗಿದೆ. ವಿಶೇಷ ಮಕ್ಕಳು ಹಾಗೂ ವಿಕಲಚೇತನರು ಮಾಡುವ ಸಾಧನೆಯು ಎಲ್ಲಕ್ಕಿಂತ ಮಿಗಿಲಾದ ಸಾಧನೆಯಾಗಿದೆ ಎಂದು ಹೇಳಿದರು.

ಬಿಜೆಪಿ ನಗರ ಉಪಾಧ್ಯಕ್ಷ ಜೋಗಿ ಮಂಜು, ಜೆಡಿಎಸ್ ಕಾರ್ಯಾಧ್ಯಕ್ಷ ಪ್ರಕಾಶ್ ಪ್ರಿಯದರ್ಶನ್, ಎಸ್.ಎನ್. ರಾಜೇಶ್, ಆಲನಹಳ್ಳಿ ಚೇತನ್‌ಗೌಡ, ಕಾಂಗ್ರೆಸ್ ಮುಖಂಡ ರವಿಚಂದ್ರ, ಬಿಜೆಪಿ ಮುಖಂಡ ಸಚಿನ್ ನಾಯಕ್, ಗಗನ್ ದೀಪ್, ಮಹಾನ್ ಶ್ರೇಯಸ್ ಇದ್ದರು.

ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟನೆ



ಬೊಮ್ಮೇನಹಳ್ಳಿಯಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟಿಸಲಾಯಿತು.

ಮೈಸೂರು: ತಾಲೂಕಿನ ನಾಗವಾಲ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬೊಮ್ಮೇನಹಳ್ಳಿಯಲ್ಲಿ ಪ್ರಧಾನ ಮಂತ್ರಿ ಆದರ್ಶ ಗ್ರಾಮ ಯೋಜನೆಯಡಿ ನಿರ್ಮಿಸಿರುವ ಶುದ್ಧ ಕುಡಿಯುವ ನೀರಿನ ಘಟಕವನ್ನು ಉದ್ಘಾಟಿಸಲಾಯಿತು. ಇದೇ ವೇಳೆ ನರೇಗಾ ಯೋಜನೆಯಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಅಕ್ಷರ ದಾಸೋಹ ಭವನ 15ನೇ ಹಣಕಾಸು ಯೋಜನೆಯಡಿ ಅಂಬೇಡ್ಕರ್ ಪಾರ್ಕ್ ನಿರ್ಮಾಣ ಕಾಮಗಾರಿಗೆ ಕೆಪಿಸಿಸಿ ಕಾರ್ಯದರ್ಶಿ ಹಾಗೂ ನಾಗವಾಲ ಗ್ರಾಪಂ ಮಾಜಿ ಅಧ್ಯಕ್ಷ ಸಿ.ನರೇಂದ್ರ ನಾಗವಾಲ ಗ್ರಾಪಂ ಅಧ್ಯಕ್ಷೆ ಕಾಮಾಕ್ಷಮ್ಮ ಬಸವನಾಯಕ ಚಾಲನೆ ನೀಡಿದರು.

ಶ್ರೀ ಮನೆ ಮಂಚಮ್ಮ ದೇವಸ್ಥಾನ ಸೇವಾ ಟ್ರಸ್ಟ್ ಅಧ್ಯಕ್ಷ ಹಾಗೂ ಮಾಜಿ ಗ್ರಾಪಂ ಸದಸ್ಯ ಹುಯಿಲಾಳು ರಾಮಸ್ವಾಮಿ, ಸ್ಥಾಯಿ ಸಮಿತಿ ಅಧ್ಯಕ್ಷ ಹಾಗೂ ಹಾಲಿ ಗ್ರಾಪಂ ಸದಸ್ಯ ಬಿ.ಕೆ.ಈಶ್ವರ್, ಗ್ರಾಪಂ ಮಾಜಿ ಉಪಾಧ್ಯಕ್ಷ, ಹಾಲಿ ಗ್ರಾಪಂ ಸದಸ್ಯರಾದ ಗೀತಾ ಮಾದೇವ, ಪಿ.ಮಹದೇವ್ ಸೀಗಳ್ಳಿ, ಕುಮಾರ್, ಶ್ರೀಧರ ಮುಖಂಡರಾದ ಮಾಲೇಗೌಡ ಕೋಡಿಕುಮಾರ್ ಮಾಜಿ ಗ್ರಾಪಂ ಸದಸ್ಯ ಶಿವಣ್ಣ, ನಿಂಗಯ್ಯ, ಪಾಪಣ್ಣ, ಡಿಎಸ್‌ಎಸ್ ತಾಲೂಕು ಸಂಚಾಲಕ ಶಿವಣ್ಣ, ರಾಜಣ್ಣ, ಚಂದ್ರಶೇಖರ್, ಸಿದ್ದರಾಜು, ಕಾಳಯ್ಯ, ಶಿವಕುಮಾರ್ ಸ್ವಾಮಿ, ನಾಗವಾಲ ಗ್ರಾಪಂ ಕಾರ್ಯದರ್ಶಿ ಯಶವಂತ್ ಕುಮಾರ್, ಡಾ.ಬಿ.ಆರ್.ಅಂಬೇಡ್ಕರ್ ಸಂಘದ ಪದಾಧಿಕಾರಿಗಳು, ಮಹಿಳಾ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಆರ್‌ಟಿಓ ಕಚೇರಿಗೆ ಲೋಕಾಯುಕ್ತ ದಾಳಿ, ಪರಿಶೀಲನೆ

ಮೈಸೂರು, ಡಿ.12(ಎಂಕೆ)– ಮೈಸೂರಿನ ಬಲ್ಲಾಳ್ ಸರ್ಕಲ್ ಸಮೀಪದಲ್ಲಿರುವ ಆರ್‌ಟಿಓ ಕಚೇರಿಗೆ ಗುರು ವಾರ ದಿಢೀರ್ ಭೇಟಿ ನೀಡಿದ ಲೋಕಾಯುಕ್ತ ಪೊಲೀಸ್ ಅಧಿಕಾರಿ, ಸಿಬ್ಬಂದಿಗಳು ಪರಿಶೀಲನೆ ನಡೆಸಿದ್ದಾರೆ.

ಆರ್‌ಟಿಓ ಕಚೇರಿಯಲ್ಲಿ ನೌಕರರಲ್ಲದ 5 ಮಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂಬ ದೂರಿನ ಮೇರೆಗೆ 5 ವಾಹನಗಳಲ್ಲಿ ಆಗಮಿಸಿದ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳ ತಂಡವು ಪರಿಶೀಲನೆ ನಡೆಸಿ, ಮಾಹಿತಿ ಸಂಗ್ರಹಿಸಿ ತೆರಳಿದರು. ಮೈಸೂರು ಲೋಕಾಯುಕ್ತ ಎಸ್ಪಿ ಟಿ.ಜೆ.ಉದೇಶ ಮಾರ್ಗದರ್ಶನದಲ್ಲಿ ಡಿವೈಎಸ್ಪಿ ಮ್ಯಾಥ್ಯೂ ಥಾಮಸ್, ಇನ್ಸ್‌ಪೆಕ್ಟರ್‌ಗಳಾದ ಉಮೇಶ್, ಅಶೋಕ್ ಕುಮಾರ್, ರೂಪಶ್ರೀ, ಶಶಿಕುಮಾರ್ ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

ರಾಜ್ಯ ಸರ್ಕಾರ ಮೈಸೂರು ರಾಜಮನೆತನಕ್ಕೆ 6 ವಾರದಲ್ಲಿ 3 ಸಾವಿರ ಕೋಟಿ ಪರಿಹಾರ ನೀಡಬೇಕಿದೆ!

ಬೆಂಗಳೂರು, ಡಿ.12– ಜಯಮಹಲ್ ರಸ್ತೆ ಮತ್ತು ಬಳ್ಳಾರಿ ರಸ್ತೆಗೆ ಹೊಂದಿಕೊಂಡಿರುವ 15 ಎಕರೆ 39 ಗುಂಟೆ ಭೂಮಿ ಸ್ವಾಧೀನ ಪ್ರಕ್ರಿಯೆಗೆ ಸಂಬಂಧಿಸಿದಂತೆ ಮೈಸೂರು ಮಹಾರಾಜರ ವಾರಸುದಾರರಿಗೆ ರಾಜ್ಯ ಸರ್ಕಾರ 6 ವಾರಗಳಲ್ಲಿ 3 ಸಾವಿರ ಕೋಟಿ ರೂ. ಪರಿಹಾರ ನೀಡಬೇಕಿದೆ

ವರ್ಗಾವಣೆ ಮಾಡಬಹುದಾದ ಅಭಿವೃದ್ಧಿ ಹಕ್ಕು (ಟಿಡಿಆರ್) ಪ್ರಮಾಣ ಪತ್ರದ ರೂಪದಲ್ಲಿ ಪರಿಹಾರ ನೀಡಬೇಕು ಎಂದು ಸುಪ್ರೀಂಕೋರ್ಟ್ ತೀರ್ಪು ಪ್ರಕಟಿಸಿದೆ. ಈ ತೀರ್ಪು, ಸರ್ಕಾರ ತೆಗೆದುಕೊಂಡಿದ್ದ ಇತ್ತೀಚಿನ ನಿಲುವಿಗೆ ವಿರುದ್ಧವಾಗಿದೆ.

ನ್ಯಾಯಾಲಯದ ಆದೇಶದ ಪ್ರಕಾರ, ಬಳ್ಳಾರಿ ರಸ್ತೆಗೆ ಹೊಂದಿಕೊಂಡಂತೆ ಇರುವ ಬೆಂಗಳೂರು ಅರಮನೆ ಭೂಮಿಗೆ ಬಿಬಿಎಂಪಿ ಪ್ರತಿ ಚದರ ಅಡಿಗೆ 2,83,500 ರೂ., ಜಯಮಹಲ್ ರಸ್ತೆಯಲ್ಲಿರುವ ಭೂಮಿಗೆ ಪ್ರತಿ ಚದರ ಅಡಿಗೆ 2,04,000 ರೂ. ಮಾರ್ಗಸೂಚಿ ಮೌಲ್ಯವನ್ನು ನಿಗದಿಪಡಿಸಬೇಕಾಗುತ್ತದೆ. ಹಾಗಾಗಿ ಪ್ರತಿ ಎಕರೆಗೆ 194 ಕೋಟಿ ರೂ.ಗಳಂತೆ ಭೂಸ್ವಾಧೀನ ಪ್ರಕ್ರಿಯೆಗೆ ಒಟ್ಟು 3 ಸಾವಿರ ಕೋಟಿ ರೂ. ಪರಿಹಾರ ನೀಡಬೇಕಾಗುತ್ತದೆ. ಸುಮಾರು 3 ಲಕ್ಷ ಚದರ ಮೀಟರ್‌ನ ಹೆಚ್ಚುವರಿ ನಿರ್ಮಾಣ ಪ್ರದೇಶವನ್ನು ನಿರ್ಮಿಸಲು 3 ಸಾವಿರ ಕೋಟಿ ರೂ. ಮೌಲ್ಯದ ಟಿಡಿಆರ್ ಪ್ರಮಾಣ ಪತ್ರಗಳನ್ನು ಬಿಲ್ಡರ್‌ಗಳು ಲೋಡ್ ಮಾಡಬಹುದಾಗಿದ್ದು, ಈ ಪ್ರದೇಶದಲ್ಲಿ ಬಹುಮಹಡಿ ಕಟ್ಟಡಗಳು ತಲೆ ಎತ್ತಲಿವೆ. ಏಪ್ರಿಲ್ 2024ರಲ್ಲಿ ರಾಜ್ಯ ಸರ್ಕಾರ ಬೆಂಗಳೂರು ಅರಮನೆ (ಸ್ವಾಧೀನ ಮತ್ತು ವರ್ಗಾವಣೆ) ಕಾಯಿದೆ 1996ರ ಪ್ರಕಾರ ಪ್ರತಿ ಚದರ ಮೀಟರ್‌ಗೆ 120.68 ರೂ.ಗಳಂತೆ ಅರಮನೆಯ ಭೂಮಿಯ ಮೌಲ್ಯವನ್ನು ನಿರ್ಧಾರ ಮಾಡಿತ್ತು ಸರ್ವೋಚ್ಚ ನ್ಯಾಯಾಲಯ ತನ್ನ ತೀರ್ಪಿನಲ್ಲಿ, ಮಾರುಕಟ್ಟೆ ಮೌಲ್ಯವನ್ನು ನಿಗದಿಪಡಿಸಲು ಪಕ್ಕದ ಪ್ರದೇಶಗಳಲ್ಲಿ ಚಾಲ್ತಿಯಲ್ಲಿರುವ ಮಾರ್ಗದರ್ಶಿ ಮೌಲ್ಯವನ್ನು ಗಣನೆಗೆ ತೆಗೆದುಕೊಂಡಿದೆ. ಇದು ಸರ್ಕಾರದ ಅಂದಾಜಿಗಿಂತ ಸರಿಸುಮಾರು 2,00,000 ಪಟ್ಟು ಹೆಚ್ಚಾಗಿದೆ.


ಮತ್ತೊಂದು ವಾಂತಿ ಭೇದಿ ಪ್ರಕರಣ ಪತ್ತೆ

ಮೈಸೂರು,ಡಿ.12(ಪಿಎಂ)– ಮೈಸೂರಿನ ಶಾಂತಿನಗರದ ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಯಲ್ಲಿ ಗುರುವಾರ ಮತ್ತೊಂದು ವಾಂತಿ ಭೇದಿ ಪ್ರಕರಣ ಪತ್ತೆಯಾಗಿದೆ.

ಸದರಿ ಆರೋಗ್ಯ ಕೇಂದ್ರದ ಸಿಬ್ಬಂದಿಯು ಕೇಂದ್ರದ ವ್ಯಾಪ್ತಿಯ ಪ್ರದೇಶಗಳಲ್ಲಿ 1,184 ಜನಸಂಖ್ಯೆ ಒಳಗೊಂಡ 308 ಮನೆಗಳ ಸಮೀಕ್ಷೆ ನಡೆಸಿದ ವೇಳೆ ಮತ್ತೊಂದು ವಾಂತಿ ಭೇದಿ ಪ್ರಕರಣ ಪತ್ತೆಯಾಗಿದೆ. ಅವರಿಗೆ ಸೂಕ್ತ ಚಿಕಿತ್ಸೆ ನೀಡಲಾಗುತ್ತಿದೆ. ಜೊತೆಗೆ ಐದು ನೀರಿನ ಮಾದರಿಗಳನ್ನು ಬ್ಯಾಕ್ಟಲಾಜಿಕಲ್ ಪರೀಕ್ಷೆಗಾಗಿ ಜಿಲ್ಲಾ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ ಎಂದು ಆರೋಗ್ಯ ಇಲಾಖೆ ಮೂಲಗಳು ತಿಳಿಸಿವೆ.

ಚೆನ್ನೈ–ಮೈಸೂರು ಎಕ್ಸ್‌ಪ್ರೆಸ್ ಸೂಪರ್‌ಫಾಸ್ಟ್ ರೈಲು ಕೆಳದರ್ಜೆಗೆ!

ಜನವರಿ 3 ರಿಂದ ಸಾಮಾನ್ಯ ರೈಲಾಗಿ ಕಾರ್ಯಾಚರಣೆ ಸಂಭವ



ಸಾಂದರ್ಭಿಕ ಚಿತ್ರ

ಚೆನ್ನೈ, ಡಿ.12– ಚೆನ್ನೈ–ಮೈಸೂರು ಎಕ್ಸ್‌ಪ್ರೆಸ್ ಸೂಪರ್‌ಫಾಸ್ಟ್ ರೈಲು, ಹೊಸವರ್ಷದಿಂದ ಸಾಮಾನ್ಯ ಎಕ್ಸ್‌ಪ್ರೆಸ್ ಆಗಿ ಸಂಚರಿಸಲಿದೆ ಎಂದು ಮೂಲಗಳಿಂದ ತಿಳಿದುಬಂದಿದೆ

ನೈಋತ್ಯ ರೈಲ್ವೆ ಹಾಗೂ ರೈಲ್ವೆ ಮಂಡಳಿಯ ಅನುಮೋದನೆಯ ನಂತರ ಚೆನ್ನೈ–ಮೈಸೂರು ಇಂಟರ್‌ಸಿಟಿ ಎಕ್ಸ್‌ಪ್ರೆಸ್ ರೈಲನ್ನು 2025ರ ಜನವರಿ 3 ರಿಂದ ಸೂಪರ್‌ಫಾಸ್ಟ್‌ನಿಂದ ಸಾಮಾನ್ಯ ಎಕ್ಸ್‌ಪ್ರೆಸ್ ಆಗಿ ಕೆಳದರ್ಜೆಗೆ ಇಳಿಸುವ ಸಾಧ್ಯತೆ ಇದೆ. ಸ್ಥಿರವಾದ ನಿಲುಗಡೆಯ ಹೆಚ್ಚಳದ ನಂತರ ರೈಲಿನ ಸರಾಸರಿ ವೇಗದ ಮೇಲೆ ಪರಿಣಾಮ ಬೀರಿದೆ. ಕನಿಷ್ಠ 55 ಕಿ.ಮೀ. ಸರಾಸರಿ ವೇಗವನ್ನು ನಿರ್ವಹಿಸಲು ವಿಫಲವಾದ ರೈಲುಗಳನ್ನು ಮರುವರ್ಗೀಕರಿಸುವ ರೈಲ್ವೆ ಉಪಕ್ರಮದ ಹಿನ್ನೆಲೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

ಪ್ರಯಾಣಿಕರು, ಜನಪ್ರತಿನಿಧಿಗಳು, ವ್ಯಾಪಾರಿ ಸಂಘಟನೆಗಳು ಸೇರಿದಂತೆ ವಿವಿಧ ಕ್ಷೇತ್ರದ ಪ್ರತಿನಿಧಿಗಳ ಬೇಡಿಕೆಗಳಿಗೆ ಅನುಗುಣವಾಗಿ ಕಾಲಾನಂತರದಲ್ಲಿ ಪರಿಚಯಿಸಲಾದ ಹೆಚ್ಚುವರಿ ಮಾರ್ಗದ ನಿಲುಗಡೆಗಾಗಿ ರೈಲು ಸಂಚಾರದ ವೇಗ ಕಡಿತವಾಗಿದೆ. ಚೆನ್ನೈ–ಮೈಸೂರು ಎಕ್ಸ್‌ಪ್ರೆಸ್ ಮಾತ್ರವಲ್ಲದೆ ಇನ್ನೂ ನಾಲ್ಕು ರೈಲುಗಳು ಮುಂದಿನ ಜನವರಿಯಲ್ಲಿ ಕೆಳದರ್ಜೆಗೆ ಇಳಿಯಲಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಈ ಉಪಕ್ರಮದಿಂದ ಪ್ರಯಾಣದ ದರವೂ ಕಡಿತವಾಗಲಿದೆ. ಚೆನ್ನೈ–ಮೈಸೂರು ಇಂಟರ್‌ಸಿಟಿ ಎಕ್ಸ್‌ಪ್ರೆಸ್‌ಗೆ ಟಿಕೆಟ್ ದರಗಳು ಎರಡನೇ ಸಿಟ್ಟಿಂಗ್‌ಗೆ 15 ರೂ. ಮತ್ತು ಚೇರ್ ಕಾರ್ ದರ್ಜೆಗೆ 45 ರೂ. ಕಡಿಮೆಯಾಗಬಹುದು. ಈ ರೈಲಿಗೆ ಜನವರಿ 3 ರಿಂದ 12609/12610 ರಿಂದ 16551/16552 ಎಂದು ಮರುಸಂಖ್ಯೆ ನೀಡಲಾಗುತ್ತದೆ. ರೈಲು ಪ್ರಸ್ತುತ ಚೆನ್ನೈ ಸೆಂಟ್ರಲ್ ನಿಂದ ಮಧ್ಯಾಹ್ನ 1.35ಕ್ಕೆ ಹೊರಟು, ರಾತ್ರಿ 7.55ಕ್ಕೆ ಬೆಂಗಳೂರು ನಂತರ ರಾತ್ರಿ 10.50ಕ್ಕೆ ಮೈಸೂರಿಗೆ ಆಗಮಿಸುತ್ತಿದೆ. 23 ನಿಲ್ದಾಣಗಳಲ್ಲಿ ನಿಲುಗಡೆಯೊಂದಿಗೆ 497 ಕಿ.ಮೀ. ದೂರವನ್ನು 9 ಗಂಟೆ 15 ನಿಮಿಷಗಳಲ್ಲಿ ಕ್ರಮಿಸುತ್ತದೆ. ಈ ರೈಲು ಗಂಟೆಗೆ ಸರಾಸರಿ 54 ಕಿ.ಮೀ. ವೇಗವನ್ನು ಕಾಯ್ದುಕೊಳ್ಳುತ್ತದೆ. ಆರಂಭದಲ್ಲಿ ಚೆನ್ನೈ ಮತ್ತು ಬೆಂಗಳೂರು ನಡುವೆ ಕಾರ್ಯಾಚರಿಸುತ್ತಿದ್ದ ಈ ರೈಲು 2019ರ ಜನವರಿಯಲ್ಲಿ ಮೈಸೂರಿಗೆ ವಿಸ್ತರಣೆಗೊಂಡಿತು.

ಮಾನಸಗಂಗೋತ್ರಿಯ ಜಯಲಕ್ಷ್ಮಿ ವಿಲಾಸ ಅರಮನೆಯ ಜಾನಪದ ಸಂಗ್ರಹಾಲಯದ ಪುನರುಜ್ಜೀವನ

ಚೆನ್ನೈನ ಯುಎಸ್ ಕಾನ್ಸುಲೇಟ್ ಆಫೀಸರ್‌ರಿಂದ ಕಾಮಗಾರಿಯ ಪ್ರಗತಿ ಪರಿಶೀಲನೆ



ಮೈಸೂರು, ಡಿ.12(ಆರ್‌ಕೆ)– ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿ ಆವರಣದಲ್ಲಿರುವ ಜಯಲಕ್ಷ್ಮೀ ವಿಲಾಸ ಅರಮನೆಯ ಜಾನಪದ ಸಂಗ್ರಹಾಲಯಕ್ಕೆ ಇಂದು ಚೆನ್ನೈನಲ್ಲಿರುವ ಯುಎಸ್ ಕಾನ್ಸುಲೇಟ್ ಜನರಲ್ಸ್ ಪಬ್ಲಿಕ್ ಅಫೇರ್ ಅಧಿಕಾರಿ ಜಾನೆ ಬ್ರಿಗಂಟಿ ಅವರು ಭೇಟಿ ನೀಡಿದ್ದರು.

ಸಂಗ್ರಹಾಲಯದ ಕಟ್ಟಡದಲ್ಲಿ ನಡೆಯುತ್ತಿರುವ ದುರಸ್ಥಿ ಮತ್ತು ಪುನರುಜ್ಜೀವನ ಕಾರ್ಯಕ್ಕೆ 2.4 ಕೋಟಿ ರೂ. ಅನುದಾನ ನೀಡಿರುವ ಯುಎಸ್ ಸರ್ಕಾರದ ಅಂಬಾಸಡರ್ ಪ್ರತಿನಿಧಿಯಾಗಿ ಬ್ರಿಗಂಟಿ ಅವರು ಇಂದು ಕಾಮಗಾರಿಯ ಪ್ರಗತಿ ಪರಿಶೀಲಿಸಿದರು. ಡೆಕನ್ ಹೆರಿಟೇಜ್ ಫೌಂಡೇಷನ್ (ಡಿಹೆಚ್‌ಎಫ್) ಇಂಡಿಯಾ ಪಾರಂಪರಿಕ ಕಟ್ಟಡವನ್ನು 33 ಕೋಟಿ ರೂ. ವೆಚ್ಚದಲ್ಲಿ ಕೈಗೊಂಡಿರುವ ಜಯಲಕ್ಷ್ಮಿ ವಿಲಾಸ ಅರಮನೆಯ ಜಾನಪದ ಸಂಗ್ರಹಾಲಯವನ್ನು ಸಂರಕ್ಷಿಸುವ ಕಾಮಗಾರಿಯ ಬಗ್ಗೆ ಬ್ರಿಗಂಟಿ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಸಂಗ್ರಹಾಲಯದ ಪಶ್ಚಿಮ ಭಾಗವನ್ನು ದುರಸ್ತಿಗೊಳಿಸಿ ಸಂರಕ್ಷಿಸಲು ಯುಎಸ್ ಕಾನ್ಸುಲೇಟ್ 2.4 ಕೋಟಿ ರೂ. ಅನುದಾನ ನೀಡಿರುವುದರಿಂದ ಕಾಮಗಾರಿಯನ್ನು ಪರಿಶೀಲಿಸಿ, ಗುಣಮಟ್ಟ ಹಾಗೂ ಪ್ರಗತಿಯ ಬಗ್ಗೆ ಮಾಹಿತಿ ಪಡೆದುಕೊಂಡ ಬ್ರಿಗಂಟಿ



ಅವರು ಕೆಲ ಸಲಹೆ ಮಾರ್ಗದರ್ಶನ ನೀಡಿದರು.

ಈಗಾಗಲೇ ಶೇ.50ರಷ್ಟು ಕಾಮಗಾರಿ ಪೂರ್ಣಗೊಂಡಿದ್ದು, 2025ರ ಡಿಸೆಂಬರ್ ಮಾಹೆಯೊಳಗೆ ಉಳಿದ ಕೆಲಸ ಪೂರ್ಣಗೊಳಿಸಲಾಗುವುದು ಎಂದ ಅವರು, ಪಾರಂಪರಿಕ ಶೈಲಿಯಲ್ಲಿ ಗುಣಮಟ್ಟದ ಕೆಲಸ ಮಾಡಿಸಬೇಕೆಂದು ಮೈಸೂರು ವಿಶ್ವವಿದ್ಯಾನಿಲಯದ ಅಧಿಕಾರಿಗಳಿಗೆ ಸಲಹೆ ನೀಡಿದ್ದೇನೆ ಎಂದು ತಿಳಿಸಿದರು.

ಅವರಿಗೆ ಕೆಲಸದ ಪ್ರಗತಿ ಕುರಿತಂತೆ ಆರ್ಕಿಟೆಕ್ಟ್ ಅಖಿಲಾ ಅವರು ಮಾಹಿತಿ ನೀಡಿದರು. ಜಯಲಕ್ಷ್ಮಿ ವಿಲಾಸ ಅರಮನೆ ಜಾನಪದ ಸಂಗ್ರಹಾಲಯದ ಪಾರಂಪರಿಕ ಕಟ್ಟಡವನ್ನು ಪುನರುಜ್ಜೀವನಗೊಳಿಸಿ ಸಂರಕ್ಷಿಸಲು ತಾವೂ ಕೈ ಜೋಡಿಸುವುದಾಗಿ ತಿಳಿಸಿದ ಜಾನ್ ಬ್ರಿಗಂಟಿ ಅವರು, ಪ್ರತೀ ಹಂತದಲ್ಲೂ ಪಾರಂಪರಿಕ ಶೈಲಿಯಲ್ಲಿ ದುರಸ್ತಿ ಕಾರ್ಯ ನಡೆಯುತ್ತಿದೆ ಎಂದು ಸುದ್ದಿಗಾರರಿಗೆ ತಿಳಿಸಿದರು.

ಶಿಥಿಲಾವಸ್ಥೆಯಲ್ಲಿರುವ ಮಾನಸಗಂಗೋತ್ರಿಯ ಜಯಲಕ್ಷ್ಮಿ ವಿಲಾಸ ಅರಮನೆ ಕಟ್ಟಡ ದುರಸ್ತಿಗೊಳಿಸಿ ಸಂರಕ್ಷಿಸಲು ಯುಎಸ್ ಸರ್ಕಾರದ ಅಂಬಾಸಡರ್ಸ್ ಫಂಡ್ ಫಾರ್ ಕಲ್ಚರಲ್ ಪ್ರಿಸರ್ವೇಷನ್ (ಎಎಫ್‌ಸಿಪಿ) ಮುಂದಾಗಿರುವುದರಿಂದ ತಾವು ಇಂದು ಕೆಲಸದ ಪ್ರಗತಿ ಪರಿಶೀಲಿಸಿರುವುದಾಗಿ ತಿಳಿಸಿದರು.

ಎಫ್‌ಸಿಎ ಹಾಗೂ ಶರೀಫ್ ಅಂಡ್



ಜಿನ್ ಷಾ ಫೌಂಡೇಷನ್‌ನೊಂದಿಗೆ 2024ರ ಜನವರಿ ಮಾಹೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಒಡಂಬಡಿಕೆ ಮಾಡಿಕೊಳ್ಳಲಾಗಿದ್ದು, ಇದೀಗ ಶೇ.50ರಷ್ಟು ಕಾಮಗಾರಿ ಪೂರ್ಣಗೊಂಡಿದೆ ಎಂದು ತಿಳಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಾಂಗ ಕುಲಸಚಿವ ಪ್ರೊ.ಎನ್. ನಾಗರಾಜು, ಜಯಲಕ್ಷ್ಮೀ ವಿಲಾಸ ಮ್ಯಾನ್ಷನ್ ನಿರ್ದೇಶಕ ಡಾ.ಸಿ.ಗುರುಸಿದ್ದಯ್ಯ ಸೇರಿದಂತೆ ಹಲವರು ಪ್ರಗತಿ ಪರಿಶೀಲನೆ ವೇಳೆ ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

ಸಿಎಂ, ಡಿಸಿಎಂ ಸೇರಿ ಹಲವರಿಗೆ ಜಿಲ್ಲಾಡಳಿತದಿಂದ ಆಹ್ವಾನ



ಬೆಳಗಾವಿಯ ಸುವರ್ಣಸೌಧದ ಮುಖ್ಯಮಂತ್ರಿಗಳ ಕಚೇರಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ನೇತೃತ್ವದಲ್ಲಿ, ಮಂಡ್ಯದಲ್ಲಿ ನಡೆಯಲಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಅಧಿಕೃತ ಆಹ್ವಾನ ನೀಡಲಾಯಿತು.

ಮಂಡ್ಯ,ಡಿ.12– ಮಂಡ್ಯದಲ್ಲಿ ಡಿಸೆಂಬರ್ 20 ರಿಂದ 22ರವರೆಗೆ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಉದ್ಘಾಟನೆಗಾಗಿ ಹಲವು ಗಣ್ಯರನ್ನು ಮಂಡ್ಯ ಜಿಲ್ಲಾಡಳಿತದ ವತಿಯಿಂದ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯ ಸ್ವಾಮಿ ನೇತೃತ್ವದಲ್ಲಿ ಆಹ್ವಾನಿಸಲಾಯಿತು.

ಬೆಳಗಾವಿಯ ಸುವರ್ಣಸೌಧದ ಮುಖ್ಯಮಂತ್ರಿಗಳ ಕಚೇರಿಗೆ ತೆರಳಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯ ಸ್ವಾಮಿ ಗುರುವಾರ ಅಧಿಕೃತವಾಗಿ ಆಹ್ವಾನಿಸಿದರು.

ಬಳಿಕ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್, ಸಚಿವರಾದ ಶಿವರಾಜ್ ತಂಗಡಗಿ, ಕೆ.ಎಚ್.ಮುನಿಯಪ್ಪ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್, ಗೃಹ ಸಚಿವ ಡಾ.ಜಿ.ಪರಮೇಶ್ವರ್ ಸೇರಿದಂತೆ ಹಲವು ಸಚಿವರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಲಾಯಿತು.

ಈ ಸಂದರ್ಭದಲ್ಲಿ ಶಾಸಕರಾದ ರವಿಕುಮಾರ್ ಗಣಿಗ, ರಮೇಶ್ ಬಂಡಿಸಿದ್ದೇಗೌಡ, ಮಧು ಜಿ.ಮಾದೇಗೌಡ, ದಿನೇಶ್‌ಗೂಳಿಗೌಡ, ಕೆ.ಎಂ.ಉದಯ್‌ಗೌಡ, ಪಿ.ಎಂ.ನರೇಂದ್ರಸ್ವಾಮಿ, ಕಸಾಪ ಅಧ್ಯಕ್ಷ ಮಹೇಶ್ ಜೋಶಿ, ಜಿಲ್ಲಾಧಿಕಾರಿ ಡಾ.ಕುಮಾರ್ ಸೇರಿದಂತೆ ಇತರ ಗಣ್ಯರು ಹಾಜರಿದ್ದರು.

ರಸಪ್ರಶ್ನೆ ಸ್ಪರ್ಧಾ ಪರೀಕ್ಷೆ ಪ್ರಶ್ನೆ ಪತ್ರಿಕೆ ಬಿಡುಗಡೆ

ಮಂಡ್ಯ,ಡಿ.12– ಪ್ರತಿಯೊಬ್ಬರಲ್ಲಿಯೂ ಕನ್ನಡ ಸಾಹಿತ್ಯ ಪ್ರಜ್ಞೆ ಬೆಳೆಯಬೇಕು ಎಂಬುದು ಸಾಹಿತ್ಯ ಸಮ್ಮೇಳನದ ಉದ್ದೇಶವಾಗಿದೆ ಎಂದು ಕನ್ನಡ ಸಾಹಿತ್ಯ ಪರಿಷತ್‌ನ ಜಿಲ್ಲಾ ಸಂಚಾಲಕಿ ಡಾ.ಮೀರಾಶಿವಲಿಂಗಯ್ಯ ಅವರು ತಿಳಿಸಿದರು.

ಅವರು ಇಂದು ಸರ್ಕಾರಿ ಪದವಿ ಪೂರ್ವ ಕಾಲೇಜು ಕಲ್ಲುಕಟ್ಟಡದಲ್ಲಿ ನಡೆದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಪ್ರಚಾರ ಸಮಿತಿ ವತಿಯಿಂದ ಇಡೀ ಜಿಲ್ಲೆಯಾದ್ಯಂತ ಕಾಲೇಜು ವಿದ್ಯಾರ್ಥಿಗಳಿಗೆ ಏಕಕಾಲದಲ್ಲಿ ಕನ್ನಡ ನಾಡು, ನುಡಿ, ಸಂಸ್ಕೃತಿ, ಸಾಹಿತ್ಯ ಮತ್ತು ವಿಶೇಷವಾಗಿ ಮಂಡ್ಯ ಜಿಲ್ಲಾ ಸಾಹಿತ್ಯ ಇತಿಹಾಸ ವೈಶಿಷ್ಟ್ಯಗಳ ಕುರಿತ ಹಮ್ಮಿಕೊಳ್ಳಲಾಗಿರುವ ರಸಪ್ರಶ್ನೆ ಸ್ಪರ್ಧಾ ಪರೀಕ್ಷೆ ಪ್ರಶ್ನೆಪತ್ರಿಕೆಯನ್ನು ಬಿಡುಗಡೆ ಮಾಡುವ ಮೂಲಕ ಚಾಲನೆ ನೀಡಿ ಮಾತನಾಡಿದರು.

ಜಿಲ್ಲೆಯಾದ್ಯಂತ ಪದವಿ ಪೂರ್ವ ಕಾಲೇಜಿನ ಮಕ್ಕಳಿಗೆ ರಸಪ್ರಶ್ನೆ ಸ್ಪರ್ಧಾ ಪರೀಕ್ಷೆಯು ಏಕ ಕಾಲದಲ್ಲಿ ನಡೆಯುತ್ತಿದ್ದು, ಇದರಲ್ಲಿ ಜಿಲ್ಲೆಯಲ್ಲಿ ಸುಮಾರು 157 ಪದವಿ ಪೂರ್ವ ಕಾಲೇಜುಗಳಿದ್ದು ಅದರಲ್ಲಿ ಸುಮಾರು 28,000 ಮಕ್ಕಳು ಈ ಪರೀಕ್ಷೆಯಲ್ಲಿ ಭಾಗವಹಿಸಲಿದ್ದಾರೆ. ಕಾಲೇಜು, ತಾಲೂಕು ಮತ್ತು ಜಿಲ್ಲಾ ಹಂತದಲ್ಲಿ ಪರೀಕ್ಷೆ ನಡೆಯಲಿದ್ದು, ಜಿಲ್ಲೆಯಲ್ಲಿ ಆಯ್ಕೆಗೊಂಡ ವಿಜೇತ ಮಕ್ಕಳಿಗೆ



ರಸಪ್ರಶ್ನೆ ಸ್ಪರ್ಧಾ ಪರೀಕ್ಷೆ ಪ್ರಶ್ನೆಪತ್ರಿಕೆಯನ್ನು ಬಿಡುಗಡೆ ಮಾಡುತ್ತಿರುವ ಗಣ್ಯರು.

ಸಾಹಿತ್ಯ ಸಮ್ಮೇಳನ ಪ್ರಧಾನ ವೇದಿಕೆಯಲ್ಲಿ ಬಹುಮಾನ ಮತ್ತು ಪ್ರಮಾಣ ಪತ್ರ ವಿತರಿಸಲಾಗುತ್ತದೆ ಎಂದು ಹೇಳಿದರು.

1974 ರಲ್ಲಿ ಮಂಡ್ಯದಲ್ಲಿ ಮೊದಲ ಬಾರಿಗೆ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ನಡೆಯಿತು. ಎರಡನೇ ಸಮ್ಮೇಳನವು 1994ರಲ್ಲಿ ನಡೆದಿತ್ತು. ಇದೀಗ 3ನೇ ಬಾರಿಗೆ 30 ವರ್ಷಗಳ ನಂತರ ನಡೆಯುತ್ತಿರುವುದು ಒಂದು ರೀತಿಯ ಹಬ್ಬದ ವಾತಾವರಣ ನಿರ್ಮಾಣವಾಗಿದೆ. ಕನ್ನಡ ಸಾಹಿ ತ್ಯಕ್ಕೆ ಸಂಬಂಧಿಸಿದ ರಸಪ್ರಶ್ನೆ ಸ್ಪರ್ಧೆಯನ್ನು ನಡೆಸುವ ಉದ್ದೇಶವೆಂದರೆ ಕನ್ನಡ ಪ್ರಜ್ಞೆ, ಕನ್ನಡ ಪ್ರೇಮ ಬರಲಿ ಹಾಗೂ ಕನ್ನಡ ಬಗ್ಗೆ ಅಭಿಮಾನದ ಭಾವ ಮೂಡಲಿ ಎಂಬುದಾಗಿದೆ ಎಂದರು.

ಪ್ರವಾಸೋದ್ಯಮ ಇಲಾಖೆ ಉಪ ನಿರ್ದೇಶಕ ರಾಘವೇಂದ್ರ ಅವರು ಮಾತನಾಡಿ, 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ಮಂಡ್ಯ ಜಿಲ್ಲೆಯಲ್ಲಿ ನಡೆಯುತ್ತಿರುವುದು ಬಹಳ ಸಂತೋಷದ ವಿಷಯವಾಗಿದೆ. ಪ್ರತಿಯೊಬ್ಬರೂ ಕನ್ನಡ ಭಾಷೆಯನ್ನು ನಶಿಸಿ ಹೋಗಲಿಕ್ಕೆ ಬಿಡದೆ ಕನ್ನಡವನ್ನು ಅಗಾಧವಾಗಿ ಬೆಳೆಸಿ, ಉಳಿಸಿ ಕೊಳ್ಳಬೇಕು ಎಂದು ತಿಳಿಸಿದರು.

ಸರ್ಕಾರಿ ಪದವಿ ಪೂರ್ವ ಕಾಲೇಜು ಕಲ್ಲು ಕಟ್ಟಡದ ಪ್ರಾಂಶುಪಾಲ ತಮ್ಮೇಗೌಡ ಮಾತನಾಡಿ, ಜಿಲ್ಲೆಯಲ್ಲಿ ಅತ್ಯಂತ ವೈಭವದಿಂದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯುತ್ತಿದೆ. ಎಲ್ಲಾ ವಿದ್ಯಾರ್ಥಿಗಳು ಕೂಡ ಪೋಷಕರೊಂದಿಗೆ ಸಮ್ಮೇಳನದಲ್ಲಿ ಪಾಲ್ಗೊಂಡು ಸಹಕಾರ ನೀಡಬೇಕು ಎಂದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನ ಗೌರವ ಕಾರ್ಯದರ್ಶಿ ಡಾ.ಹುಸ್ಕೂರು ಕೃಷ್ಣೇಗೌಡ ಅವರು ಮಾತನಾಡಿ, ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಇಡೀ ರಾಜ್ಯದಿಂದ ಕನ್ನಡಿಗರು ಆಗಮಿಸಲಿದ್ದು, ಕಾರ್ಯಕ್ರಮದಲ್ಲಿ ಕನ್ನಡ ಸಂಸ್ಕೃತಿಯನ್ನು ಮೆರೆಯಲಾಗುತ್ತದೆ. ಸಮ್ಮೇಳನದಲ್ಲಿ ಕನ್ನಡ ಕವಿಗಳು, ವಿಶೇಷ ಲೇಖನಗಳು, ವಿಚಾರ ಗೋಷ್ಠಿಗಳು, ಸಾಂಸ್ಕೃತಿಕ ಕಾರ್ಯಕ್ರಮಗಳ ಲಾಭವನ್ನು ಪಡೆದುಕೊಳ್ಳಲು ಎಲ್ಲರೂ ಸಮ್ಮೇಳನದಲ್ಲಿ ಭಾಗವಹಿಸಿ ಎಂದರು.

ಕಾರ್ಯಕ್ರಮದಲ್ಲಿ ಪ್ರಶ್ನೆ ಪತ್ರಿಕೆ ತಯಾರಕರುಗಳಾದ ಮಹೇಶ್, ಶಿವರಾಮು, ಕ.ಸಾಪ. ಕೋಶಾಧ್ಯಕ್ಷ ಅಪ್ಪಾಜಪ್ಪ, ತಾಲೂಕು ಅಧ್ಯಕ್ಷ ಚಂದ್ರಲಿಂಗು, ರಂಗಸ್ವಾಮಿ, ಪ್ರಚಾರ ಸಮಿತಿಯ ಸದಸ್ಯ ಕಬ್ಬನಹಳ್ಳಿ ಶಂಭು, ಈವೆಂಟ್ಸ್ ಅಧ್ಯಕ್ಷ ಸಬ್ಬನಹಳ್ಳಿ ಶಶಿಧರ್, ಧನಂಜಯ ದಾಸರಗುಪ್ಪೆ, ಹೊಳಲು ಶ್ರೀಧರ್, ಎಂ.ಮಂಚಶೆಟ್ಟಿ, ಉಪನ್ಯಾಸಕ ಹುಚ್ಚೇಗೌಡ, ಚಿಕ್ಕತಿಮ್ಮಯ್ಯ, ಕಿರಣ ಅಮು ಉಪಸ್ಥಿತರಿದ್ದರು.

ಇಂದು ನಾಗನಕೆರೆ ಬಳಿ ದಾಸಯ್ಯ ಪರಂಪರೆಯ ಗಿಡದ ಜಾತ್ರೆ

ದೇವಲಾಪುರ,ಡಿ.12– ಶ್ರೀ ವೆಂಕಟೇಶ್ವರ ಭಕ್ತಾದಿಗಳ ಪರಂಪರೆಯ ಇತಿಹಾಸವುಳ್ಳ ದಾಸಯ್ಯರು ಒಂದೆಡೆ ಸಮಾಗಮಗೊಳ್ಳುವುದು ಗಿಡದ ಜಾತ್ರೆಯ ವಿಶಿಷ್ಟ.

ಗಿಡದ ಜಾತ್ರೆಯು ಪ್ರತಿ ವರ್ಷ ಡಿಸೆಂಬರ್ ತಿಂಗಳ ಮೊದಲನೇ ಅಥವಾ ಕೊನೆಯ ವಾರದಲ್ಲಿ ಜರುಗುತ್ತದೆ ಈ ಬಾರಿ ಡಿ.13 ರಂದು ಬೆಳಿಗ್ಗೆಯಿಂದ ಸಂಜೆವರೆಗೂ ಜರುಗುತ್ತದೆ.

ಗಿಡದ ಜಾತ್ರೆಯು ನಾಗಮಂಗಲ ತಾಲೂಕು ದೇವಲಾಪುರ ಹೋಬಳಿ ಸಮೀಪ ಇರುವ ನಾಗನಕೆರೆ ಬಳಿ ನಡೆಯುತ್ತದೆ

ಈ ಜಾತ್ರೆಯಲ್ಲಿ ರೈತರಿಗೆ ಬೇಕಾಗುವ ಒಕ್ಕಣೆಯ ಸಾಮಗ್ರಿಗಳು, ತಿಂಡಿ–ತಿನಿಸುಗಳು, ಜವನ, ಬಾಳೆಹಣ್ಣು ಅತಿ ಹೆಚ್ಚು ಮಾರಾಟ ಮಾರಾಟವಾಗುತ್ತದೆ.

ಈ ಜಾತ್ರೆಯು ಕಾಡಿನ ಮಧ್ಯೆ ನಡೆದರೂ ಗೋವಿಂದನ ಘೋಷ ಶಂಕು ಜಾಗಟೆಯ ನೀನಾದ ಜೋರಾಗಿರುತ್ತದೆ.

ತಿರುಪತಿಗೆ ಹೋಗಲು ಸಾಧ್ಯವಾಗದವರು ಈ ಕ್ಷೇತ್ರಕ್ಕೆ ಬಂದು ತಿಮ್ಮಪ್ಪನ ದರ್ಶನ



ಪಡೆಯುವುದರಿಂದ ಇದಕ್ಕೆ ಚಿಕ್ಕ ತಿರುಪತಿ ಎಂಬ ಹೆಸರು ಬಂದಿದ್ದು, ಕೆರೆ ದಂಡೆಯ ಗಿಡದ ಕೆಳಗೆ ದೇವರಿಗೆ ಎಡೆಯಿಟ್ಟು ಪೂಜಿಸುವುದರಿಂದ ಗಿಡದ ಜಾತ್ರೆಯಾಗಿ ಜನವಲಯದಲ್ಲಿ ಉಳಿದು ಬಂದಿದೆ.

ಜಾತ್ರೆ ಸಮಯದಲ್ಲಿ ಇಲ್ಲಿ ಹರಕೆ ತೀರಿಸಲು ರಾಜ್ಯ ಹಾಗೂ ಹೊರರಾಜ್ಯಗಳಿಂದಲೂ ಭಕ್ತರು ಬರುತ್ತಾರೆ. ಹೀಗೆ ಬರುವ ದಾಸಪ್ಪಂದಿರು ತಮ್ಮ ಜೋಳಿಗೆಯಲ್ಲಿ ದೇವರನ್ನು ತಂದು ನಾಗನಕೆರೆ ದಂಡೆಯ ಗಿಡದ ಪ್ರದೇಶಗಳಲ್ಲಿಟ್ಟು ಪೂಜಿಸುತ್ತಾರೆ. ಈ ಸಂಪ್ರದಾಯ ಬಹಳ ಹಿಂದಿನ ಕಾಲದಿಂದಲೂ ನಡೆದುಕೊಂಡು ಬಂದಿದೆ.

ಬೆಟ್ಟದ ಗುಡಿಯ ಮೇಲೆ ಜಾತ್ರೆ ಸಂಭ್ರಮ: ಗಿಡದ ಜಾತ್ರೆಯು ಮಾಮೂಲಿಯಾಗಿ ಕೆರೆಯ ದಡದಲ್ಲಿ ನಡೆಯುತ್ತಿದ್ದು, ಹಳೆಯ ಶ್ರೀ ವೆಂಕಟೇಶ್ವರ ಸ್ವಾಮಿಯ ದೇವಾಲಯ ಪಾಳು ಬಿದ್ದು ತದನಂತರದಲ್ಲಿ ನೂತನ ದೇವಾಲಯ ನಿರ್ಮಾಣವಾಗಿ ಬೆಟ್ಟದ ಗುಡಿ ಎಂದು ಪ್ರಸಿದ್ಧಿ ಪಡೆದು ಬೆಟ್ಟದ ಮೇಲ್ಭಾಗದಲ್ಲಿ ಪೂಜೆ ಜಾತ್ರೆ ನಡೆಯುತ್ತದೆ

ಭಕ್ತಾದಿಗಳು ದಾಸಪ್ಪನಿಗೆ ಮಧ್ಯೆ ಹರಕೆ ನೀಡುವುದು ವಿಶೇಷವಾಗಿದ್ದು ಜಾತ್ರೆಯಲ್ಲಿ ವಿಶೇಷ ಭೋಜನಗಳ ಮಾರಾಟದ ವ್ಯವಸ್ಥೆ ಇದ್ದು ಭಕ್ತಾದಿಗಳು ವೆಂಕಟೇಶ್ವರನ ಕೃಪೆಗೆ ಭಾಜನರಾಗುತ್ತಾರೆ

ನಾಳೆ, ನಾಡಿದ್ದು ಒಕ್ಕಲಿಗ ಮಹಾ ಸಂಸ್ಥಾನ ಮಠದ ನೂತನ ಪಟ್ಟಾಧಿಕಾರ ಮಹೋತ್ಸವ

ಎಡಿಸಿಯಾಗಿದ್ದ ಡಾ.ಎಚ್.ಎಲ್.ನಾಗರಾಜು, ಚಂದ್ರಶೇಖರ ಸ್ವಾಮೀಜಿ ಉತ್ತರಾಧಿಕಾರಿಯಾಗಿ ಅಧಿಕಾರ ಸ್ವೀಕಾರ

ಮಂಡ್ಯ,ಡಿ.12– ವಿಶ್ವ ಒಕ್ಕಲಿಗ ಮಹಾ ಸಂಸ್ಥಾನ ಮಠದ ನೂತನ ಪಟ್ಟಾಧಿಕಾರ ಮಹೋತ್ಸವ ಕಾರ್ಯಕ್ರಮವನ್ನು ಡಿಸೆಂಬರ್ 14 ಮತ್ತು 15ರಂದು ಬೆಂಗಳೂರಿನ ವಿಶ್ವ ಒಕ್ಕಲಿಗ ಮಹಾಸಂಸ್ಥಾನ ಮಠದ ಶ್ರೀ ಗುರುಜ್ಞಾನ ಕೇಂದ್ರ ಟ್ರಸ್ಟ್‌ನಲ್ಲಿ ಹಮ್ಮಿಕೊಳ್ಳಲಾಗಿದ್ದು, ಮಂಡ್ಯ ಅಪರ ಜಿಲ್ಲಾಧಿಕಾರಿಯಾಗಿ ಜನಪರ ಸೇವೆ ಸಲ್ಲಿಸಿದ್ದ ಡಾ.ಎಚ್.ಎಲ್.ನಾಗರಾಜು, ಹಾಲಿ ಪೀಠಾಧಿಪತಿ ಡಾ.ಚಂದ್ರಶೇಖರ ಸ್ವಾಮೀಜಿ ಅವರ ಉತ್ತರಾಧಿಕಾರಿಯಾಗಿ ನೇಮಕವಾಗಲಿದ್ದಾರೆ ಎಂದು ಜನದನಿ ಬಳಗದ ಅಧ್ಯಕ್ಷ ಲಂಕೇಶ್ ಮಂಗಲ ತಿಳಿಸಿದರು

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಮು, ಸದರಿ ಕಾರ್ಯಕ್ರಮದ ಧಾರ್ಮಿಕ ವಿಧಿಗಳನ್ನು ಶ್ರೀ ಕುಮಾರ ಚಂದ್ರಶೇಖರನಾಥ ಮಹಾಸ್ವಾಮಿಗಳು ಉತ್ತರಾಧಿಕಾರಿಗೆ ನೆರವೇರಿಸಲಿದ್ದು, ಡಿ.14ರ ಸಂಜೆ 6 ಗಂಟೆಯಿಂದ



ಡಾ.ಎಚ್.ಎಲ್.ನಾಗರಾಜು

ಗಂಗೆಪೂಜೆ, ಶಿವಪಾರ್ವತಿಯರ ಪೂಜೆ, ಗಣಪತಿ ಪೂಜೆ, ಸ್ವಸ್ತಿ ಪುಣ್ಯಾಹ ವಾಚನ, ನಾಂದಿ ಸಮಾರಾಧನ, ರಕ್ಷಾ ಬಂಧನ, ವಾಪನ, ಸ್ನಪನ, ಪೋಷಕರಿಂದ ರಕ್ತ ಸಂಬಂಧದ ತ್ಯಾಗ ಮತ್ತು ಸಮಾಜಕ್ಕೆ ಉತ್ತರಾಧಿಕಾರಿಯ ಸಮರ್ಪಣೆ ಕಾರ್ಯಗಳು ನಡೆಯಲಿವೆ ಎಂದು ತಿಳಿಸಿದರು.

ಡಿ.15ರ ಬೆಳಿಗ್ಗೆ 6ರಿಂದ ನಡೆಯಲಿರುವ ಪಟ್ಟಾಧಿಕಾರ ಮಹೋತ್ಸವ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಗೂಳೂರು ಮಹಾ ಸಂಸ್ಥಾನಮಠದ ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಮಹಾಸ್ವಾಮಿಗಳು ವಹಿಸಲಿದ್ದು, ಅಧ್ಯಕ್ಷತೆಯನ್ನು ತರಳಬಾಳು ಜಗದ್ಗುರು ಶಾಖಾಮಠದ ಡಾ.ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ವಹಿಸುವರು, ಬೇಲಿಮಠ ಸಂಸ್ಥಾನದ ಶಿವಾನುಭವ ಚರಮೂರ್ತಿ ಶಿವರುದ್ರ ಮಹಾಸ್ವಾಮಿಗಳು ಸದಾಶಯ ನುಡಿಗಳನ್ನಾಡುವರು ಎಂದರು.

ಈ ವೇಳೆ ಕ್ಷೇತ್ರದೈವ ಮಹಾಮೇರು ಪಂಚಮುಖಿಗಣಪತಿಗೆ ರುದ್ರಾಭಿಷೇಕ, ನವದೇವತಾ ಪೂಜೆ, ಏಕಾದಶರುದ್ರ ಕಲಶ ಪೂಜೆ, ಅಷ್ಟಭೈರವ ಕಲಶಪೂಜೆ, ಸಭಾಪೂಜೆ ನಂತರ ವಿವಿಧ ಸ್ವಾಮೀಜಿಗಳಿಂದ ಹನ್ನೊಂದು ನದಿಗಳ ಜಲದ ಅಭಿಷೇಕವನ್ನು ಉತ್ತರಾಧಿಕಾರಿಗಳಿಗೆ ನೀಡುವರು ಎಂದು ಹೇಳಿದರು.

ಪಟ್ಟಾಧಿಕಾರ ಮಹೋತ್ಸವದಲ್ಲಿ ಹಲವು ಪೀಠಗಳ ಸ್ವಾಮಿಗಳು ಭಾಗವಹಿಸಲಿದ್ದಾರೆ. ಅಂತೆಯೇ ಡಿ.15ರ ಬೆಳಿಗ್ಗೆ 10.30ಕ್ಕೆ ನೂತನ ಪೀಠಾಧ್ಯಕ್ಷರಿಗೆ ಶುಭ ಹಾರೈಕೆಯ ಸಮಾರಂಭ ನಡೆಯಲಿದ್ದು, ರಾಜ್ಯದ ಮಹಾಸಂಸ್ಥಾನ ಮಠಗಳು ಹಾಗೂ ಪೀಠಗಳ ಪೀಠಾಧಿಪತಿಗಳು ಹಾಗೂ ಸ್ವಾಮೀಜಿಗಳು ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಮಾಜಿ ಪ್ರಧಾನಮಂತ್ರಿ ಹೆಚ್.ಡಿ.ದೇವೇಗೌಡ ಅವರು ಘನ ಉಪಸ್ಥಿತಿ ವಹಿಸಲಿದ್ದು, ಹಲವು ಗಣ್ಯರು ಪಾಲ್ಗೊಳ್ಳಲಿದ್ದಾರೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಕಸಾಪ ನಗರ ಅಧ್ಯಕ್ಷೆ ಸುಜಾತ ಕೃಷ್ಣ, ನೆಲದನಿ ಬಳಗದ ಸದಸ್ಯರಾದ ಕುಮಾರ್ ಗೌಡ, ರಕ್ಷಿತ್, ಪ್ರಭುಸ್ವಾಮಿ ಇದ್ದರು.

ಒಂದನೇ ಪುಟದಿಂದ

ಮುಖ್ಯಮಂತ್ರಿ ಹುದ್ದೆ ಕಿತ್ತುಕೊಳ್ತೀರಾ...!

ರುದ್ರ ತಾಂಡವ ಮಾಡುತ್ತಿದ್ದೀಯಾ, ಬೆಳಗ್ಗೆ ನೋಡೋಣ ಎಂದರು. ಕೃಷ್ಣ ಅವರ ಧರ್ಮಪತ್ನಿ ಹಾಗೂ ಮಗಳು 'ಜ್ಯೋತಿಷಿಗೆ ಮಾತನಾಡಿದ್ದೇವೆ, ಈಗ ನಿನ್ನ ಟೈಮ್ ಸರಿಯಿಲ್ಲ' ಎಂದರು. 'ನಾನೂ ಸಹ ಜ್ಯೋತಿಷ್ಯ ಕೇಳಿಸಿದ್ದೇನೆ, ಮಂತ್ರಿ ಆಗಲೇಬೇಕು' ಬೇಕಾದರೆ, ಅವರನ್ನೇ ಕೇಳಿ, ನಾನು ಮಂತ್ರಿಯಾಗಬೇಕು ಅಷ್ಟೆ ಎಂದು ಪಟ್ಟು ಹಿಡಿದೆ. ನಂತರ ಕೃಷ್ಣ ಅವರು, ಪ್ರಮಾಣವಚನ ಸಮ ಯವನ್ನೇ ಮುಂದೂಡಿ ವರಿಷ್ಠರ ಮನವೊಲಿಸಿ, ನಮ್ಮನ್ನೂ ಮಂತ್ರಿಮಂಡಲಕ್ಕೆ ಸೇರ್ಪಡೆ ಮಾಡಿಕೊಂಡರು ಎಂದು ಎಸ್.ಎಂ. ಕೃಷ್ಣ ಜೊತೆಗಿನ ನೆನಪು ಹಂಚಿಕೊಂಡರು.

ಈ ವೇಳೆ ಮಧ್ಯ ಪ್ರವೇಶ ಮಾಡಿದ ವಿಪಕ್ಷ ನಾಯಕ ಆರ್.ಅಶೋಕ್, ಸರ್ ನೀವು ನಿಮ್ಮ ಇತಿಹಾಸ ಹೇಳಿದ್ರಿ, ಈಗಲೂ ಅದೇ ರೀತಿ ಮಾಡ್ತೀರಾ? ಯಾಕೆಂದರೆ ಎರಡೂವರೆ, ಎರಡೂವರೆ (ಸಿಎಂ ಸ್ಥಾನ ಅಧಿಕಾರ ಶೇರಿಂಗ್) ಇದೆಯಲ್ಲ. ಕೃಷ್ಣ ಅವರಿಂದ ನಿಮಗೆ ಒಳ್ಳೆಯದಾಗಿದೆ. ಒದ್ದು ಕಿತ್ತುಕೊಳ್ಳಬೇಕು ಎಂದು ನೀವೇ ಹೇಳಿದ್ರಿ ಈಗ ಸಿಎಂ ಸ್ಥಾನವನ್ನು ಯಾವಾಗ ಒದ್ದು ಕಿತ್ತುಕೊಳ್ತೀರಿ? ಯಾವಾಗ ಮುಹೂರ್ತ ಫಿಕ್ಸ್ ಮಾಡಿದ್ದೀರಾ? ಎಂದು ಪ್ರಶ್ನಿಸಿದ್ದಲ್ಲದೆ, ಶಿವಕುಮಾರ್ ಅವರೇ ನಿಮ್ಮ ಜ್ಯೋತಿಷಿ ನನಗೂ ಗೊತ್ತು. ಅವರ ಬಳಿ ನಾನು ನಿಮ್ಮ ಜೋತಿಷ್ಯ ಕೇಳಿದ್ದೇನೆ. ಜನವರಿಯೊಳಗೆ ಸಿಎಂ ಆದ್ರೆ ಆಗ್ತೀರಿ. ಇಲ್ಲ ಅಂದ್ರೆ ಆಗಲ್ಲ ಎಂದಿದ್ದಾರೆ. ನಂತರ ಗ್ರಹ–ಗತಿಗಳು ಚೆನ್ನಾಗಿಲ್ಲ. ಹಾಗಾಗಿ ಆದಷ್ಟು ಬೇಗ ರೋಷ, ವೇಷ ತೋರಿಸಿ ಸಿಎಂ ಸ್ಥಾನ ಕಿತ್ತುಕೊಳ್ಳಿ ಅನ್ನೋ ಮೂಲಕ ಡಿಕೆಶಿಯವರ ಕಾಲೆಳೆದರು.

ಇದಕ್ಕೆ ದನಿಗೂಡಿಸಿದ ನರಗುಂದ ಶಾಸಕ ಸಿ.ಸಿ.ಪಾಟೀಲ, ಡಿಕೆಶಿಯವರೇ, ಜನವರಿಯೊಳಗೆ ಸಿಎಂ ಆಗಿಬಿಡಿ. ನಿಮ್ಮ ನೇತೃತ್ವದಲ್ಲೇ ನಮ್ಮ ಪಂಚಮಸಾಲಿ ಸಮುದಾಯಕ್ಕೆ ಮೀಸಲಾತಿ ಸಿಗಲಿ ಎಂದು ಛೇಡಿಸಿದರು. ಡಿಕೆಶಿ ಬೆಂಬಲಕ್ಕೆ ಬಂದ ಸಚಿವ ಪ್ರಿಯಾಂಕ್ ಖರ್ಗೆ, ನಮ್ಮ ಪಾರ್ಟಿ ಕಥೆ ಬಿಡಿ, ನಿಮ್ಮದು ಬಿಜೆಪಿಯೋ, ವೈಜೆಪಿಯೋ. ನಿಜವಾದ ಬಿಜೆಪಿ ಯಾವುದು ಎಂದು ತಿಳಿದುಕೊಳ್ಳಿ ಎಂದರು.

ಹುಷಾರಾಗಿರಿ!: ನಾವು ವಿರೋಧ ಪಕ್ಷದಲ್ಲಿದ್ದೇವೆ, ನೀವು ಆಡಳಿತ ಪಕ್ಷದಲ್ಲಿದ್ದೀರಿ ಎಂಬುದು ನೆನಪಿರಲಿ. ಡಿಕೆಶಿ ಸಾಹೇಬ್ರೇ, ನಿಮ್ಮಿಬ್ಬರ ಜಗಳ ಮೂರನೇಯವರಿಗೆ ಲಾಭ ಆಗಬಾರದು ಎಂದರೆ ಪ್ರಿಯಾಂಕ್ ಖರ್ಗೆ ಅವರಿಂದ ಅಂತರ ಕಾಯ್ದುಕೊಳ್ಳಿ. ಇಲ್ಲದಿದ್ದರೆ ನಿಮ್ಮ–ಸಿದ್ಧರಾಮಯ್ಯ ನಡುವೆ ಮಲ್ಲಿಕಾರ್ಜುನ ಖರ್ಗೆ ಬಂದು ಸಿಎಂ ಆಗಿಬಿಡಬಹುದು. ಪ್ರಿಯಾಂಕ್ ಖರ್ಗೆ ನಿಮ್ಮನ್ನು ಗೋವಿಂದ ಮಾಡಬಹುದು, ಹುಷಾರ್ ಎಂದು ಪ್ರತಿಪಕ್ಷದ ಸದಸ್ಯರು ಮಾತಿನ ಚಟಾಕಿ ಹಾರಿಸಿದರು.

ಅಲ್ಲಿಯವರೆಗೆ ಎಲ್ಲವನ್ನು ಕೇಳಿಸಿಕೊಂಡ ಡಿಕೆಶಿ, ಜ್ಯೋತಿಷಿ ಹೇಳಿದ್ದನ್ನು ನಾನು ಈಗ ಕೇಳಿದರೆ ಬಿಜೆಪಿಯ 25 ರಿಂದ 30 ಸದಸ್ಯರು, ದಳದ ಒಂದಿಬ್ಬರು ಆಡಳಿತ ಪಕ್ಷದ ಸಾಲಿಗೆ ಬರಬಹುದು ಎಂದಾಗ, ಮಧ್ಯೆ ಪ್ರವೇಶಿಸಿದ ಅಶೋಕ್, ಹೌದು ನಿಮ್ಮ ಜ್ಯೋತಿಷ್ಯ ಸರಿಯಾಗಿರಬಹುದು. ನಮ್ಮ 20–25 ಶಾಸಕರು ಜೊತೆ ಸೇರಿಸಿದರೆ ನೀವು ಬಿಜೆಪಿಯ ನಾಯಕರಾಗಬಹುದು. ಆಗ ನೀವು ಹೇಳಿದಂತೆ ಕೇಳುತ್ತೇವೆ ಎಂದು ಕಿಚಾಯಿಸಿದರು. ಸುಮ್ಮನಾಗದ ಡಿಕೆಶಿ, ಏನಯ್ಯಾ ಸುನೀಲ್, ನಾನು ಬಿಜೆಪಿಗೆ ಬರ್ತೀನೇನಯ್ಯಾ? ಎಂದಾಗ ಶಾಸಕ ಸುನೀಲ್ ಪೇಚಿಗೆ ಸಿಲುಕಿದರು.

ಸ್ಪೀಕರ್ ಬ್ರೇಕ್: ಸಭಾಧ್ಯಕ್ಷರು, ಅಶೋಕ್ ಮತ್ತು ಶಿವಕುಮಾರ್ ನಡುವಿನ ಸಂವಾದದಲ್ಲಿ ಮಧ್ಯೆ ಪ್ರವೇಶಿಸಿ, ಅಶೋಕ್ ಕೇಳಿದ ಎರಡು–ಮೂರು ಪ್ರಶ್ನೆಗಳಿಗೆ ಸದನದಲ್ಲಿ ಉತ್ತರ ನೀಡಬೇಡಿ, ನಿಮ್ಮ ಕಚೇರಿಗೆ ಕರೆದು ಮಾತನಾಡಿ ಎಂದು ರೂಲಿಂಗ್ ನೀಡುವುದಾಗಿ ತಿಳಿಸಿದರು. ಈ ಸಂದರ್ಭದಲ್ಲಿ ಮಾತು ಮುಂದುವರೆಸಿದ ಶಿವಕುಮಾರ್, ಕಳೆದ ನಾಲ್ಕು ದಶಕಗಳ ಕೃಷ್ಣ ಅವರ ಜೊತೆಗಿನ ಒಡನಾಟವನ್ನು ಸ್ಮರಿಸಿ, ಅವರು ಏನೇನು ಹೇಳಿ ದ್ದರೂ ಅವೆಲ್ಲವೂ ಇದುವರೆಗೆ ಆಗಿದೆ. ಮುಂದೇನು ಆಗುತ್ತೇನೆ ಎಂದೂ ಹೇಳಿದ್ದಾರೆ, ಅದೂ ಆಗುತ್ತೆ. ಆದರೆ, ಅದೆಲ್ಲವನ್ನೂ ಇಲ್ಲಿ ತಿಳಿಸಲು ಹೋಗುವುದಿಲ್ಲ. ನನ್ನ ಕೊಠಡಿಯಲ್ಲಿ ಮಾತನಾಡೋಣ ಬನ್ನಿ ಎಂದು ವಿಷಯಕ್ಕೆ ತೆರೆ ಎಳೆದರು.

ಬೇಕರಿ ಮಾಲೀಕನ ಕಗ್ಗೊಲೆ

ತೆಗೆಸಿಕೊಳ್ಳುತ್ತಿದ್ದು, ಇದರಿಂದಾಗಿ ಪೊಲೀಸರ ಬಗ್ಗೆ ದುಷ್ಕರ್ಮಿಗಳಿಗೆ ಭಯವೇ ಇಲ್ಲದಂತಾಗಿದೆ. ಪ್ರವಾಸಿತಾಣವಾದ ಕೆಆರ್‌ಎಸ್‌ನಲ್ಲಿ ರೌಡಿಗಳು ಹಾಗೂ ಪುಂಡರನ್ನು ನಿಯಂತ್ರಿಸಬೇಕಾದ ಪೊಲೀಸರು ತಮ್ಮ ಕರ್ತವ್ಯ ಮರೆತಿರುವುದು ಇಂತಹ ಘಟನೆಗಳಿಗೆ ಕಾರಣವಾಗಿದೆ. ಕೆಆರ್‌ಎಸ್‌ಗೆ ಆಗಮಿಸುವ ಪ್ರವಾಸಿಗರ ಬಳಿ ಕೂಡ ಕೆಲವರು ಪುಂಡಾಟ ನಡೆಸುತ್ತಿದ್ದರೂ ಪೊಲೀಸರಂತೂ ಕಣ್ಮುಚ್ಚಿ ಕುಳಿತಿದ್ದಾರೆಂದು ಸ್ಥಳೀಯರು ದೂರಿದ್ದಾರೆ.

ಕೇಂದ್ರ ಸಂಪುಟ ಅಸ್ತು

ಮೇ 29ರಂದು ಸಾರ್ವತ್ರಿಕ ಚುನಾವಣೆ ನಡೆಯುತ್ತದೆ. ಮತದಾರರು ರಾಷ್ಟ್ರೀಯ ಅಸೆಂಬ್ಲಿ (ಲೋಕಸಭೆ) ಮತ್ತು ಪ್ರಾಂತೀಯ ಶಾಸಕಾಂಗಗಳಿಗೆ (ವಿಧಾನಸಭೆಗಳು) ಏಕಕಾಲದಲ್ಲಿ ಮತ ಚಲಾಯಿಸುತ್ತಾರೆ. ಬಳಿಕ ಸ್ಥಳೀಯ ಸಂಸ್ಥೆಗಳಿಗೆ ಅವುಗಳ ಅವಧಿ ಅನುಸರಿಸಿ ಚುನಾವಣೆ ನಡೆಯುತ್ತದೆ. ಸ್ವೀಡನ್‌ನಲ್ಲಿ ಸ್ಥಳೀಯ ಸಂಸ್ಥೆಗಳಿಂದ ಹಿಡಿದು ರಾಷ್ಟ್ರೀಯ ಚುನಾವಣೆಗಳು ಏಕಕಾಲದಲ್ಲಿ ನಡೆಯುತ್ತವೆ. ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಸಂಸತ್, ರಾಜ್ಯಗಳ ಚುನಾವಣೆಯು ಸೆಪ್ಟೆಂಬರ್ ತಿಂಗಳ ಎರಡನೇ ಭಾನುವಾರದಂದು ನಡೆಯುತ್ತವೆ. ಅದೇ ರೀತಿ, ಸ್ಥಳೀಯ ಸಂಸ್ಥೆಗಳಿಗೆ ಐದು ವರ್ಷಗಳಿಗೊಮ್ಮೆ ಸೆಪ್ಟೆಂಬರ್ ತಿಂಗಳ ಎರಡನೇ ಭಾನುವಾರದಂದು ಮತದಾನ ನಡೆಯುತ್ತವೆ.

ಸಮಿತಿಯ ಸದಸ್ಯರಾದ ಸುಭಾಷ್ ಸಿ.ಕಶ್ಯಪ್ ಅವರು ದೇಶದ ನಾಯಕನ ನೇಮಕ ಮತ್ತು ಅವಿಶ್ವಾಸ ಮತದ ವಿಶಿಷ್ಟ ರಚನೆಯನ್ನು ಹೊಂದಿರುವ ಜರ್ಮನ್ ಮಾದರಿಯನ್ನು ಭಾರತದಲ್ಲಿ ಅನುಷ್ಠಾನಕ್ಕೆ ತರಲು ಸಲಹೆ ನೀಡಿದ್ದಾರೆ. ಜಪಾನ್ ಮತ್ತು ಜರ್ಮನಿಯಲ್ಲಿ ಪ್ರಧಾನಮಂತ್ರಿಯನ್ನು ಸಂಸತ್ ಆಯ್ಕೆ ಮಾಡಿದ ಬಳಿಕ, ರಾಷ್ಟ್ರದಲ್ಲಿ ಏಕಕಾಲದಲ್ಲಿ ಚುನಾವಣೆಗಳು ನಡೆಯುತ್ತವೆ. ಇಲ್ಲಿ ಆಯ್ಕೆಯಾಗುವ ಪಕ್ಷವು ತನ್ನ ಅಭ್ಯರ್ಥಿ ಯನ್ನು ಪ್ರಧಾನಿಯನ್ನಾಗಿ ನೇಮಿಸುತ್ತವೆ. ಇದು ಭಾರತಕ್ಕೆ ಪ್ರಯೋಜನಕಾರಿ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಮುಸ್ಲಿಂ ಬಾಹುಳ್ಯದ ರಾಷ್ಟ್ರದಲ್ಲೂ ಒನ್‌ಟೈಮ್ ಎಲೆಕ್ಷನ್: ಮುಸ್ಲಿಂ ಬಾಹುಳ್ಯ ರಾಷ್ಟ್ರವಾದ ಇಂಡೋನೇಷ್ಯಾವೂ 2019ರಿಂದ ಏಕಕಾಲದ ಚುನಾವಣೆ ಪದ್ಧತಿಯನ್ನು ಅನುಸರಿಸುತ್ತಿದೆ. ಇಲ್ಲಿ ಅಧ್ಯಕ್ಷ, ಉಪಾಧ್ಯಕ್ಷ, ರಾಷ್ಟ್ರೀಯ ಮತ್ತು ಪ್ರಾದೇಶಿಕ ಶಾಸಕಾಂಗ ಸಂಸ್ಥೆಗಳ ಸದಸ್ಯರನ್ನು ಒಂದೇ ದಿನದಲ್ಲಿ ಚುನಾಯಿಸಲಾಗುತ್ತದೆ.

ಈ ವರ್ಷದ ಫೆಬ್ರವರಿ 14ರಂದು ಇಂಡೋನೇಷ್ಯಾ ಯಶಸ್ವಿಯಾಗಿ ಏಕಕಾಲಿಕ ಚುನಾವಣೆಗಳನ್ನು ನಡೆಸಿತು. ಇದು ವಿಶ್ವದಲ್ಲಿಯೇ ಒಂದೇ ದಿನದಲ್ಲಿ ನಡೆದ ಅತಿದೊಡ್ಡ ಚುನಾವಣೆಯಾಗಿದೆ. ಸುಮಾರು 200 ಮಿಲಿಯನ್ ಜನರು ಅಧ್ಯಕ್ಷ, ಉಪಾಧ್ಯಕ್ಷ ಸಂಸತ್ ಸದಸ್ಯರು, ರಾಜ್ಯ ಅಸೆಂಬ್ಲಿಗಳ ಸದಸ್ಯರು ಮತ್ತು ಮುನ್ಸಿಪಲ್‌ಗಳಿಗೆ ಮತದಾನ ಮಾಡಿದ್ದಾರೆ.

ತಮಿಳುನಾಡಿನ ಖಾಸಗಿ ಆಸ್ಪತ್ರೆಯಲ್ಲಿ ಭೀಕರ ಅಗ್ನಿ ಅವಘಡ: ಮಗು ಸೇರಿ 7 ಜನ ಸಜೀವ ದಹನ

ದಿಂಡಿಗಲ್(ತಮಿಳುನಾಡು), ಡಿ.12– ಇಲ್ಲಿನ ಪ್ರಸಿದ್ಧ ಖಾಸಗಿ ಆಸ್ಪತ್ರೆಯಲ್ಲಿ ಬೆಂಕಿ ಅನಾಹುತ ಸಂಭವಿಸಿ ಒಂದು ಮಗು ಸೇರಿ ಏಳು ಮಂದಿ ಸಾವನ್ನಪ್ಪಿದ್ದಾರೆ ಎಂದು ವರದಿಯಾಗಿದೆ.

ದಿಂಡಿಗಲ್–ತಿರುಚಿ ರಸ್ತೆಯಲ್ಲಿರುವ ಖಾಸಗಿ ಆಸ್ಪತ್ರೆಯಲ್ಲಿ ಅಗ್ನಿ ದುರಂತ ಸಂಭವಿಸಿದೆ. ಈ ಬಗ್ಗೆ ಮಾಹಿತಿ ಪಡೆದ ಅಗ್ನಿಶಾಮಕ ಸಿಬ್ಬಂದಿ ತಕ್ಷಣವೇ ಸ್ಥಳಕ್ಕಾಗಮಿಸಿ ಬೆಂಕಿ ನಂದಿಸಲು ಹರಸಾಹಸಪಟ್ಟರು. ಆಸ್ಪತ್ರೆಯಲ್ಲಿರುವ ರೋಗಿಗಳನ್ನು ಸ್ಥಳಾಂತರಿಸಿದರು. ನಾಲ್ಕಕ್ಕೂ ಹೆಚ್ಚು ಅಗ್ನಿಶಾಮಕ ವಾಹನಗಳು ಬೆಂಕಿ ನಂದಿಸುವ ಕಾರ್ಯದಲ್ಲಿ ನಿರತವಾಗಿದ್ದವು. ರೋಗಿಗಳನ್ನು ಬೇರೆ ಆಸ್ಪತ್ರೆಗೆ ಸ್ಥಳಾಂತರಿಸಲು ಹತ್ತಕ್ಕೂ ಹೆಚ್ಚು ಆಂಬ್ಯುಲೆನ್ಸ್‌ಗಳು ಕಾರ್ಯ ನಿರ್ವಹಿಸಿದವು ಎಂದು ವರದಿಯಾಗಿದೆ.

ಅವಘಡದಲ್ಲಿ ಒಂದು ಮಗು, ಮೂವರು ಪುರುಷರು, ಮೂವರು ಮಹಿಳೆಯರು ಸೇರಿದಂತೆ ಏಳು ಮಂದಿ ಸಾವನ್ನಪ್ಪಿದ್ದು, ಹಲವರು ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ಮೂಲಗಳು ಮಾಹಿತಿ ನೀಡಿವೆ. ಘಟನಾ ಸ್ಥಳಕ್ಕೆ ಜಿಲ್ಲಾಧಿಕಾರಿ ಪೂಂಗೊಡಿ ಹಾಗೂ ಪಳನಿ ಶಾಸಕ ಐ.ಪಿ.ಸೆಂಥಿಲ್ ಕುಮಾರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮುತ್ತಿಗೆ ಹಾಕಿದವರಿಗೆ ಮುತ್ತಿಡಬೇಕಿತ್ತಾ: ಡಾ. ಪರಮೇಶ್ವರ್

ಕಲಾಪ ನುಂಗಿದ ಪಂಚಮಸಾಲಿ ಕದನ

ಬೆಳಗಾವಿ, ಡಿ.12– ಪಂಚಮಸಾಲಿ ಮೀಸಲಾತಿ ಹೋರಾಟಗಾರರ ಮೇಲೆ ನಡೆದ ಲಾಠಿ ಚಾರ್ಜ್ ವಿಚಾರ ಮೂರನೇ ದಿನ ಸದನದಲ್ಲಿ ಭಾರೀ ಸದ್ದು ಗದ್ದಲಕ್ಕೆ ಕಾರಣವಾಯಿತು. ಬೆಳಗ್ಗೆ ಸಂತಾಪ ಸೂಚನೆಯ ಬಳಿಕ ಇತರ ಚರ್ಚೆಗೆ ಬಿಜೆಪಿ ಸದಸ್ಯರು ಅವಕಾಶ ನೀಡಿಲ್ಲ. ಬದಲಾಗಿ ಉಭಯ ಸದನದಲ್ಲೂ ಪಂಚಮಸಾಲಿ ಹೋರಾಟ ತೀವ್ರ ಆಕ್ರೋಶಕ್ಕೆ ಕಾರಣವಾಯಿತು.



ಪಂಚಮಸಾಲಿ ಸಮುದಾಯದ ಪ್ರತಿಭಟನೆಯ ವೇಳೆ ಸುವರ್ಣಸೌಧಕ್ಕೆ ಪ್ರತಿಭಟನಾಕಾರರು ಮುತ್ತಿಗೆ ಹಾಕಲು ಮುಂದಾದರೆ ಲಾಠಿ ಚಾರ್ಜ್ ಮಾಡದೆ ಮುತ್ತಿಡಬೇಕಾ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಖಾರವಾಗಿ ಪ್ರತಿಕ್ರಿಯೆ ನೀಡಿದರು. ಪ್ರತಿಭಟನಾಕಾರರು ಬ್ಯಾರಿಕೇಡ್ ತಳ್ಳುತ್ತಾರೆ, ಪೊಲೀಸರನ್ನು ತಳ್ಳುತ್ತಾರೆ, ಕಲ್ಲು ಹೊಡೆಯುತ್ತಾರೆ, ಸುವರ್ಣಸೌಧಕ್ಕೆ ನುಗ್ಗುತ್ತಾರೆ ಅಂದರೆ, ಪೊಲೀಸರು ಏನು ಮಾಡ್ತಾರೆ. ಪೊಲೀಸರು ಏನು ಮನುಷ್ಯರು ಅಲ್ವಾ 24 ಜನ ಪೊಲೀಸರಿಗೆ ಗಾಯವಾಗಿದೆ. ಹಾಗಾಗಿ ಲಾಠಿ ಚಾರ್ಜ್ ಅನಿವಾರ್ಯ ಆಗಿತ್ತು ಎಂದು ಪೊಲೀಸರ ಬೆನ್ನಿಗೆ ನಿಂತು ಲಾಠಿ ಚಾರ್ಜ್ ಅನ್ನು ಡಾ.ಜಿ. ಪರಮೇಶ್ವರ್ ಸಮರ್ಥನೆ ಮಾಡಿಕೊಂಡರು.

ಸ್ಪೀಕರ್ ಕಚೇರಿಗೆ ನುಗ್ಗಿದ ಬಿಜೆಪಿ ಸದಸ್ಯರು: ಪಂಚಮಸಾಲಿ ಮೀಸಲಾತಿ ಹೋರಾಟಗಾರರ ಮೇಲೆ ಲಾಠಿ ಚಾರ್ಜ್ ಮಾಡಿದ ವಿಚಾರವಾಗಿ ಸದನದಲ್ಲಿ ತೀವ್ರ ಗದ್ದಲ ಉಂಟಾಯಿತು. ಈ ಸಂದರ್ಭದಲ್ಲಿ ಸ್ಪೀಕರ್ ಯು.ಟಿ ಖಾದರ್ ವಿರುದ್ಧ ಬಿಜೆಪಿ ಸದಸ್ಯರು ಮುಗಿಬಿದ್ದರು. ಸ್ಪೀಕರ್ ಏಕಪಕ್ಷೀಯವಾಗಿ ನಡೆದುಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದರು. ಸುನೀಲ್ ಕುಮಾರ್ ಕ್ರಿಯಾಲೋಪ ಎತ್ತಿದರೂ ಅದಕ್ಕೆ ಸ್ಪೀಕರ್ ಸ್ಪಂದಿಸದ ಹಿನ್ನೆಲೆಯಲ್ಲಿ ಆಕ್ರೋಶಗೊಂಡ ಬಿಜೆಪಿ ಸದಸ್ಯರು ತೀವ್ರ ಗದ್ದಲ ಉಂಟು ಮಾಡಿದರು. ಸದನವನ್ನು ಸ್ಪೀಕರ್ ಮುಂದೂಡಿದರೂ, ಸ್ಪೀಕರ್ ಕಚೇರಿಗೆ ನುಗ್ಗಿದ ಬಿಜೆಪಿ ಸದಸ್ಯರು ತರಾಟೆಗೆ ತೆಗೆದುಕೊಂಡರು. ಬಳಿಕ ಸಂಧಾನ ಸಭೆ ನಡೆಸಿ ಸಮಸ್ಯೆಯನ್ನು ಬಗೆ ಹರಿಸಲಾಯಿತು.

ಭೋಜನ ವಿರಾಮದ ಬಳಿಕವೂ ಗದ್ದಲ: ಪಂಚಮಸಾಲಿ ಗದ್ದಲದ ಹಿನ್ನೆಲೆಯಲ್ಲಿ ಸಂಧಾನ ಸಭೆಯ ಬಳಿಕ ಬಿಜೆಪಿ ಸದಸ್ಯ ಅರವಿಂದ ಬೆಲ್ಲದ್‌ಗೆ ಮಾತನಾಡಲು ಅವಕಾಶ ನೀಡಿದರೂ ಗದ್ದಲಕ್ಕೆ ಬ್ರೇಕ್ ಬೀಳಲಿಲ್ಲ. ಮೀಸಲಾತಿ ಸಂಬಂಧಿಸಿದಂತೆ ಹಿಂದಿನ ಬಿಜೆಪಿ ಸರ್ಕಾರ ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಸಿದ್ದ ಪ್ರಮಾಣ ಪತ್ರವನ್ನು ಸದನದಲ್ಲಿ ಪ್ರದರ್ಶಿಸಿದ ಸಚಿವರಾದ ಪ್ರಿಯಾಂಕ್ ಖರ್ಗೆ ಹಾಗೂ ಕೃಷ್ಣ ಬೈರೇಗೌಡ ವಿಪಕ್ಷವನ್ನು ತೀವ್ರ ತರಾಟೆಗೆ ತೆಗೆದುಕೊಂಡರು.

ಇನ್ನು ಪಂಚಮಸಾಲಿ ಹೋರಾಟಗಾರರ ಮೇಲೆ ನಡೆದ ಲಾಠಿ ಚಾರ್ಜ್‌ಗೆ ಆದೇಶ ಮಾಡಿದ ವಿಡಿಯೋ ನನ್ನ ಬಳಿ ಇದೆ ಎಂದು ಯತ್ನಾಳ್ ಹೇಳಿದರು. ಆ ಅಧಿಕಾರಿಗೆ ಮಾನ ಮರ್ಯಾದೆ ಇದೆಯೇನ್ರೀ ಯಾರೋ ಫೋನ್ ಮಾಡಿದ್ರು ಅಂತಾ ಬರ್ತಾರಲ್ಲ, ಅಲ್ಲಿ ಹೇಯ್ ಲಾಠಿ ಚಾರ್ಜ್ ಮಾಡಿ ಅಂತಾನೇ. ಇದರ ವೀಡಿಯೋ ನನ್ನ ಬಳಿ ಇದೆ ಎಂದರು. ಯಾವ ಅಯೋಗ್ಯ ನನ್ನ ಮಗ ಪಾಕಿಸ್ತಾನ ಜಿಂದಾಬಾದ್ ಕೂಗಿದ್ನೋ, ಇದೇ ಗೃಹ ಮಂತ್ರಿಗಳು ಕೂಗಿಲ್ಲ ಅಂದ್ರು. ಇವಾಗ ಪಂಚಮಸಾಲಿ ಕಲ್ಲು ಹೊಡೆದ್ರು ಅಂತೀರಾ ಎಂದು ಗೃಹ ಸಚಿವ ಪರಮೇಶ್ವರ್ ವಿರುದ್ಧ ಯತ್ನಾಳ್ ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿಯಿಂದ ಸಭಾತ್ಯಾಗ: ಯಾವುದೇ ತನಿಖೆಯ ಅಗತ್ಯ ಇಲ್ಲ, ಯಾವ ಅಧಿಕಾರಿಯ ವಿರುದ್ಧ ಕ್ರಮ ಕೈಗೊಳ್ಳುವುದಿಲ್ಲ ಎಂದು ಗೃಹ ಸಚಿವರು ಸ್ಪಷ್ಟಪಡಿಸಿದರು. ಈ ನಡುವೆ ಪ್ರತಿಭಟನೆಯಲ್ಲಿ ಕಲ್ಲು ತೂರಾಟದ ಹಿಂದೆ ಆರ್‌ಎಸ್‌ಎಸ್ ಕೈವಾಡ ಇದೆ ಎಂಬ ಆರೋಪಕ್ಕೆ ಬಿಜೆಪಿ ಸದಸ್ಯರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ಬಿಜೆಪಿ ಸದಸ್ಯರು ಸಭಾ ತ್ಯಾಗ ಮಾಡಿದರು.

2ಎ ಮೀಸಲಾತಿಗಾಗಿ ಪಂಚಮಸಾಲಿಗಳ ಒತ್ತಾಯ ಸಂವಿಧಾನ ವಿರೋಧಿ: ಸಿಎಂ

ಬೆಳಗಾವಿ, ಡಿ.12– 2ಎ ಮೀಸಲಾತಿಗಾಗಿ ಪಂಚಮಸಾಲಿ ಸಮುದಾಯದವರು ಒತ್ತಾಯ ಮಾಡುತ್ತಿರುವುದು ಸಂವಿಧಾನ ವಿರೋಧವಾಗಿದೆ ಎಂದು ಸಿಎಂ ಸಿದ್ದ ರಾಮಯ್ಯ ತಿಳಿಸಿದ್ದಾರೆ. ಈ ಮೂಲಕ ಪಂಚಮಸಾಲಿಗಳಿಗೆ ಮೀಸಲಾತಿ ಕೊಡಲು ಸಾಧ್ಯವಿಲ್ಲ ಎಂದು ಪರೋಕ್ಷವಾಗಿ ಸಂದೇಶ ರವಾನೆ ಮಾಡಿದ್ದಾರೆ.



ವಿಧಾನಪರಿಷತ್ ಕಲಾಪದಲ್ಲಿ ಶೂನ್ಯ ವೇಳೆಯಲ್ಲಿ ಪ್ರಸ್ತಾಪವಾದ ಪಂಚಮಸಾಲಿ ಮೀಸಲಾತಿ ಹೋರಾಟಗಾರರ ಮೇಲೆ ಲಾಠಿ ಚಾರ್ಜ್ ಮಾಡಿದ ಪ್ರಕರಣದ ಬಗ್ಗೆ ಉತ್ತರ ನೀಡುವ ವೇಳೆ ಮಾತನಾಡಿದ ಅವರು, ಪಂಚಮಸಾಲಿ ಮೀಸಲಾತಿ ಸಾಧ್ಯವಿಲ್ಲ ಎಂದು ಸಂದೇಶ ಕೊಟ್ಟರು.

ನಮ್ಮ ರಾಜ್ಯದಲ್ಲಿ 2002ರಲ್ಲಿ ಮೀಸಲಾತಿ ವಿಭಾಗ ಆಯಿತು. ಆಗ ಯಾಕೆ ಪಂಚಮಸಾಲಿ ಮೀಸಲಾತಿ ಬೇಕು ಎಂದು ಒತ್ತಾಯ ಹಾಕಲಿಲ್ಲ. 2021–22ರಲ್ಲಿ ಪಂಚಮಸಾಲಿಗಳಿಗೆ ಮೀಸಲಾತಿ ಬೇಕು ಎಂದು ಚಳುವಳಿ ಪ್ರಾರಂಭವಾಯಿತು. ಅಂದಿನ ಸರ್ಕಾರದಲ್ಲಿ ಮುರುಗೇಶ್ ನಿರಾಣಿಗೆ ಮಂತ್ರಿ ಸ್ಥಾನ ಸಿಗಲಿಲ್ಲ ಎಂದು ಈ ಹೋರಾಟ ಪ್ರಾರಂಭ ಮಾಡಿದ್ದು ಎಂದು ಸಿಎಂ ಸಿದ್ದರಾಮಯ್ಯ ಆರೋಪಿಸಿದರು.

ಬೊಮ್ಮಾಯಿ ಸರ್ಕಾರ 2ಸಿ ಮತ್ತು 2ಡಿ ಎಂದು ಹೊಸ ಮೀಸಲಾತಿ ವ್ಯವಸ್ಥೆ ಜಾರಿ ಮಾಡಿ ಒಕ್ಕಲಿಗರಿಗೂ ಮತ್ತು ಲಿಂಗಾಯತರಿಗೂ ಮುಸ್ಲಿಮರ ಶೇ.4 ಮೀಸಲಾತಿ ಕಡಿತ ಮಾಡಿ ತಲಾ ಶೇ.2 ಮೀಸಲಾತಿ ಕೊಟ್ಟಿದ್ದರು. ಇದನ್ನು ವಿರೋಧಿಸಿ ರಾಘವೇಂದ್ರ ಎಂಬುವರು ಕೋರ್ಟ್‌ನಲ್ಲಿ ಕೇಸ್ ಹಾಕಿದರು. ಆಗ ಬೊಮ್ಮಾಯಿ ಸರ್ಕಾರದಲ್ಲಿ ಅಧಿಕಾರಿಯಾಗಿದ್ದ ತುಳಿಸಿ ಮದ್ದನೇನಿ, ನಾವು 2002ರಲ್ಲಿ ಆಗಿರುವ ಜಾತಿ ವಿಭಾಗಗಳ ಮೀಸಲಾತಿ ವಿಂಗಡಣೆಯನ್ನು ಯಾವುದೇ ಕಾರಣಕ್ಕೂ ಬದಲಾವಣೆ ಮಾಡುವುದಿಲ್ಲ ಎಂದು ಅಫಿಡವಿಟ್ ಕೊಟ್ಟರು ಎಂದು ಸಿಎಂ ಅಫಿಡವಿಟ್ ಓದಿ ಹೇಳಿದರು.

ಸಿಎಂ ಮಾತಿಗೆ ವಿಪಕ್ಷಗಳು ವಿರೋಧ ವ್ಯಕ್ತಪಡಿಸಿದವು. ಮುಸ್ಲಿಮರಿಗೆ ಧರ್ಮದ ಆಧಾರದಲ್ಲಿ ಮೀಸಲಾತಿ ಕೊಟ್ಟಿದ್ದು ಸರಿಯಲ್ಲ. ಪಂಚಮಸಾಲಿಗಳಿಗೆ ಮೀಸಲಾತಿ ಕೊಡಿ ಎಂದು ಪಟ್ಟು ಹಿಡಿದರು. ಈ ವೇಳೆ ಸದನದಲ್ಲಿ ಗದ್ದಲ ಗಲಾಟೆ ಆಯಿತು. ಆಡಳಿತ–ವಿಪಕ್ಷಗಳ ನಡುವೆ ಪರಸ್ಪರ ಘೋಷಣೆಗಳು ಕೂಗಿದರು. ವಿಪಕ್ಷಗಳ ನಾಯಕರು ಸದನದ ಬಾವಿಗಳಿದು ಪ್ರತಿಭಟನೆ ಮಾಡಿದರು. ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿದರು.

ಡಿ.15ಕ್ಕೆ ವರ್ಲ್ಡ್ ಆಫ್ ಮೈಸೂರು ಪಾಕ್ ಅನಾವರಣ

ಮೈಸೂರು, ಡಿ.12(ಜಿಎ)– ಮೈಸೂರಿನ ಚಾಮುಂಡಿಬೆಟ್ಟಕ್ಕೆ ತೆರಳುವ ಮಾರ್ಗದಲ್ಲಿ ವರ್ಲ್ಡ್ ಆಫ್ ಮೈಸೂರು ಪಾಕ್ ಡಿ.15ರಂದು ಅನಾವರಣವಾಗಲಿದೆ ಎಂದು ಸಂಸ್ಥೆಯ ನಿಖಿಲ್ ಮನ್ನಾರ್ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ವರ್ಲ್ಡ್ ಆಫ್ ಮೈಸೂರು ಪಾಕ್ ಮೂಲಕ ಮೈಸೂರು ಪಾಕ್ ತಿನಿಸಿನ ಇತಿಹಾಸವನ್ನು ಜನರಿಗೆ ತಿಳಿಸುವುದರ ಜೊತೆಗೆ ಮೈಸೂರು ಪಾಕ್ ತಯಾರಿಕೆಯನ್ನು ನೇರವಾಗಿ ವೀಕ್ಷಿಸಲು ಅವಕಾಶ ಕಲ್ಪಿಸಲಾಗಿದೆ. ಹಲವಾರು ಬಗೆಯ ಮೈಸೂರು ಪಾಕ್‌ಗಳು ಲಭ್ಯವಿದ್ದು, 12 ಮಾದರಿಯ ಮೈಸೂರು ಪಾಕ್‌ಗಳನ್ನು ಇಲ್ಲಿ ತಯಾರಿಸುವುದು ಮತ್ತೊಂದು ವಿಶೇಷ ಎಂದರು. ಗೋಷ್ಠಿಯಲ್ಲಿ ನಿಖಿಲ್ ಮನ್ನಾರ್, ಪವನ್ ಬಗ್ಗಿ, ಪವನ್ ಶ್ರಾಫ್, ಸುಷ್ಮಾ, ಶ್ರುತಿ, ಸೌಮ್ಯ ಉಪಸ್ಥಿತರಿದ್ದರು.

ಮೈಸೂರು ಮಿತ್ರ ಶುಕ್ರವಾರ 13 ಡಿಸೆಂಬರ್ 2024

ನಾಳೆ ಕೊಡವ ಸಮಾಜದಿಂದ ಪುತ್ತರಿ ನಮ್ಮೆ ಆಚರಣೆ



ಮೈಸೂರು, ಡಿ. 12 – ಮೈಸೂರು ಕೊಡವ ಸಮಾಜದ ವತಿಯಿಂದ ಡಿ. 14ರಂದು ಕುವೆಂಪುನಗರದ ಶ್ರೀ ಕಾವೇರಿ ಶಿಕ್ಷಣ ಸಂಸ್ಥೆಯಲ್ಲಿ ಪುತ್ತರಿ ನಮ್ಮೆ ಆಚರಿಸಲಾಗುವುದು.

ಈ ವರ್ಷದ ಸುಗ್ಗಿಯ ಹಬ್ಬ ಡಿ.14ರಂದು 5.30ಕ್ಕೆ ಕೊಡವರ ಸಾಂಪ್ರದಾಯಿಕ ನೃತ್ಯಗಳೊಂದಿಗೆ ಆರಂಭವಾಗುವುದು. ಸಂಜೆ 7.50ಕ್ಕೆ ನೆರೆ ಕಟ್ಟುವ ಆಚರಣೆ; ಸಂಜೆ 8.45ಕ್ಕೆ ಕದ್ ಇಡುಪಾ (ಹೊಸ ಭತ್ತದ ಕಟಾವು) ನಂತರ ಪ್ರಸಾದ ವಿನಿಯೋಗ ನಡೆಯಲಿದೆ ಎಂದು ಕೊಡವ ಸಮಾಜದ ಕಾರ್ಯದರ್ಶಿ ಕೊಟೋಲಿರಾ ಎ. ಬೆಳ್ಳಿಯಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಬ್ಬದ ಪೂರ್ವಭಾವಿಯಾಗಿ, ವಾರ್ಷಿಕ ಈಡು ಕಾರ್ಯಕ್ರಮ ಡಿ.8ರಿಂದ ಪ್ರತಿದಿನ 6 ಗಂಟೆಗೆ ವಿಜಯನಗರದ ಕೊಡವ ಸಮಾಜದಲ್ಲಿ ನಡೆಯಿತು. ಪುತ್ತರಿ ಈಡುವನ್ನು ಸಂಘ ಆಯೋಜಿಸಿತ್ತು. **ಡಿ.8:** ತಲಕಾವೇರಿ ಸಾಂಸ್ಕೃತಿಕ ಸಂಘ, ಹೂಟಗಳ್ಳಿ ಮತ್ತು ಬ್ರಹ್ಮಗಿರಿ ಕೊಡವ ಅಸೋಸಿಯೇಷನ್, ವಿಜಯನಗರ; **ಡಿ.9ರಂದು** ಕಾವೇರಿ ಕೊಡವ ಒಕ್ಕೂಟ, ಎನ್.ಆರ್. ಮೊಹಲ್ಲಾ ಮತ್ತು ನೆಲ್ಲಕ್ಕಿ ಕೊಡವ ಕೂಟ, ವಿಜಯನಗರ; **ಡಿ.11ರಂದು** ಜಯಲಕ್ಷ್ಮಿ ಕೊಡವ ಅಸೋಸಿಯೇಷನ್, ಜಯಲಕ್ಷ್ಮಿಪುರಂ ಮತ್ತು ಭಗವತಿ ಕೊಡವ ಅಸೋಸಿಯೇಷನ್, ಬೋಗಾದಿ, **ಡಿ.12ರಂದು** ಇಗ್ಗುತಪ್ಪ ಕ್ಷೇಮಾಭಿವೃದ್ಧಿ ಸಂಘ, ಹೆಬ್ಬಾಳು ಮತ್ತು ರಾಮಕೃಷ್ಣನಗರ ಕೊಡವ ವೆಲ್‌ಫೇರ್ ಅಸೋಸಿಯೇಷನ್, ರಾಮಕೃಷ್ಣನಗರ, **ಡಿ.13ರಂದು** ಕೊಡವ ಸಮಾಜ ಕಲ್ಚರಲ್ ಅಂಡ್ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ನಡೆಯಲಿದೆ.

ಡಿ.15ರಂದು ವಿಟಿಯು ಕುಲಪತಿ ಡಾ.ವಿದ್ಯಾಶಂಕರ್‌ಗೆ ಅಭಿನಂದನೆ


ಡಾ.ವಿದ್ಯಾಶಂಕರ್

ಮೈಸೂರು, ಡಿ.12(ಜಿಎ)–ಲಯನ್ಸ್ ಇಂಟರ್‌ನ್ಯಾಷನಲ್ ಮಲ್ಟಿಪಲ್ ಜಿಲ್ಲೆ 317, ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಹಾಗೂ ಡಾ.ಎಸ್.ವಿದ್ಯಾಶಂಕರ್ ಅಭಿಮಾನಿ ಬಳಗದ ವತಿಯಿಂದ ಡಿ.15ರಂದು ಮಧ್ಯಾಹ್ನ 3.30ಕ್ಕೆ ಮಾನಸ ಗಂಗೋತ್ರಿಯ ಸೆನೆಟ್ ಸಭಾಂಗಣದಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ (ವಿಟಿಯು) ಕುಲಪತಿ ಡಾ.ಎಸ್. ವಿದ್ಯಾಶಂಕರ್ ಅವರಿಗೆ ಅಭಿನಂದನಾ ಸಮಾರಂಭ ಆಯೋಜಿಸಲಾಗಿದೆ ಎಂದು ಅಧ್ಯಕ್ಷ ಡಾ.ಎನ್.ಕೃಷ್ಣೇಗೌಡ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾಜಿ ಡಿಸಿಎಂ ಡಾ.ಸಿ.ಎನ್. ಅಶ್ವಥನಾರಾಯಣ್, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಎಂಎಲ್‌ಸಿ ಹೆಚ್.ವಿಶ್ವನಾಥ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಆದಿಚುಂಚನಗಿರಿ ಮಹಾಸಂಸ್ಥಾನದ ಶ್ರೀ ನಿರ್ಮಲಾನಂದನಾಥ ಸ್ವಾಮಿ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಮಾಜಿ ಜಿಲ್ಲಾ ರಾಜ್ಯಪಾಲ ಕೆ.ದೇವೇಗೌಡ ಅಧ್ಯಕ್ಷತೆ ವಹಿಸುವರು ಎಂದರು.

ಕಾರ್ಯಕ್ರಮದಲ್ಲಿ 9 ಮಂದಿ ಎಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಿಸಲಾಗುವುದು. ಮೂಲತಃ ಮಂಡ್ಯ ಜಿಲ್ಲೆಯವರಾದ ವಿದ್ಯಾಶಂಕರ್ 1991ರಲ್ಲಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಎಂಜಿನಿಯರಿಂಗ್ ಪ್ರಾಧ್ಯಾಪಕರಾಗಿ ವೃತ್ತಿ ಪ್ರಾರಂಭಿಸಿದರು. 28 ವರ್ಷ ಕಾಲ ಬೋಧನಾ ಅನುಭವ ಹಾಗೂ 15 ವರ್ಷ ಸಂಶೋಧನೆ ಅನುಭವ ಹೊಂದಿದ್ದಾರೆ. ಕಾಲೇಜು ದಿನಗಳಿಂದಲೂ ಹೋರಾಟದ ಗುಣ ಹೊಂದಿರುವ ಇವರು ಅನೇಕ ಶೈಕ್ಷಣಿಕ ಸಂಸ್ಥೆಗಳ ಹೋರಾಟದ ನೇತೃತ್ವ ವಹಿಸಿ, ಪ್ರಸ್ತುತ ವಿಟಿಯು ಉಪ ಕುಲಪತಿಗಳಾಗಿದ್ದಾರೆ. ಹೀಗಾಗಿ ಇವರನ್ನು ಅಭಿನಂದಿಸಲಾಗುತ್ತಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್ ಅಧ್ಯಕ್ಷ ಡಿ.ರವಿಕುಮಾರ್, ಡಾ.ಎನ್.ಕೃಷ್ಣೇಗೌಡ, ಎಂ.ಸಿದ್ದೇಗೌಡ ಉಪಸ್ಥಿತರಿದ್ದರು.

ಇಂದು ಶ್ರೀ ಹನುಮದ್ ವ್ರತ ಧಾರ್ಮಿಕ ಕಾರ್ಯಕ್ರಮ

ಮೈಸೂರು,ಡಿ.12(ಜಿಎ)–ಮೈಸೂರು–ಕೆಆರ್‌ಎಸ್ ರಸ್ತೆಯಲ್ಲಿರುವ ಉತ್ತರಾದಿ ಮಠದ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಡಿ.13ರಂದು ಬೆಳಗ್ಗೆ 10ಗಂಟೆಗೆ ಶ್ರೀ ಹನುಮದ್ ವ್ರತ ಧಾರ್ಮಿಕ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಮಠದ ಅನಿರುದ್ಧಾಚಾರ್ಯ ಪಾಂಡುರಂಗಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶ್ರೀಜಯ ತೀರ್ಥ ವಿದ್ಯಾಪೀಠದ ಪ್ರಾಂಶುಪಾಲ ಡಾ.ಸತ್ಯಧ್ಯಾನಾಚಾರ್ಯ ಕಟ್ಟಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಇವರಿಂದ ಬೆಳಗ್ಗೆ 10ರಿಂದ ದೇವರಿಗೆ ಪಂಚಾಮೃತ ಹಾಗೂ ಮಧು ಅಭಿಷೇಕ, ನಂತರ 12.30ಕ್ಕೆ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ನಗರಪಾಲಿಕೆ ಮಾಜಿ ಸದಸ್ಯೆ ಪ್ರಮೀಳಾ ಭರತ್ ಹಾಗೂ ಕಾಂಗ್ರೆಸ್ ಮುಖಂಡ ಎನ್.ಎಂ. ನವೀನ್ ಕುಮಾರ್ ಆಗಮಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಡಿ.ಟಿ.ಪ್ರಕಾಶ್, ವಾಸುದೇವಮೂರ್ತಿ ಉಪಸ್ಥಿತರಿದ್ದರು.

ಡಿ.15, ಶನಿಮಹಾಶಾಂತಿ, ಹನುಮಮಹೋತ್ಸವ

ಮೈಸೂರು: ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಹುಣ್ಣಿಮೆ ಪ್ರಯುಕ್ತ ಡಿ.15ರಂದು ಭಾನುವಾರ ಬೆಳಗ್ಗೆ 9 ಗಂಟೆಗೆ ಶ್ರೀ ಹನುಮಂತನಿಗೆ ಅಭಿಷೇಕ, ದತ್ತ ಜಯಂತಿ, ಕರ್ಕಾಟಕ, ತುಲಾ, ಮಕರ, ಕುಂಭ, ಮೀನ ರಾಶಿಯವರಿಗೆ ಶನಿಮಹಾಶಾಂತಿ ಮತ್ತು ಬಾಧಾನಿವಾರಕ ಸುದರ್ಶನ ಹೋಮ, ಮಹಾ ಮೃತ್ಯುಂಜಯ ಹೋಮ, ಕುಜದೋಷ ನಿವೃತ್ತಿ ಶಾಂತಿ, ರಾಹು–ಕೇತು ಶಾಂತಿ ಮತ್ತು ಶ್ರೀ ಸತ್ಯನಾರಾಯಣ ಪೂಜೆ ಏರ್ಪಡಿಸಲಾಗಿದೆ. ಮಧ್ಯಾಹ್ನ 12.30ಕ್ಕೆ ಪೂರ್ಣಾಹುತಿ, ಮಹಾಮಂಗಳಾರತಿ ನೆರವೇರಲ್ಪಡುತ್ತದೆ.

ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ಆರೋಪ

ಬಾಡಿಗೆ ಮನೆ ಮಾಲೀಕನ ವಿರುದ್ಧ ಎಫ್‌ಐಆರ್ ದಾಖಲು

ಮೈಸೂರು, ಡಿ.12(ಆರ್‌ಕೆ)– ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದಲ್ಲಿ ಮನೆ ಮಾಲೀಕನ ವಿರುದ್ಧ ಎನ್‌ಆರ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿ, ಆತನನ್ನು ಬಂಧಿಸಿದ್ದಾರೆ.

ಬನ್ನಿಮಂಟಪದ ಜೆಎಸ್‌ಎಸ್‌ನಗರ ನಿವಾಸಿ ಅಮಾನುಲ್ಲಾಖಾನ್ ಬಂಧಿತ ವ್ಯಕ್ತಿ. 2024ರ ಜೂನ್‌ನಲ್ಲಿ ಅಮಾನುಲ್ಲಾಖಾನ್ ಮನೆಯನ್ನು ಬಾಡಿಗೆಗೆ ಪಡೆದು ನೆಲೆಸಿದ್ದ ಖಾಸಗಿ ಮೆಡಿಕಲ್ ಕಾಲೇಜು ವಿದ್ಯಾರ್ಥಿನಿಗೆ ವಾರದ ಹಿಂದೆ ಅಮಾನುಲ್ಲಾಖಾನ್, ಮನೆಗೆ ನುಗ್ಗಿ ಲೈಂಗಿಕ ಕಿರುಕುಳ ನೀಡಿದ್ದು, ಸಹಕರಿಸದಿದ್ದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದನಂತೆ. ಈ ಸಂಬಂಧ ವಿದ್ಯಾರ್ಥಿನಿ ನೀಡಿದ ದೂರಿನನ್ವಯ ಪ್ರಕರಣ ದಾಖಲಿಸಿಕೊಂಡಿದ್ದ ಎನ್‌ಆರ್ ಠಾಣೆ ಪೊಲೀಸರು, ಆರೋಪಿಯನ್ನು ಬಂಧಿಸಿ ವಿಚಾರಣೆ ನಡೆಸಿದ ಬಳಿಕ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ ಆತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಕಟ್ಟಡ ಸಾಮಗ್ರಿಗಳ ಪ್ರದರ್ಶನ ಮೈ ಬಿಲ್ಡ್–24

ಶ್ರೀ ಕಾಡಸಿದ್ದೇಶ್ವರ ಮಠದ ಡಾ.ಕರಿವೃಷಭ ದೇಶಿಕೇಂದ್ರ ಶಿವಯೋಗಿಗಳಿಂದ ಚಾಲನೆ


ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾದ ಮೈಸೂರು ಶಾಖೆ ವತಿಯಿಂದ ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಏರ್ಪಡಿಸಿರುವ 'ಮೈ ಬಿಲ್ಡ್–24' ಅನ್ನು ಸೋಮೇಕಟ್ಟೆ ಶ್ರೀ ಕಾಡಸಿದ್ದೇಶ್ವರ ಮಠದ ಡಾ.ಕರಿವೃಷಭ ದೇಶಿಕೇಂದ್ರ ಶಿವಯೋಗೀಶ್ವರ ಮಹಾ ಸ್ವಾಮೀಜಿ ಗುರುವಾರ ಉದ್ಘಾಟಿಸಿದರು.

ಈ ಬಾರಿಯ ವಸ್ತುಪ್ರದರ್ಶನದಲ್ಲಿ ಕಟ್ಟಡ ನಿರ್ಮಾಣದಲ್ಲಿ ಇತ್ತೀಚೆಗೆ ಆವಿಷ್ಕಾರಗೊಂಡಿರುವ ನಿರ್ಮಾಣ ಸಾಮಗ್ರಿಗಳ ಪ್ರದರ್ಶನವಿದ್ದು, ದೇಶ, ವಿದೇಶಗಳ ಅತ್ಯಾಧುನಿಕ ಸಾಮಗ್ರಿಗಳನ್ನು ಇಲ್ಲಿ ನೋಡಬಹುದಾಗಿದೆ. ಸೌರಶಕ್ತಿ ಯೋಜನೆ, ನವೀನ ಮಾದರಿಯ ನೆಲಹಾಸು, ವಿದ್ಯುತ್ ಉಪಕರಣ, ಕಟ್ಟಡ ನಿರ್ಮಾಣ ಯಂತ್ರಗಳು, ಜಲಸಂರಕ್ಷಣಾ ವಿಧಾನ, ಅಡುಗೆ ಮನೆ, ಸ್ನಾನದ ಮನೆಯ ಅಲಂಕಾರಿಕ ಸಾಮಾಗ್ರಿ, ವಿಶೇಷ ರೀತಿಯ ಛಾವಣಿ ಸಾಮಾಗ್ರಿ, ಹೊರಾಂಗಣ ನೆಲಹಾಸು, ನವೀನ ರೀತಿಯ ಬಣ್ಣ ಮತ್ತು ಸಾಮಗ್ರಿಗಳಲ್ಲದೆ, ಎಂ ಸ್ಯಾಂಡ್ ಕುರಿತಾದ ಮಳಿಗೆ ಸೇರಿದಂತೆ 150ಕ್ಕೂ ಹೆಚ್ಚು ಮಳಿಗೆಗಳನ್ನು ವ್ಯವಸ್ಥೆ ಮಾಡಲಾಗಿದೆ.

ಮೈಸೂರು, ಡಿ.12(ಜಿಎ)–ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾದ ಮೈಸೂರು ಶಾಖೆ ವತಿಯಿಂದ ನಗರದ ಮಹಾರಾಜ ಕಾಲೇಜು ಮೈದಾನದಲ್ಲಿ ಡಿ.16ರವರೆಗೆ ಏರ್ಪಡಿಸಿರುವ ಮನೆ ನಿರ್ಮಾಣದ ಅತ್ಯಾಧುನಿಕ ತಂತ್ರಜ್ಞಾನದ ಸಲಕರಣೆಗಳ ಪ್ರದರ್ಶನದ 'ಮೈ ಬಿಲ್ಡ್–24' ಅನ್ನು ಸೋಮೇಕಟ್ಟೆ ಶ್ರೀ ಕಾಡಸಿದ್ದೇಶ್ವರ ಮಠದ ಡಾ.ಕರಿವೃಷಭ ದೇಶಿಕೇಂದ್ರ ಶಿವಯೋಗೀಶ್ವರ ಮಹಾ ಸ್ವಾಮೀಜಿ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಮನೆಯನ್ನು ಅಚ್ಚುಕಟ್ಟಾಗಿ ಹಾಗೂ ವೈಜ್ಞಾನಿಕವಾಗಿ ಹೇಗೆ ನಿರ್ಮಾಣ ಮಾಡಬೇಕು ಎಂಬುದನ್ನು ವೃತ್ತಿ ಬಾಂಧವರಿಗೆ ಮೈ ಬಿಲ್ಡ್ ವಿಶೇಷ ಅನುಭವ ನೀಡುವ ಉತ್ತಮ ಕಾರ್ಯಕ್ರಮ ಎಂದು ಶ್ಲಾಘಿಸಿದರು.

ಬಸವಣ್ಣನವರ 'ಕಾಯಕವೇ ಕೈಲಾಸ' ಎಂಬಂತೆ ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾದ ಮೈಸೂರು ಶಾಖೆ ಕಳೆದ 24 ವರ್ಷಗಳಿಂದ ಈ ಪ್ರದರ್ಶನವನ್ನು ನಡೆಸಿಕೊಂಡು ಬರುತ್ತಿದೆ. ಇಂದು ಇಂಜಿನಿಯರ್ ಪ್ಲಾನ್‌ನಂತೆ ಮನೆ ಕಟ್ಟುತ್ತಿದ್ದಾರೆ. ಆದರೆ, ಇದರಿಂದ ಬಹುತೇಕರು ಸಾಲದ ಬಾಧೆಯಿಂದ ನರಳುತ್ತಿದ್ದಾರೆ. ಮನೆ ಪೂರ್ಣಗೊಂಡರೂ ಅವರಿಗೆ ನೆಮ್ಮದಿ ಇಲ್ಲದಂತೆ ಜೀವಿಸುವ ಸ್ಥಿತಿ ನಿರ್ಮಾಣಗೊಂಡಿದೆ. ಆದ್ದರಿಂದ ಶಾಸ್ತ್ರ ಮತ್ತು ಶಸ್ತ್ರ ಬಹಳ ಮುಖ್ಯ ಎಂದರು.

ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಮಾತನಾಡಿ, ಜೀವನದಲ್ಲಿ ಮನೆ ಕಟ್ಟುವುದು ಪ್ರತಿಯೊಬ್ಬರ ಗುರಿಯಾಗಿದ್ದು, ಇಂಜಿನಿಯರ್ ಬಳಸಿಕೊಂಡು ವಿಶೇಷ ರೀತಿ ಮನೆ ನಿರ್ಮಾಣ ಮಾಡುವುದು ಪ್ರತಿಯೊಬ್ಬರ ಮಹದಾಸೆಯಾಗಿದೆ. ಅಂತಹವರಿಗೆ ಈ ಮೇಳ ಸಾಕಷ್ಟು ಅನುಕೂಲವಾಗಿದೆ ಎಂದು ಹೇಳಿದರು.

ಜಪಾನಿನಲ್ಲಿ ಎರಡು ತಿಂಗಳಲ್ಲಿ ಮನೆ ಕಟ್ಟುತ್ತಾರೆ. ಹಾಗೇ ಕಾಲಕ್ಕೆ ತಕ್ಕಂತೆ ಮನೆ ಮಾರ್ಪಾಡು ಮಾಡಿಕೊಳ್ಳುತ್ತಾರೆ. ಆ ರೀತಿ ತಂತ್ರಜ್ಞಾನ ಇಲ್ಲಿಯೂ ಬರಬೇಕು. ಚಿಕ್ಕ ಮನೆ ಚೊಕ್ಕ ಮನೆ ಮಾತಿನಂತೆ ಜಪಾನಿನಲ್ಲಿ ಮನೆಗಳು ನಿರ್ಮಾಣಗೊಳ್ಳುತ್ತಿವೆ ಎಂದು ತಿಳಿಸಿದರು.

ಮೈಸೂರು ಅರಮನೆಗಳ ನಗರಿಯಾಗಿದ್ದು, ವಿವಿ ಆವರಣದಲ್ಲಿರುವ ಪಾರಂಪರಿಕ ಕಟ್ಟಡಗಳ ನಿರ್ವಹಣೆ ಮಾಡುವುದು ಬಹಳಷ್ಟು ಕಷ್ಟಕರವಾಗಿದೆ. ಹಾಗಾಗಿ ಬಿಲ್ಡರ್ ಅಸೋಸಿಯೇಷನ್ ಮೂಲಕ ಇಂತಹ ಪಾರಂಪರಿಕ ಕಟ್ಟಡಗಳ ನಿರ್ವಹಣೆ ಬಗ್ಗೆ ಗಮನಹರಿಸಿ. ಕಾರಣ, ಪಾರಂಪರಿಕ ಕಟ್ಟಡಗಳನ್ನು ನಿರ್ವಹಣೆ ಮಾಡುವ ತಂತ್ರಜ್ಞಾನ ಅರಿತವರು ಇಲ್ಲ. ಮೈಸೂರಿನ ಬಹುತೇಕ ಕಟ್ಟಡಗಳ ವಿನ್ಯಾಸ ಸಾಕಷ್ಟು ಭಿನ್ನವಾಗಿದೆ. ನೂತನ ತಂತ್ರಜ್ಞಾನ ಬಳಸಿಕೊಂಡು ವೇಗವಾಗಿ ಮನೆ ಕಟ್ಟುವ ಕೆಲಸವಾಗಬೇಕು. ಮೈಸೂರು ಬೆಳವಣಿಗೆಯಾಗಿದ್ದು, ಈ ಕಾರ್ಯಕ್ರಮ ಸಾಕಷ್ಟು ಅನುಕೂಲವಾಗಲಿದೆ ಎಂದರು.

ಕಾರ್ಯಕ್ರಮದಲ್ಲಿ ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾದ ಮೈಸೂರು ಶಾಖೆ ಅಧ್ಯಕ್ಷ ಎ.ಎಸ್.ಯೋಗನರಸಿಂಹ, ಗೌರವ ಕಾರ್ಯದರ್ಶಿ ಕೆ.ಆರ್.ಪ್ರಭಾಕರ್ ರಾವ್, ಮೈಬಿಲ್ಡ್–24 ಅಧ್ಯಕ್ಷ ಕೆ.ಟಿ. ಗೋವಿಂದರಾಜು, ಗೌರವ ಕಾರ್ಯದರ್ಶಿ ಎಸ್.ಎಲ್.ದಿನೇಶ್ ಸೇರಿದಂತೆ ಇತರ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಕು. ಮುಕ್ತ ಅವರಿಗೆ ಅಭಿನಂದನೆ...


ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕಿನಲ್ಲಿ 33 ವರ್ಷ ಸೇವೆ ಸಲ್ಲಿಸಿ ನಿವೃತ್ತರಾದ ಮ್ಯಾನೇಜರ್ ಕು.ಮುಕ್ತ ಅವರನ್ನು ಅಭಿನಂದಿಸಲಾಯಿತು. ಬ್ಯಾಂಕಿನ ಅಧ್ಯಕ್ಷೆ ಪಿ.ರಾಜೇಶ್ವರಿ, ಉಪಾಧ್ಯಕ್ಷೆ ಪಿ.ಸವಿತಾ, ನಿರ್ದೇಶಕರಾದ ಕೆ.ಉಮಾಶಂಕರ್, ಎಸ್‌ಬಿಎಂ ಮಂಜು, ಅರವಿಂದ, ಎಸ್‌ಟಿ ವಿಭಾಗದ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ಗಾಯಿತ್ರಿ ಈ ವೇಳೆ ಉಪಸ್ಥಿತರಿದ್ದರು.

ಶೀಘ್ರದಲ್ಲೇ 'ನಮ್ಮೂರ ಮಾರಮ್ಮ' ಬಿಡುಗಡೆ

ಮೈಸೂರು, ಡಿ.12(ಜಿಎ)– ಶ್ರೀ ಹುಲಿಯಮ್ಮ ಎಂಟರ್‌ಪ್ರೈಸಸ್ ಬ್ಯಾನರ್‌ನಡಿ ನಿರ್ಮಿಸುತ್ತಿರುವ 'ನಮ್ಮೂರ ಮಾರಮ್ಮ' ಕನ್ನಡ ಚಲನಚಿತ್ರ 2025ರ ಫೆಬ್ರವರಿಯಲ್ಲಿ ಬಿಡುಗಡೆಯಾಗಲಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಚಿತ್ರದ ನಿರ್ಮಾಪಕ ವಾಲ್ಮೀಕಿ ನಿಂಗರಾಜು ಈ ವಿಷಯ ತಿಳಿಸಿ, ಗ್ರಾಮೀಣ ಸೊಗಡಿನ ಕಥಾಹಂದರವುಳ್ಳ ಈ ಚಿತ್ರದ ಶೇ.95ರಷ್ಟು ಚಿತ್ರೀಕರಣ ಮುಕ್ತಾಯವಾಗಿದ್ದು, ಸದ್ಯದಲ್ಲೇ ಬಿಡುಗಡೆ ಮಾಡಲಾಗುವುದು ಎಂದರು. ಈ ವೇಳೆ ಚಿತ್ರದ ಪೋಸ್ಟರ್ ಅನ್ನು ಮುಖಂಡರಾದ ಕುಮಾರ್, ತಾಯೂರು ಪ್ರಕಾಶ್, ಎಂ.ನರಸಿಂಹಮೂರ್ತಿ, ದ್ಯಾವಪ್ಪ ನಾಯಕ, ಸಂತು, ಪ್ರಣವ್ ಬಿಡುಗಡೆ ಮಾಡಿದರು. ನಟ ವಿನೋದ್‌ಕುಮಾರ್ ಉಪಸ್ಥಿತರಿದ್ದರು.

ಇಂದು ಎಸ್‌ಜೆಸಿಇಯಿಂದ ಹ್ಯಾಕಥಾನ್

ಮೈಸೂರು, ಡಿ.12(ಜಿಎ)–ಮೈಸೂರಿನ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿವಿಯ ಎಸ್‌ಜೆಸಿಇ ಕಾಲೇಜು ವತಿಯಿಂದ ಡಿ.13ರಂದು ಬೆಳಗ್ಗೆ 11.30ರಿಂದ ಡಿ.14ರ ಬೆಳಗ್ಗೆ 11.30ರವರೆಗೆ 24 ಗಂಟೆಗಳ ರಾಷ್ಟ್ರೀಯ ಮಟ್ಟದ ಹ್ಯಾಕಥಾನ್ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ವಿವಿಯ ಕುಲಸಚಿವ ಡಾ.ಎಸ್.ಎ.ಧನರಾಜ್ ಈ ವಿಷಯ ತಿಳಿಸಿ, ಡಿ.13ರಂದು ಬೆಳಗ್ಗೆ 10ಗಂಟೆಗೆ ವಿವಿಯ ಗೋಲ್ಡನ್ ಜ್ಯುಬಿಲಿ ಭವನ ಸಿಎಸ್/ಐಎಸ್ ಸೆಮಿನಾರ್ ಹಾಲ್‌ನಲ್ಲಿ ಹ್ಯಾಕಥಾನ್ ಉದ್ಘಾಟನೆಗೊಳ್ಳಲಿದ್ದು, ಆರೋಗ್ಯ ಸೇವೆಯಲ್ಲಿ ಸಾಮಾಜಿಕ ನಾವೀನ್ಯತೆ, ಸ್ಮಾರ್ಟ್ ಮೂಲ ಸೌಕರ್ಯದೊಂದಿಗೆ ವ್ಯಾಪಾರ ಉತ್ಪನ್ನಗಳು ವಿಷಯದ ಮೇಲೆ ಇದು ನಡೆಯಲಿದೆ. ಇದಕ್ಕೆ ಹ್ಯಾಕ್‌ಎಲೈಟ್ ಎಂದು ಹೆಸರಿಸಲಾಗಿದೆ. ಈಗಾಗಲೇ 284 ತಂಡಗಳು ನೋಂದಾಯಿಸಿಕೊಂಡಿದ್ದವು. 30 ತಂಡಗಳು ಆಯ್ಕೆಯಾಗಿದ್ದು, ಸ್ಪರ್ಧೆಯಲ್ಲಿ ಭಾಗವಹಿಸುತ್ತಿವೆ. ವಿಜೇತ ತಂಡಗಳಿಗೆ 1 ಲಕ್ಷ ರೂ. ಬಹುಮಾನ ನೀಡಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಪ್ರೊ. ಅನಿಲ್‌ಕುಮಾರ್, ಡಾ.ಶ್ರೀನಿವಾಸ್, ಡಾ.ಪ್ರಸನ್ನ ಉಪಸ್ಥಿತರಿದ್ದರು.

ಹಿರಿಯ ವೈದ್ಯ ಡಾ.ರಾಜನ್ ನಿಧನಕ್ಕೆ ಸಂತಾಪ


ಡಾ.ರಾಜನ್

ಮೈಸೂರು,ಡಿ.12– ಡಾ.ಸಿ. ರಾಜನ್ ಅವರು ಮೈಸೂರು ವೈದ್ಯಕೀಯ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಹಲವು ದಶಕಗಳ ಕಾಲ ಸೇವೆ ಸಲ್ಲಿಸಿದ್ದರು. ಭಾರತೀಯ ವೈದ್ಯಕೀಯ ಸಂಘ ಮೈಸೂರು ಶಾಖೆಯ ಅಧ್ಯಕ್ಷರಾಗಿ, ರಾಜ್ಯಮಟ್ಟದ ವೈದ್ಯಕೀಯ ಸಂಘದ ಪದಾಧಿಕಾರಿಗಳಾಗಿ ಸಾಕಷ್ಟು ಅಪ್ರತಿಮ ಸೇವೆ ಸಲ್ಲಿಸಿದ್ದರು. ಮೈಸೂರು ವೈದ್ಯಕೀಯ ಕಾಲೇಜಿನ ಹಳೆಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷರಾಗಿಯೂ ಹಲವಾರು ಮೌಲಿಕ ಕಾರ್ಯಕ್ರಮಗಳನ್ನು ರೂಪಿಸಿದ್ದರು.


ವೈದ್ಯರಿಗೆ ಮುಂದುವರೆದ ಶಿಕ್ಷಣಕ್ಕೆ ಸಂಬಂಧಿಸಿದ ಹಲವಾರು ಕಾರ್ಯಕ್ರಮಗಳನ್ನು ಸಂಘಟಿಸಿ ವೈದ್ಯರ ಪುನರ್ ಶಿಕ್ಷಣ ಜ್ಞಾನಪ್ರಸಾರಕ್ಕೆ ನೆರವಾಗಿದ್ದರು. ವೈದ್ಯಕೀಯ ಕ್ಷೇತ್ರ ಅತ್ಯುತ್ತಮ ಸಂಘಟಕನೊಬ್ಬನನ್ನು ಕಳೆದುಕೊಂಡಿದೆ. ಮೃತರ ಆತ್ಮಕ್ಕೆ ಶಾಂತಿ, ಅವರ ಕುಟುಂಬ, ಬಂಧುಗಳಿಗೆ ಅಗಲಿಕೆಯ ನೋವನ್ನು ಭರಿಸುವ ಶಕ್ತಿಯನ್ನು ನೀಡಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆಂದು ಹಿರಿಯ ವೈದ್ಯರೂ ಆದ ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಯೋಗಣ್ಣ ಕಂಬನಿ ಮಿಡಿದಿದ್ದಾರೆ.

ಡಿ.18ರಂದು ಮಾಪ್ ಅಪ್ ಸುತ್ತಿನ ನೇರ ಸಂದರ್ಶನ

ಮೈಸೂರು,ಡಿ.12– ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವೈದ್ಯಕೀಯ ಮಹಾವಿದ್ಯಾಲಯದಲ್ಲಿ 2024–25 ನೇ ಸಾಲಿನ ಬಿ.ಎನ್.ವೈ.ಎಸ್ ಪದವಿ ಕೋರ್ಸಿನ 10 ಸೀಟುಗಳಿಗೆ ಡಿ.18 ರಂದು ಬೆಳಗ್ಗೆ 10.00 ಗಂಟೆಗೆ ಮಾಪ್ ಅಪ್ ಸುತ್ತಿನ ನೇರ ಸಂದರ್ಶನ, ಪ್ರವೇಶಾತಿಯನ್ನು ನಿಗದಿಪಡಿಸಲಾಗಿದೆ.

2024ರ ನಿಯಮಾನುಸಾರ ಸಿಇಟಿಯಲ್ಲಿ ಅರ್ಹರಾದ ಅಭ್ಯರ್ಥಿಗಳು ನೇರ ಸಂದರ್ಶನದಲ್ಲಿ ಭಾಗವಹಿಸಲು ಇಚ್ಛಿಸಿದ್ದಲ್ಲಿ, ನಿಗದಿತ ಎಲ್ಲಾ ಮೂಲ ದಾಖಲಾತಿಗಳು ಹಾಗೂ ಶುಲ್ಕದೊಂದಿಗೆ ಹಾಜರಾಗಬೇಕು. ಆಸಕ್ತ ಅಭ್ಯರ್ಥಿಗಳು ಹೆಚ್ಚಿನ ಮಾಹಿತಿಗಾಗಿ ದೂ.ಸಂಖ್ಯೆ: 0821 2410120 ಅಥವಾ ಮೊ.ಸಂ: 8618570803 ಅನ್ನು ಸಂಪರ್ಕಿಸಬಹುದು ಎಂದು ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಚಾರ್ಯರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಲೆಮಾರಿ ದೊಂಬಿದಾಸ ಸಮಾಜದ ರಾಜ್ಯಾಧ್ಯಕ್ಷರಾಗಿ ವೈ.ಕುಮಾರ್ ಆಯ್ಕೆ


ಅಲೆಮಾರಿ ದೊಂಬಿದಾಸ ಸಮಾಜದ ರಾಜ್ಯಾಧ್ಯಕ್ಷರಾಗಿ ಆಯ್ಕೆಯಾದ ವೈ.ಕುಮಾರ್ ಅವರನ್ನು ದಸಂಸ ವತಿಯಿಂದ ಅಭಿನಂದಿಸಲಾಯಿತು.

ಮೈಸೂರು,ಡಿ.12–ಅಲೆಮಾರಿ ದೊಂಬಿದಾಸ ಸಮಾಜದ ರಾಜ್ಯಾಧ್ಯಕ್ಷರಾಗಿ ಆಯ್ಕೆಯಾಗಿರುವ ಏಕಲವ್ಯನಗರದ ವೈ.ಕುಮಾರ್ ಅವರಿಗೆ ಏಕಲವ್ಯನಗರದಲ್ಲಿ ದಸಂಸ ವತಿಯಿಂದ ಅಭಿನಂದನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಈ ವೇಳೆ ಏಕಲವ್ಯನಗರದ ಸಂಸ್ಥಾಪಕ ಮತ್ತು ದ.ಸಂ.ಸ ಜಿಲ್ಲಾ ಸಂಚಾಲಕ ನಿಂಗರಾಜ್ ಮಲ್ಲಾಡಿ ಮಾತನಾಡಿ, ಹುಟ್ಟು ಸಾವುಗಳಿಗೆ ದಾಖಲೆಗಳೇ ಇಲ್ಲದೆ ಅವಮಾನ ಮತ್ತು ಹಂಗಿನ ಜೀವನ ಸಾಗಿಸುತ್ತಾ ಮರದ ಕೆಳಗೆ, ಸ್ಕೂಲ್ ಜಗುಲಿ, ಪಾಳು ಮಂಟಪಗಳಲ್ಲಿ ವಾಸ ಮಾಡುತ್ತಾ ಅತ್ಯಂತ ಸಂಕಷ್ಟದ ಬದುಕನ್ನು ಸಾಗಿಸುತ್ತಿದ್ದ ಅಲೆಮಾರಿ ದೊಂಬಿದಾಸ ಸಮಾಜದ ರಾಜ್ಯಾಧ್ಯಕ್ಷರಾಗಿ ವೈ.ಕುಮಾರ್ ಆಯ್ಕೆಯಾಗಿರುವುದು ಸಂತಸ ತಂದಿದೆ ಎಂದರು.

ವೈ.ಕುಮಾರ ದೊಂಬಿದಾಸ ಸಮಾಜದವರಾಗಿ ಏಕಲವ್ಯನಗರದ ಅಲೆಮಾರಿ ಸಮಾಜಗಳಾದ ದೊಂಬಿದಾಸ, ಕೋಲೆ ಬಸವ, ಸಿಳ್ಳೆಕ್ಯಾತ, ಹಕ್ಕಿಪಿಕ್ಕಿ, ಕೊರಮ, ಕೊರಚ, ಸುಡುಗಾಡು ಸಿದ್ದ, ಚನ್ನದಾಸ, ಬೈಲ್‌ಪತ್ತರ್, ಡೋಂಗ್ರಿ ಗೆರಾಸಿಯಾ, ಹಂದಿಜೋಗಿ ಮುಂತಾದ ಅಲೆಮಾರಿ ಸಮುದಾಯಗಳ ಸಮಸ್ಯೆಗಳ ಬಗ್ಗೆ ದಸಂಸ ದೊಟ್ಟಿಗೆ ಹೋರಾಟ ಮಾಡುತ್ತಾ ದಿಕ್ಕು–ದನಿಯಿಲ್ಲದ ಇಂತಹ ಸಮುದಾಯಗಳನ್ನು ಮುಖ್ಯವಾಹಿನಿಗೆ ತರುವ ಕೆಲಸವನ್ನು ಹಲವಾರು ವರ್ಷಗಳಿಂದ ಮಾಡುತ್ತಾ ಬರುತ್ತಿದ್ದಾರೆ ಎಂದು ಶ್ಲಾಘಿಸಿದರು.

ಇವರು ಇನ್ನೂ ದಿಕ್ಕು–ದನಿಯಿಲ್ಲದ, ಜಾತಿ ಹೆಸರೇ ತಿಳಿಯದ ನೂರಾರು ಅಲೆಮಾರಿ ಸಮುದಾಯಗಳು ಸೌಲಭ್ಯ ವಂಚಿತರಾಗಿ ಸರಿಯಾದ ನೆಲೆಯಿಲ್ಲದೆ ಅತಂತ್ರ ಸ್ಥಿತಿಯಲ್ಲಿದ್ದು, ಇವರು ಬದುಕು ಕಟ್ಟಿಕೊಡಲು ಶ್ರಮಿಸುವ ಅಗತ್ಯವಿದೆ. ಇವರ ಜೊತೆ ದಸಂಸವು ನಿಂತು ಅಲೆಮಾರಿ ಸಮುದಾಯಗಳ ಬದುಕು ಬವಣೆಗಳ ಬಗ್ಗೆ ಹೋರಾಡಲಿದೆ ಎಂದರು.

ಏಕಲವ್ಯನಗರದ ಗ್ರಾಮ ಪಂಚಾಯಿತಿ ಸದಸ್ಯ ರೇವಣ್ಣ ಮಾತನಾಡಿ, ಏಕಲವ್ಯನಗರದ ವೈ.ಕುಮಾರ ರಾಜ್ಯಾಧ್ಯಕ್ಷರಾಗಿ ಆಯ್ಕೆಯಾಗಿರುವುದು ಏಕಲವ್ಯನಗರಕ್ಕೆ ಸಂದ ಗೌರವವಾಗಿದೆ. ಅವರು ದೊಂಬಿದಾಸ ಸಮಾಜದ ಹಲವಾರು ಸಮಸ್ಯೆಗಳನ್ನು ಪರಿಹರಿಸಲು ಸಂಘಟಿತರಾಗಿ ಹೋರಾಟ ಮಾಡಿ, ಸರ್ಕಾರದ ಗಮನ ಸೆಳೆದು, ಈ ಸಮಾಜದ ಸಮಸ್ಯೆಗಳನ್ನು ಬಗೆಹರಿಸಲು ಶ್ರಮಿಸಬೇಕಾಗಿದೆ ಎಂದರು. ದೊಂಬಿದಾಸ ಸಮಾಜದ ಹಿರಿಯ ಮುಖಂಡ ವೆಂಕಟಸ್ವಾಮಪ್ಪ ಮಾತನಾಡಿದರು.

ಅಭಿನಂದನೆ ಸ್ವೀಕರಿಸಿದ ವೈ.ಕುಮಾರ್ ಮಾತನಾಡಿ, ಅಲೆಮಾರಿ ಸಮಾಜವು ಬರೀ ಅಪಮಾನಗಳನ್ನೇ ಅನುಭವಿಸುತ್ತಾ ಬರುತ್ತಿದೆ. ನಮ್ಮನ್ನು ಮನುಷ್ಯರ ರೀತಿ ಸಮಾಜ ನೋಡದೆ, ಹೊರಗಿಟ್ಟಿದೆ. ನಾವು ಮಾತನಾಡಲು ಅವಕಾಶ ನೀಡಿರಲಿಲ್ಲ. ಆದರೆ

ದಸಂಸ ವತಿಯಿಂದ ಆತ್ಮೀಯ ಅಭಿನಂದನೆ

ದ.ಸಂ.ಸದ ನಿಂಗರಾಜ್ ಮಲ್ಲಾಡಿ ಅವರು ನಮ್ಮನ್ನು ಗುರುತಿಸಿ ಈ ಬಡ ಕುಟುಂಬಗಳ ಜೊತೆ ಅಭಿನಂದಿಸುತ್ತಿರುವುದು ನನಗೆ ಸಿಕ್ಕ ಗೌರವವಾಗಿದೆ ಎಂದು ಕೃತಜ್ಞತೆ ಸಲ್ಲಿಸಿದರು. ಗ್ರಾಮ ಪಂಚಾಯಿತಿ ಸದಸ್ಯರಾದ ರಾಮಸ್ವಾಮಿ, ಶ್ರೀಧರ, ಮಂಗಳಮ್ಮ, ದಸಂಸದ ಹೆಚ್.ಬಿ. ದಿವಾಕರ್, ದೇವೇಂದ್ರ ಕುಳುವಾಡಿ, ಕಿರಿಜಾಜಿ ಗಜೇಂದ್ರ, ಏಕಲವ್ಯನಗರದ ಮುಖಂಡರಾದ ನಂದನ್‌ಕುಮಾರ್, ಲೋಕೇಶ, ಮಂಜ, ಕಿರಣ, ಸತೀಶ, ದಿನೇಶ, ಪ್ರಕಾಶ, ಅಂಗವಿಕಲರ ಸಂಘದ ಶಿವಶೆಟ್ಟಿ, ತಿಮ್ಮರಾಯಪ್ಪ, ಕುಮಾರ, ಕೃಷ್ಣ, ಸುರೇಶ, ಶ್ರೀನಿವಾಸ, ಅಲೆಮಾರಿ ಸಮಾಜದ ಮಹಿಳೆಯರಾದ ರಂಗಮ್ಮ, ಕಮಲಮ್ಮ, ಕಮಲಮ್ಮ ಶಿಲ್ಪಾ, ಹರಿಣಿ, ಶೈಲಜಾ, ಸವಿತಾ, ಅಂಬಿಕಾ, ಮಾನಸ, ಮಹದೇವಮ್ಮ ಮತ್ತಿತರರು ಈ ವೇಳೆ ಉಪಸ್ಥಿತರಿದ್ದರು.

ದೇಶ - ವಿದೇಶ

ಆತ್ಮಹತ್ಯೆಗೆ ಯತ್ನಿಸಿದ್ದ ದಕ್ಷಿಣ ಕೊರಿಯಾದ ಮಾಜಿ ರಕ್ಷಣಾ ಸಚಿವ



ದಕ್ಷಿಣ ಕೊರಿಯಾ: ದಕ್ಷಿಣ ಕೊರಿಯಾದಲ್ಲಿ ಮಿಲಿಟರಿ ಆಡಳಿತ ಅನುಷ್ಠಾನದ ಕುರಿತು ತನಿಖೆ ನಡೆಯುತ್ತಿದೆ. ಈ ಪ್ರಕರಣದಲ್ಲಿ ಬಂಧಿತರಾದ ಮಾಜಿ ರಕ್ಷಣಾ ಸಚಿವ ಕಿಮ್ ಯೋಂಗ್ ಹ್ಯುನ್ ಆತ್ಮಹತ್ಯೆಗೆ ಯತ್ನಿಸಿದ್ದು ಅವರನ್ನು ರಕ್ಷಿಸಲಾಗಿದೆ. ಅಧ್ಯಕ್ಷ ಯೂನ್ ಸುಕ್ ಯೋಲ್ ಅವರ ತುರ್ತು ಮಿಲಿಟರಿ ಆಡಳಿತ ಆದೇಶವನ್ನು ಅನುಷ್ಠಾನಗೊಳಿಸುವಲ್ಲಿ ಕಿಮ್ ಯೋಂಗ್ ಹ್ಯುನ್ ಪಾತ್ರದ ತನಿಖೆಗಾಗಿ ಕಳೆದ ವಾರ ಇಬ್ಬರು ಉನ್ನತ ದಕ್ಷಿಣ ಕೊರಿಯಾದ ಪೊಲೀಸ್ ಅಧಿಕಾರಿಗಳನ್ನು ಬಂಧಿಸಲಾಗಿದೆ.

ಸಿಯೋಲ್‌ನ ಬಂಧನ ಕೇಂದ್ರದಲ್ಲಿ ಕಿಮ್ ಆತ್ಮಹತ್ಯೆಗೆ ಯತ್ನಿಸಿದರು. ಆದರೆ ಅವರನ್ನು ರಕ್ಷಿಸಲಾಗಿದ್ದು ಈಗ ಅವರು ಸ್ಥಿರ ಸ್ಥಿತಿಯಲ್ಲಿದ್ದಾರೆ ಎಂದು ಕೊರಿಯಾ ತಿದ್ದುಪಡಿ ಸೇವಾ ಆಯುಕ್ತ ಜನರಲ್ ಶಿನ್ ಯೋಂಗ್ ಹ್ಯೆ ತಿಳಿಸಿದರು. ದಂಗೆಯಲ್ಲಿ ಪ್ರಮುಖ ಪಾತ್ರ ವಹಿಸಿದ ಮತ್ತು ಅಧಿಕಾರವನ್ನು ದುರುಪಯೋಗಪಡಿಸಿಕೊಂಡ ಆರೋಪದ ಮೇಲೆ ಸಿಯೋಲ್ ನ್ಯಾಯಾಲಯವು ಕಿಮ್ ವಿರುದ್ಧ ವಾರಂಟ್ ಹೊರಡಿಸಿದ ನಂತರ ಅವರನ್ನು ಬಂಧಿಸಲಾಗಿದೆ. ರಾಷ್ಟ್ರೀಯ ಅಸೆಂಬ್ಲಿಯಲ್ಲಿ ಪೊಲೀಸ್ ಪಡೆಯನ್ನು ನಿಯೋಜಿಸುವಲ್ಲಿ ಅವರ ಪಾತ್ರದ ಕುರಿತು ತನಿಖೆ ಮಾಡಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ರಾತ್ರೋರಾತ್ರಿ ಬಾಂಗ್ಲಾದೇಶದಿಂದ ಕಾಲ್ನಡಿಗೆಯಲ್ಲೇ ಭಾರತಕ್ಕೆ ಬಂದ ಹಿಂದೂ ಬಾಲಕಿ

ನವದೆಹಲಿ: ಶೇಖ್ ಹಸೀನಾ ದೇಶ ತೊರೆದ ಕೂಡಲೇ ಬಾಂಗ್ಲಾದೇಶದಲ್ಲಿ ಹಿಂದೂಗಳ (Hindus) ಬದುಕು ದುಸ್ತರವಾಗಿದೆ. ಯೂನಸ್ ಆಡಳಿತದಲ್ಲಿ ಹಿಂದೂಗಳ ಮೇಲಿನ ದೌರ್ಜನ್ಯ ನಡೆಯುತ್ತಿದೆ. ಹಿಂದೂ ದೇವಾಲಯಗಳನ್ನು ಕೆಡವಲಾಗುತ್ತಿದೆ. ಬಾಂಗ್ಲಾದೇಶದಲ್ಲಿ ನೆಲೆಸಿರುವ ಹಿಂದೂಗಳು ಬಲವಂತದಿಂದ ಪಲಾಯನ ಮಾಡುವಂತಹ ಸ್ಥಿತಿ ನಿರ್ಮಾಣವಾಗಿದೆ. ಹಿಂದೂಗಳ ಮೇಲೆ ನಡೆಯುತ್ತಿರುವ ದೌರ್ಜನ್ಯದ ನಡುವೆ, ಬಾಂಗ್ಲಾದೇಶದ 17 ವರ್ಷದ ಹಿಂದೂ ಹುಡುಗಿ ರಾತ್ರೋರಾತ್ರಿ ಭಾರತಕ್ಕೆ ಓಡಿ ಬಂದಿದ್ದಾಳೆ. ಇಲ್ಲಿ ಗಡಿ ಭದ್ರತಾ ಪಡೆ ಆಕೆಯನ್ನು ಹಿಡಿದು ಪಶ್ಚಿಮ ಬಂಗಾಳ ಪೊಲೀಸರಿಗೆ ಒಪ್ಪಿಸಿದೆ. 17 ವರ್ಷದ ಹಿಂದೂ ಯುವತಿಯೊಬ್ಬಳು ತನ್ನ ಕುಟುಂಬವು ಇಸ್ಕಾನ್ ಭಕ್ತರಾಗಿರುವುದರಿಂದ ಮೂಲಭೂತವಾದಿಗಳಿಂದ ಬೆದರಿಕೆ ಹಾಕಲಾಗಿದೆ ಎಂದು ಹೇಳಿಕೊಂಡಿದ್ದಾಳೆ. ಆಕೆಯ ಕುಟುಂಬ ಇಸ್ಕಾನ್‌ನ ಭಕ್ತರು. ಮೂಲಭೂತವಾದಿಗಳು ಅವರನ್ನು ಅಪಹರಿಸಿ ಇಡೀ ಕುಟುಂಬವನ್ನು ಕೊಲ್ಲುವುದಾಗಿ ಬೆದರಿಕೆ ಹಾಕಿದ್ದಾರೆ. ಆಕೆಯ ತಂದೆ ವೈದ್ಯಕೀಯ ಪ್ರತಿನಿಧಿಯಾಗಿದ್ದು, ದೀರ್ಘಕಾಲದಿಂದ ಅನಾರೋಗ್ಯದಿಂದ ಬಳಲುತ್ತಿದ್ದಾರೆ ಎಂದು ಆಕೆಯ ಸಂಬಂಧಿ ತಿಳಿಸಿದ್ದಾರೆ.

75 ನಾಗರಿಕರನ್ನು ಸಿರಿಯಾದಿಂದ ಸುರಕ್ಷಿತವಾಗಿ ಸ್ಥಳಾಂತರಿಸಿದ ಭಾರತ

ಸಿರಿಯಾ: ಸಿರಿಯಾದಲ್ಲಿ ಪ್ರಕ್ಷುಬ್ಧ ವಾತಾವರಣ ನಿರ್ಮಾಣವಾಗಿದೆ. ಅಸ್ಸಾದ್ ಸರ್ಕಾರ ಪತನಗೊಂಡು, ಅಧ್ಯಕ್ಷ ಬೇರೆ ದೇಶಕ್ಕೆ ಪಲಾಯನ ಮಾಡಿದ್ದಾರೆ. ಬಂಡುಕೋರರು ರಾಜಧಾನಿ ಡಮಾಸ್ಕಸ್ ಸೇರಿದಂತೆ ಬಹುತೇಕ ಎಲ್ಲಾ ಪ್ರದೇಶಗಳನ್ನು ವಶಪಡಿಸಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಅಲ್ಲಿಯ ಪ್ರಸ್ತುತ ಪರಿಸ್ಥಿತಿಯನ್ನು ಗಮನಿಸಿರುವ ಭಾರತವು 75 ಭಾರತೀಯರನ್ನು ಇದೀಗ ಸುರಕ್ಷಿತವಾಗಿ ಲೆಬನಾನ್‌ಗೆ ಸ್ಥಳಾಂತರ ಮಾಡಿದ್ದು, ಶೀಘ್ರವೇ ಭಾರತಕ್ಕೆ ಕರೆತರಲು ಉದ್ದೇಶಿಸಿದೆ. ಸಿರಿಯಾದಿಂದ ಸ್ಥಳಾಂತರಿಸಲ್ಪಟ್ಟವರಲ್ಲಿ ಜಮ್ಮು–ಕಾಶ್ಮೀರದ 44 ಯಾತ್ರಾರ್ಥಿಗಳೂ ಸೇರಿದ್ದಾರೆ. ರಾಜಧಾನಿ ಡಮಾಸ್ಕಸ್‌ನಿಂದ 10 ಕಿಲೋಮೀಟರ್ ದೂರದಲ್ಲಿರುವ ಮತ್ತೊಂದು ಪಟ್ಟಣವಾದ ಸೈದಾ ಜೈನಾಬ್‌ನಲ್ಲಿ ಯಾತ್ರಿಕರು ಸಿಲುಕಿಕೊಂಡಿದ್ದರು. ಸಿರಿಯಾದಲ್ಲಿನ ಪ್ರಸ್ತುತ ಭದ್ರತಾ ಪರಿಸ್ಥಿತಿ ಮತ್ತು ಭಾರತೀಯ ನಾಗರಿಕರ ನಿರಂತರ ವಿನಂತಿ ಬಳಿಕ ಅವರನ್ನು ಸ್ಥಳಾಂತರಿಸುವ ಕಾರ್ಯಕ್ಕೆ ಒಪ್ಪಿಗೆ ನೀಡಲಾಗಿತ್ತು.

ದಂಗೆಯ ನಂತರದ ಸೂಕ್ಷ್ಮ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು, ಭಾರತ ಸರ್ಕಾರವು ಇನ್ನೂ ಸಿರಿಯಾದಲ್ಲಿ ವಾಸಿಸುವ ಭಾರತೀಯ ನಾಗರಿಕರಿಗೆ ಎಚ್ಚರಿಕೆ ವಹಿಸಲು ಸಲಹೆ ನೀಡಿದೆ.

ಅಕ್ರಮ ವಲಸಿಗರ ವಿರುದ್ಧ ಅಸ್ಸಾಂ ಸಿಎಂ ಕಠಿಣ ಕ್ರಮ



ಅಸ್ಸಾಂ: ಅಸ್ಸಾಂ ಸರ್ಕಾರ ಎನ್‌ಆರ್‌ಸಿಗೆ ಸಂಬಂಧಿಸಿದಂತೆ ಒಂದಷ್ಟು ಕಠಿಣ ಕ್ರಮಗಳನ್ನು ಕೈಗೊಳ್ಳುತ್ತಿದೆ. ಈಗ ಎನ್‌ಆರ್‌ಸಿಗೆ ಅರ್ಜಿ ಸಲ್ಲಿಸದೇ ಇದ್ದಲ್ಲಿ, ಆಧಾರ್ ಕಾರ್ಡ್‌ನ್ನೂ ಕೊಡಲಾಗುವುದಿಲ್ಲ ಎಂಬ ತೀರ್ಮಾನವನ್ನು ಅಸ್ಸಾಂ ಸರ್ಕಾರ ತೆಗೆದುಕೊಂಡಿದೆ. ಬಾಂಗ್ಲಾದೇಶದಿಂದ ವಲಸಿಗರು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಅದನ್ನು ತಡೆಗಟ್ಟುವುದಕ್ಕಾಗಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಸಚಿವ ಸಂಪುಟ ಸಭೆಯ ಬಳಿಕ ಸಿಎಂ ಹಿಮಂತ ಬಿಸ್ವ ಶರ್ಮ ಹೇಳಿದ್ದಾರೆ. ಸರ್ಕಾರದ ನಡೆಯು ಆಧಾರ್ ಜೊತೆ ಎನ್‌ಆರ್‌ಸಿಯನ್ನು ಲಿಂಕ್ ಮಾಡುವುದಾಗಿದೆ ಎಂದು ವಿಶ್ಲೇಷಿಸಲಾಗುತ್ತಿದೆ. 2 ತಿಂಗಳ ಅವಧಿಯಲ್ಲಿ ಅಸ್ಸಾಂ ಪೊಲೀಸರು ಹಲವು ಮಂದಿ ಅಕ್ರಮ ಬಾಂಗ್ಲಾ ವಲಸಿಗರನ್ನು ಬಂಧಿಸಿದ್ದಾರೆ. ಇದು ಕಳವಳದ ವಿಷಯವಾಗಿದೆ. ನಮ್ಮ ವ್ಯವಸ್ಥೆಯನ್ನು ಸದೃಢಗೊಳಿಸುವ ಅನಿವಾರ್ಯತೆ ಇದೆ. ಆದ್ದರಿಂದ ನಾವು ಆಧಾರ್ ಕಾರ್ಡ್ ವ್ಯವಸ್ಥೆಯನ್ನೇ ಬಿಗಿಗೊಳಿಸುತ್ತಿದ್ದೇವೆ. ಇನ್ನು ಮುಂದೆ, ರಾಜ್ಯ ಸರ್ಕಾರದ ಸಾಮಾನ್ಯ ಆಡಳಿತ ಇಲಾಖೆಯು ಆಧಾರ್ ಅರ್ಜಿದಾರರ ಪರಿಶೀಲನೆ ಕೈಗೊಳ್ಳಲು ನೋಡಲ್ ಏಜೆನ್ಸಿಯಾಗಿರುತ್ತದೆ ಮತ್ತು ಪ್ರತಿ ಜಿಲ್ಲೆಯಲ್ಲಿ ಒಬ್ಬ ಎಡಿಸಿ ಸಂಬಂಧಪಟ್ಟ ವ್ಯಕ್ತಿಯಾಗಿರುತ್ತಾರೆ ಎಂದು ಶರ್ಮಾ ಹೇಳಿದರು.

ಮಸಾಜ್ ಪಾರ್ಲರ್ ಎಡವಟ್ಟು; ಪಾಪ್ ಪ್ರಸಿದ್ಧ ಗಾಯಕಿ ಸಾವು



ಥೈಲ್ಯಾಂಡ್: ಮಸಾಜ್ ಪಾರ್ಲರ್ ಎಡವಟ್ಟಿನಿಂದ ಅನಾರೋಗ್ಯದ ನಂತರ ಥೈಲ್ಯಾಂಡ್‌ನಲ್ಲಿ ಗಾಯಕಿಯೊಬ್ಬರು ಸಾವನ್ನಪ್ಪಿರುವ ದಾರುಣ ಘಟನೆ ನಡೆದಿದೆ. ಕುತ್ತಿಗೆ ತಿರುಚುವ ಮಸಾಜ್‌ಗಳ ಸರಣಿ ಈ ಸಾವಿಗೆ ಕಾರಣವೆಂದು ತಿಳಿದು ಬಂದಿದೆ. ಮಾರಣಾಂತಿಕ ಮಸಾಜ್‌ನ ಅಪಾಯದ ಬಗ್ಗೆ ದೇಶದ ವೈದ್ಯರಿಂದ ಎಚ್ಚರಿಕೆಯನ್ನು ಹುಟ್ಟುಹಾಕಿದೆ.

ಥಾಯ್ ಜಾನಪದ ಗಾಯಕಿ 20 ವರ್ಷ ವಯಸ್ಸಿನ ಛಾಯದಾ ಪ್ರಾ–ಹೋಮ್, ಡಿ.8ರಂದು ಬೆಳಿಗ್ಗೆ ಉಡಾನ್ ಥಾನಿಯ ಪಾರ್ಲರ್‌ನಲ್ಲಿ ಕುತ್ತಿಗೆ ತಿರುಚುವ ಮಸಾಜ್‌ಗಳ ಸರಣಿಯಿಂದ ತೊಂದರೆಗಳನ್ನು ಅನುಭವಿಸಿದ ನಂತರ ಸಾವನ್ನಪ್ಪಿದ್ದಾರೆ. ಛಾಯದಾ ಅವರು ಭುಜದ ನೋವನ್ನು ನಿವಾರಿಸಲು ಮಸಾಜ್ ಮಾಡಿಸಿಕೊಳ್ಳಲು ಪಾರ್ಲರ್‌ಗೆ ಹೋಗಿದ್ದರು, ಆದರೆ ಚಿಕಿತ್ಸೆಗಳು ತೀವ್ರ ಮತ್ತು ಮಾರಣಾಂತಿಕ ಆರೋಗ್ಯ ಸಮಸ್ಯೆಗಳನ್ನು ಉಂಟು ಮಾಡಿದವು. ಅಕ್ಟೋಬರ್ ಆರಂಭದಲ್ಲಿ ಛಾಯದಾ ಮೊದಲು ಪಾರ್ಲರ್‌ಗೆ ಭೇಟಿ ನೀಡಿದ್ದರು, ಅಲ್ಲಿ ಮಸಾಜ್ ಮಾಡುವವರು ಕುತ್ತಿಗೆ ತಿರುಚುವ ತಂತ್ರಗಳನ್ನು ಪ್ರದರ್ಶಿಸಿದರು. ಮೊದಲ ಸೆಶನ್ ಬಳಿಕ ಎರಡು ದಿನಗಳಲ್ಲಿ, ಗಾಯಕಿ ತನ್ನ ಕತ್ತಿನ ಹಿಂಭಾಗದಲ್ಲಿ ನೋವು ಅನುಭವಿಸಲು ಪ್ರಾರಂಭಿಸಿದಳು. ಎರಡನೇ ಸೆಶನ್ ನಂತರ, ಆಕೆಯ ಸ್ಥಿತಿಯು ಹದಗೆಟ್ಟಿತ್ತು.

ಮೈಸೂರು ಮಿತ್ರ ಶುಕ್ರವಾರ 13 ಡಿಸೆಂಬರ್ 2024



ಬಸ್‌ಗಳ ಸಂಚಾರ ಸಂಪೂರ್ಣ ಸ್ಥಗಿತಗೊಂಡಿದ್ದರಿಂದ ವಿರಾಜಪೇಟೆ ಬಸ್ ನಿಲ್ದಾಣ ಪ್ರಯಾಣಿಕರಿಲ್ಲದೆ ಬಿಕೋ ಎನ್ನುತಿತ್ತು.



ನಾಪೋಕ್ಲುವಿನಲ್ಲಿ ಬಂದ್‌ಗೆ ಉತ್ತಮ ಸ್ಪಂದನೆ ದೊರೆತ್ತಿದ್ದು, ಅಂಗಡಿ ಮುಂಗಟ್ಟುಗಳು ಮುಚ್ಚಿದ್ದರಿಂದ ಜನರ ಸಂಚಾರ ವಿರಳವಾಗಿತ್ತು.



ಕುಶಾಲನಗರದಲ್ಲಿ ಬಂದ್‌ಗೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಬಹುತೇಕ ಅಂಗಡಿ ಮುಂಗಟ್ಟುಗಳು ಮುಚ್ಚಿದ್ದವು.



ಸಿದ್ದಾಪುರದಲ್ಲಿ ಕೊಡಗು ಬಂದ್‌ಗೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಗುರುವಾರ ಖಾಸಗಿ ಬಸ್‌ಗಳು ಸಂಚಾರ ಸ್ಥಗಿತಗೊಳಿಸಿದ್ದವು.

ಅರ್ಧ ದಿನದ ಕೊಡಗು ಬಂದ್ ಯಶಸ್ವಿ

ವಿದ್ಯಾಧರ್‌ನನ್ನು ಗಡಿಪಾರು ಮಾಡುವಂತೆ ಒತ್ತಾಯಿಸಿ

ಬೆಳಗ್ಗೆ 6 ರಿಂದ ಮಧ್ಯಾಹ್ನ 12ರವರೆಗೆ ಮುಚ್ಚಿದ್ದ ಅಂಗಡಿ ಮುಂಗಟ್ಟು

ಮಡಿಕೇರಿ, ಡಿ.12–ವೀರ ಸೇನಾನಿಗಳಾದ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಮತ್ತು ಜನರಲ್ ಕೆ.ಎಸ್.ತಿಮ್ಮಯ್ಯ ಅವರ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ ಸಂದೇಶ ಹಾಕಿದ ಆರೋಪಿ ವಕೀಲ ವಿದ್ಯಾಧರ್‌ನನ್ನು ಗಡಿಪಾರು ಮಾಡುವಂತೆ ಒತ್ತಾಯಿಸಿ ಕೊಡಗು ಸರ್ವಜನಾಂಗಗಳ ಒಕ್ಕೂಟ ಗುರುವಾರ ಕರೆ ನೀಡಿದ ಅರ್ಧ ದಿನದ (ಬೆಳಗ್ಗೆ 6 ರಿಂದ ಮಧ್ಯಾಹ್ನ 12 ಗಂಟೆವರೆಗೆ) 'ಕೊಡಗು ಬಂದ್'ಗೆ ಜಿಲ್ಲೆಯಲ್ಲಿ ಭಾಗಶಃ ಸ್ಪಂದನೆ ದೊರಕಿತು.

ಜಿಲ್ಲಾ ಕೇಂದ್ರ ಮಡಿಕೇರಿ, ತಾಲೂಕು ಕೇಂದ್ರಗಳಾದ ವಿರಾಜಪೇಟೆ, ಪೊನ್ನಂಪೇಟೆ ವಿಭಾಗಗಳಲ್ಲಿ ಬಂದ್‌ಗೆ ಪೂರ್ಣ ಬೆಂಬಲ ಕಂಡು ಬಂದಿತ್ತಾದರೂ ಸೋಮವಾರಪೇಟೆ, ಕುಶಾಲನಗರ ವಿಭಾಗಗಳಲ್ಲಿ ಬಂದ್ ಹೆಚ್ಚಾಗಿ ಕಂಡು ಬರಲಿಲ್ಲ. ಕೆ.ಎಂ.ಕಾರ್ಯಪ್ಪ ಜನ್ಮ ಸ್ಥಳವಾದ ಉತ್ತರ ಕೊಡಗಿನ ಶನಿವಾರಸಂತೆಯಲ್ಲಿ ಪೂರ್ಣ ಬಂದ್ ಮಾಡಲಾಗಿತ್ತು ಇದರಿಂದ ಶನಿವಾರಸಂತೆ ವ್ಯಾಪ್ತಿ ಬೆಳಗ್ಗೆಯಿಂದಲೇ ಯಾವುದೇ ಅಂಗಡಿ ಮುಂಗಟ್ಟುಗಳು ತೆರೆಯಲಿಲ್ಲ. ವಾಹನಗಳು, ಖಾಸಗಿ ಬಸ್‌ಗಳು ಕೂಡ ಅರ್ಧ ದಿನ ಸಂಚಾರ ಸ್ಥಗಿತಗೊಳಿಸಿದವು.

ಬಿಕೋ ಎಂದ ಬೀದಿಗಳು: ಜಿಲ್ಲಾ ಕೇಂದ್ರ ಮಡಿಕೇರಿಯಲ್ಲಿ ಬೆಳಗ್ಗೆ 6 ರಿಂದ ಮಧ್ಯಾಹ್ನ 12 ಗಂಟೆವರೆಗೆ ಹಾಲು, ಹಣ್ಣು–ಹಂಪಲು, ಔಷಧ ಅಂಗಡಿಗಳನ್ನು ಹೊರತುಪಡಿಸಿ ಬಹುತೇಕ ಅಂಗಡಿ ಮುಂಗಟ್ಟುಗಳು ಮುಚ್ಚಿದ್ದವು.

ಬಂದ್ ಅವಧಿಯಲ್ಲಿ ಖಾಸಗಿ ವಾಹನಗಳು, ಸರ್ಕಾರಿ ಬಸ್ ಯಥಾ ಪ್ರಕಾರ ಸಂಚರಿಸಿದರೂ, ಎಂದಿನಂತೆ ವಾಹನಗಳ ದಟ್ಟಣೆ ಕಂಡು ಬರಲಿಲ್ಲ. ಅಲ್ಲದೆ, ಖಾಸಗಿ ಬಸ್‌ಗಳ ಸಂಚಾರ ಜಿಲ್ಲಾ ವ್ಯಾಪ್ತಿಯಲ್ಲಿ ಬಹುತೇಕ ಸ್ಥಗಿತಗೊಂಡಿದ್ದವು. ಆಟೋ ಚಾಲಕರು ಸೇರಿದಂತೆ ವಿವಿಧ ವಾಹನ ಸಂಘಟನೆಗಳು ಬಂದ್‌ಗೆ ಬೆಂಬಲ ಸೂಚಿಸಿದ ಹಿನ್ನೆಲೆಯಲ್ಲಿ ಮಕ್ಕಳನ್ನು ಶಾಲೆಗೆ ಕರೆದೊಯ್ಯುವ ಆಟೋ ಸಂಚಾರವಿಲ್ಲದೆ ಶಾಲೆಗಳಲ್ಲಿ ಮಕ್ಕಳ ಹಾಜರಾತಿ ಕ್ಷೀಣಿಸಿತ್ತು. ಬಸ್‌ಗಳ ಕೊರತೆಯಿಂದ ಸರ್ಕಾರಿ ಕಚೇರಿಗಳಲ್ಲಿ ಸಿಬ್ಬಂದಿ ಕೊರತೆ ಕಂಡು ಬಂತು.



ಕೊಡಗು ಬಂದ್ ಹಿನ್ನೆಲೆಯಲ್ಲಿ ಗುರುವಾರ ಮಡಿಕೇರಿ ನಗರದ ಹೃದಯ ಭಾಗದಲ್ಲಿ ಜನರು ಹಾಗೂ ವಾಹನಗಳ ಸಂಚಾರ ಸ್ಥಗಿತವಾಗಿತ್ತು.

ರಸ್ತೆ ತಡೆ: ಕೊಡಗು ಸರ್ವಜನಾಂಗಗಳ ಒಕ್ಕೂಟದ ಸಂಚಾಲಕ ರಾಜೀವ್ ಬೋಪಯ್ಯ ನೇತೃತ್ವದಲ್ಲಿ ಮಧ್ಯಾಹ್ನ ನಗರದ ಜನರಲ್ ಕೆ.ಎಸ್.ತಿಮ್ಮಯ್ಯ ವೃತ್ತದಲ್ಲಿ ಕೆಲಕಾಲ ರಸ್ತೆ ತಡೆ ನಡೆಸಲಾಯಿತು. ಸಾಮಾಜಿಕ ಜಾಲತಾಣದಲ್ಲಿ ಕೆ.ಎಂ.ಕಾರ್ಯಪ್ಪ ಮತ್ತು ಜನರಲ್ ತಿಮ್ಮಯ್ಯ ಅವರ ಬಗ್ಗೆ ಅವಹೇಳನಕಾರಿ ಸಂದೇಶ ಹಾಕಿದ ವಕೀಲ ವಿದ್ಯಾಧರ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಪ್ರತಿಭಟನಾಕಾರರು, ಆತನನ್ನು ತಕ್ಷಣ ಜಿಲ್ಲೆಯಿಂದ ಗಡಿಪಾರು ಮಾಡಬೇಕೆಂದು ಆಗ್ರಹಿಸಿದರು.

ಪಾದಯಾತ್ರೆ ಎಚ್ಚರಿಕೆ: ರಾಜೀವ್ ಬೋಪಯ್ಯ ಮಾತನಾಡಿ, ಕೊಡಗಿನ ಹೆಮ್ಮೆಯ ವೀರ ಸೇನಾನಿಗಳಾದ ಕೆ.ಎಂ.ಕಾರ್ಯಪ್ಪ ಮತ್ತು ಕೆ.ಎಸ್.ತಿಮ್ಮಯ್ಯ ಅವರ ಬಗ್ಗೆ ಅವಹೇಳನ ಮಾಡಿರುವುದು ಅಕ್ಷಮ್ಯ ಅಪರಾಧ. ಆರೋಪಿಯನ್ನು ಗಡಿಪಾರು ಮಾಡಿ ಕಠಿಣ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಕುಟ್ಟದಿಂದ ಮಡಿಕೇರಿವರೆಗೆ ಬೃಹತ್ ಪಾದಯಾತ್ರೆ ನಡೆಸುವುದಾಗಿ ಜಿಲ್ಲಾಡಳಿತ ಮತ್ತು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ಬಳಿಕ ಮೆರವಣಿಗೆ ಮೂಲಕ ಜಿಲ್ಲಾಡಳಿತ ಭವನಕ್ಕೆ ಆಗಮಿಸಿದ ಒಕ್ಕೂಟದ ಪದಾಧಿಕಾರಿಗಳು ಅಪರ ಜಿಲ್ಲಾಧಿಕಾರಿ ಐಶ್ವರ್ಯ ಅವರಿಗೆ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ಮಡಿಕೇರಿ ಕೊಡವ ಸಮಾಜದ ಅಧ್ಯಕ್ಷ ಮಂಡುವಂಡ ಪಿ.ಮುತ್ತಪ್ಪ, ಮಾಜಿ ಸೈನಿಕ ಪ್ಯಾರಾಟ್ರೂಪರ್ ಬೊಟ್ಟಂಗಡ ಜಪ್ಪು, ಕೊಡಗು ಏಕೀಕರಣ ರಂಗದ ತಮ್ಮು ಪೂವಯ್ಯ, ಉಳ್ಳಿಯಡ ಪೂವಯ್ಯ, ರಾಬಿನ್ ದೇವಯ್ಯ, ಹೋಟೆಲ್ ಮಾಲೀಕರ ಸಂಘದ ದಿನೇಶ್ ಕಾರ್ಯಪ್ಪ, ಸುಲೇಮಾನ್, ನಜೀರ್, ಶರತ್, ಜಗದೀಶ್ ರೈ, ಕುಪ್ಪಂಡ ವಸಂತ, ಮೋಂತಿ ಗಣೇಶ್, ಮಾಳೇಟಿರ ಶ್ರೀನಿವಾಸ್, ಮಾಜಿ ಸೈನಿಕರ ಸಂಘ, ಮೂರ್ನಾಡು ಕೊಡವ ಸಮಾಜ ಸೇರಿದಂತೆ ವಿವಿಧ ಸಂಘಟನೆಗಳ ಪ್ರಮುಖರು ಭಾಗವಹಿಸಿದ್ದರು.

ಕುಶಾಲನಗರದಲ್ಲಿ ಮಿಶ್ರ ಪ್ರತಿಕ್ರಿಯೆ

ಕುಶಾಲನಗರ: ಕುಶಾಲನಗರದಲ್ಲಿ ಬಂದ್‌ಗೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಬಹುತೇಕ ಅಂಗಡಿ ಮುಂಗಟ್ಟುಗಳು, ಜನಜೀವನ ಎಂದಿನಂತೆ ನಡೆಯಿತು.

ಅಗತ್ಯ ಸೇವೆ, ಆಟೋ, ಟ್ಯಾಕ್ಸಿ ಓಡಾಟ, ಖಾಸಗಿ ಶಾಲೆಗಳು ಕಾರ್ಯಾರಂಭಿಸಿದವು. ಬಂದ್‌ಗೆ ಕುಶಾಲನಗರ ಚೇಂಬರ್ ಆಫ್ ಕಾಮರ್ಸ್ ನೈತಿಕ ಬೆಂಬಲ ವ್ಯಕ್ತಪಡಿಸಿತ್ತು ಇದೇ ವೇಳೆ ಕುಶಾಲನಗರ ಕೊಡವ ಸಮಾಜ ಪದಾಧಿಕಾರಿಗಳು ವ್ಯಾಪಾರ ವಹಿವಾಟು ಸ್ಥಗಿತಗೊಳಿಸಿ ಬಂದ್‌ಗೆ ಬೆಂಬಲ ನೀಡುವಂತೆ ವರ್ತಕರಲ್ಲಿ ಮನವಿ ಮಾಡಿದರು.

ವಿರಾಜಪೇಟೆಯಲ್ಲಿ ಬಸ್ ನಿಲ್ದಾಣ ಬಿಕೋ

ವಿರಾಜಪೇಟೆ: ಕೊಡಗು ಬಂದ್ ಹಿನ್ನೆಲೆಯಲ್ಲಿ ಗುರುವಾರ ಬೆಳಗ್ಗೆ 6 ರಿಂದ ಮಧ್ಯಾಹ್ನ 12 ಗಂಟೆವರೆಗೆ ಪಟ್ಟಣದಲ್ಲಿ ಅಂಗಡಿ–ಮುಂಗಟ್ಟು ಹಾಗೂ ಹೋಟೆಲ್‌ಗಳು ಮುಚ್ಚಿದ್ದವು.

ಖಾಸಗಿ ಬಸ್‌ಗಳ ಸಂಚಾರ ಸಂಪೂರ್ಣವಾಗಿ ಸ್ಥಗಿತಗೊಂಡಿದ್ದರಿಂದ ಪಟ್ಟಣದಲ್ಲಿ ಜನರ ಓಡಾಟ ಕಡಿಮೆಯಾಗಿತ್ತು. ದಿನನಿತ್ಯ ಜನಸಂದಣಿಯಿಂದ ಇದ್ದ ಬಸ್ ನಿಲ್ದಾಣ ಗುರುವಾರ ಪ್ರಯಾಣಿಕರಿಲ್ಲದೆ ಬಿಕೋ ಎನ್ನುವಂತಿತ್ತು. ಅಂಗಡಿ, ಹೋಟೆಲ್‌ಗಳು, ಬ್ಯಾಂಕ್ ಮತ್ತು ಕಚೇರಿಗಳು ಮುಚ್ಚಿ ಬಂದ್‌ಗೆ ಸಹಕರಿಸಿದವು.

ಗಾಂಜಾ ಸರಬರಾಜು: ಇಬ್ಬರ ಬಂಧನ



ಮೊಹಮ್ಮದ್‌ಆಲಂ



ಮೋನು

ಮಡಿಕೇರಿ: ಗಾಂಜಾ ಸರಬರಾಜು ಮಾಡುತ್ತಿದ್ದ ಇಬ್ಬರು ಬೆಡ್ ಶೀಟ್ ಮಾರಾಟಗಾರರನ್ನು ಬಂಧಿಸಿರುವ ಕುಶಾಲನಗರ ಠಾಣೆ ಪೊಲೀಸರು 550 ಗ್ರಾಂ ಗಾಂಜಾ ವಶಪಡಿಸಿಕೊಂಡಿದ್ದಾರೆ.

ಉತ್ತರಪ್ರದೇಶದ ಬುಲಂದಶೆಹರ್ ಜಿಲ್ಲೆಯ ಬೆಡ್ ಶೀಟ್ ಮಾರಾಟಗಾರರಾದ ಮೊಹಮ್ಮದ್ ಆಲಂ (32) ಹಾಗೂ ಮೋನು (26) ಬಂಧಿತರು. ಈ ಇಬ್ಬರು ಪಟ್ಟಣದ ಖಾಸಗಿ ಬಸ್ ನಿಲ್ದಾಣದಲ್ಲಿ ಗಾಂಜಾ ಸರಬರಾಜು ಮಾಡುತ್ತಿದ್ದರು. ದಾಳಿ ನಡೆಸಿದ ಪೊಲೀಸರು ಇಬ್ಬರನ್ನು ಬಂಧಿಸಿ, ಗಾಂಜಾ ವಶಪಡಿಸಿಕೊಂಡಿದ್ದಾರೆ.

ಸೋಮವಾರಪೇಟೆ ಡಿವೈಎಸ್‌ಪಿ ಆರ್.ವಿ.ಗಂಗಾಧರಪ್ಪ, ಕುಶಾಲನಗರ ನಗರ ಠಾಣಾಧಿಕಾರಿ ಬಿ.ಜಿ.ಪ್ರಕಾಶ್, ಮಹಿಳಾ ಠಾಣಾಧಿಕಾರಿ ಹೆಚ್.ಟಿ.ಗೀತಾ ಹಾಗೂ ಸಿಬ್ಬಂದಿ ಕಾರ್ಯಾಚರಣೆ ನಡೆಸಿದರು.

ಮಡಿಕೇರಿ ಕ್ಷೇತ್ರಕ್ಕೆ 25 ಕೋಟಿ ಅನುದಾನ ಬಿಡುಗಡೆ

ಸಿಎಂ ವಿಶೇಷ ಮಂಜೂರಾತಿ ಕಾರ್ಯಕ್ರಮದಡಿ ವಿವಿಧ ಅಭಿವೃದ್ಧಿ ಕಾಮಗಾರಿ

ಮಡಿಕೇರಿ: ಮುಖ್ಯಮಂತ್ರಿಗಳ ವಿಶೇಷ ಮಂಜೂರಾತಿ ಕಾರ್ಯಕ್ರಮದಡಿ ಮಡಿಕೇರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ 25 ಕೋಟಿ ರೂ. ಅನುದಾನ ಬಿಡುಗಡೆಗೊಂಡಿದ್ದು, ಶಾಸಕ ಡಾ.ಮಂತರ್‌ಗೌಡ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದರು.

ಅತೀ ಹೆಚ್ಚು ಮಳೆಯಿಂದ ಹದಗೆಟ್ಟಿರುವ ಸೋಮವಾರಪೇಟೆ ತಾಲೂಕಿನ ಶಾಂತಳ್ಳಿ ಹಾಗೂ ಬೆಟ್ಟದಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ರಸ್ತೆ ಕಾಮಗಾರಿಗಳಿಗೆ ಶಾಸಕರು ಭೂಮಿಪೂಜೆ ನೆರವೇರಿಸಿ, ಗುಣಮಟ್ಟದ ಕಾಮಗಾರಿ ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಮುಖ್ಯಮಂತ್ರಿಗಳ ವಿಶೇಷ ಮಂಜೂರಾತಿ ಕಾರ್ಯಕ್ರಮ, ಜಿಲ್ಲಾ ಪಂಚಾಯಿತಿ ಮೂಲಕ ಅನುಷ್ಠಾನಗೊಳ್ಳುವ ರಾಜ್ಯ ಹಣಕಾಸು ಆಯೋಗದ ಅನಿರ್ಬಂಧಿತ ಅನುದಾನ, ಟಾಸ್ಕ್‌ಫೋರ್ಸ್ ಯೋಜನೆ, 2023–24ನೇ ಸಾಲಿನ ವಿಪತ್ತು ಪರಿಹಾರ ನಿಧಿ ಯೋಜನೆಯಡಿ ಕ್ಷೇತ್ರದ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಆಯ್ದ ಕಾಮಗಾರಿಗಳಿಗೆ ಅನುದಾನ ಬಿಡುಗಡೆಗೊಂಡಿದ್ದು, ಭೂಮಿಪೂಜೆ ನೆರವೇರಿಸಲಾಗುತ್ತಿದೆ.



ಮಡಿಕೇರಿ ಕ್ಷೇತ್ರದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಡಾ.ಮಂತರ್‌ಗೌಡ ಚಾಲನೆ ನೀಡಿದರು.

ತಾಲೂಕಿನ ಬೆಟ್ಟದಳ್ಳಿ ಗ್ರಾಪಂ ವ್ಯಾಪ್ತಿಯ ಹಂಚಿನಳ್ಳಿ–ಬೀದಳ್ಳಿ, ಮಲ್ಲಳ್ಳಿ, ಕೊತ್ತನಳ್ಳಿ, ಕುಡಿಗಾಣ, ನಾಡ್ನಳ್ಳಿ, ಇನಕನಹಳ್ಳಿ, ಜಕ್ಕನಳ್ಳಿ, ಕುಮಾರಳ್ಳಿ, ಪುಷ್ಪಗಿರಿ, ಬಾಚಳ್ಳಿ, ಕೋಡಳ್ಳಿ ಭಾಗದ ಆಯ್ದ ಕಡೆಗಳಲ್ಲಿ ರಸ್ತೆ ಅಭಿವೃದ್ಧಿಗೆ ಚಾಲನೆ ನೀಡಲಾಯಿತು. ಶಾಂತಳ್ಳಿ ಗ್ರಾಪಂ ವ್ಯಾಪ್ತಿಯ ತಲ್ತರೆಶೆಟ್ಟಳ್ಳಿ, ಹರಗ–ಬರಕುಟ್ಟಿ ರಸ್ತೆ, ಹರಗ ಹೆಮ್ಮಟ್ಟಿರ ಗ್ರೂಪ್ ರಸ್ತೆ, ಉದ್ರಳ್ಳಿ, ಅಭಿಮಠ ಬಾಚಳ್ಳಿ–ಶಾಂತಳ್ಳಿ ಸೇರಿದಂತೆ ವಿವಿಧ ರಸ್ತೆ ಅಭಿವೃದ್ಧಿಗೆ ಈಗಾಗಲೇ ಭೂಮಿಪೂಜೆ ನೆರವೇರಿಸಲಾಗಿದೆ.

> ನಿಗದಿತ ಸಮಯದೊಳಗೆ ಕಾಮಗಾರಿ ಪೂರ್ಣಗೊಳಿಸಬೇಕು. ಗುಣಮಟ್ಟದ ಕಾಮಗಾರಿಗೆ ಆದ್ಯತೆ ನೀಡಬೇಕು. ಕೆಲಸ ನಡೆಯುವ ವೇಳೆ ಸ್ಥಳೀಯರು ಗಮನ ಹರಿಸಬೇಕು. ನಾಡ್ನಳ್ಳಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವಂತೆ ಸೇತುವೆ ನಿರ್ಮಾಣಕ್ಕೆ ನೀಲಿ ನಕ್ಷೆ ತಯಾರಿಸುವಂತೆ ಇಂಜಿನಿಯರ್‌ಗೆ ನಿರ್ದೇಶಿಸಲಾಗಿದೆ.
>
> –ಡಾ.ಮಂತರ್‌ಗೌಡ, ಶಾಸಕ

ಅನುದಾನ ಹಂಚಿಕೆ: 25 ಕೋಟಿ ರೂ. ಅನುದಾನದಲ್ಲಿ ಗ್ರಾಪಂ ವ್ಯಾಪ್ತಿಯ ರಸ್ತೆಗಳ ಅಭಿವೃದ್ಧಿಗೆ 19 ಕೋಟಿ ರೂ. ಅನುದಾನ ಮೀಸಲಿಡಲಾಗಿದೆ. ಒಟ್ಟು 25 ಕೋಟಿ ರೂ. ಅನುದಾನದಲ್ಲಿ ಮಡಿಕೇರಿ ನಗರಸಭೆಗೆ 3 ಕೋಟಿ ರೂ., ಕುಶಾಲನಗರ ಪುರಸಭೆಗೆ 2 ಕೋಟಿ ರೂ. ಹಾಗೂ ಸೋಮವಾರಪೇಟೆ ಪಪಂಗೆ 1 ಕೋಟಿ ರೂ. ಮೀಸಲಿಡಲಾಗಿದೆ. ಉಳಿದ 19 ಕೋಟಿ ರೂ. ಅನುದಾನವನ್ನು ಗ್ರಾಪಂ ವ್ಯಾಪ್ತಿಯ ರಸ್ತೆಗಳ ಅಭಿವೃದ್ಧಿಗೆ ಬಳಸಿಕೊಳ್ಳಲಾಗುತ್ತಿದ್ದು, ಪ್ರತಿ ಗ್ರಾಪಂಗೆ ಸರಾಸರಿ 45 ಲಕ್ಷರೂ. ಅನುದಾನ ದೊರೆತಂತಾಗಿದೆ.

ಈ ಸಂದರ್ಭ ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಕೆ.ಎಂ.ಲೋಕೇಶ್ ಕುಮಾರ್, ಪರಿಶಿಷ್ಟ ಜಾತಿ ವಿಭಾಗದ ಜಿಲ್ಲಾಧ್ಯಕ್ಷ ಬಿ.ಈ.ಜಯೇಂದ್ರ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಬಿ.ಸತೀಶ್, ಎಸ್ಸಿ ಘಟಕದ ಅಧ್ಯಕ್ಷ ರಾಜಪ್ಪ, ಶಾಂತಳ್ಳಿ ವಲಯ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಮಧುಕುಮಾರ್, ಬೆಟ್ಟದಳ್ಳಿ ವಲಯ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಸುರೇಶ್, ಪ್ರಮುಖರಾದ ವಿ.ಎ.ಲಾರೆನ್ಸ್, ಚೇತನ್, ಗ್ರಾಪಂ ಸದಸ್ಯ ತ್ರಿಶೂಲ್ ಇತರರು ಉಪಸ್ಥಿತರಿದ್ದರು.

ಪ್ರತಿಯೊಬ್ಬರಿಗೂ ಸರಕು–ಸೇವಾ ತೆರಿಗೆ ಅರಿವಿರಬೇಕು

• ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿ ಮಂಜುಕುಮಾರ್ ಸಲಹೆ • ಚಾ.ನಗರದಲ್ಲಿ ಲೆಕ್ಕಪರಿಶೋಧಕರಿಗೆ ಕಾರ್ಯಾಗಾರ

ಚಾಮರಾಜನಗರ, ಡಿ.12–ಪ್ರತಿಯೊಬ್ಬರಿಗೂ ಸರಕು ಮತ್ತು ಸೇವಾ ತೆರಿಗೆ ಬಗ್ಗೆ ಅರಿವು ಇರಬೇಕು ಎಂದು ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿ ಮಂಜುಕುಮಾರ್ ತಿಳಿಸಿದರು.

ನಗರದ ಸಂತೆಮರಳ್ಳಿ ರಸ್ತೆಯ ಖಾಸಗಿ ಹೋಟೆಲ್‌ನಲ್ಲಿ ಗುರುವಾರ ಚಾಮರಾಜನಗರ ಜಿಲ್ಲಾ ಲೆಕ್ಕಪರಿಶೋಧಕರ ಸಂಘದಿಂದ ಹಮ್ಮಿಕೊಂಡಿದ್ದ ಸರಕು ಮತ್ತು ಸೇವಾ ತೆರಿಗೆ ಕಾನೂನು ಅರಿವು ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಸರಕು ಮತ್ತು ಸೇವಾ ತೆರಿಗೆಯಡಿ ವಾಣಿಜ್ಯ ತೆರಿಗೆ ಇಲಾಖೆ ನೀಡುವ ನೋಟಿಸ್‌ಗೆ ತಪ್ಪದೇ ಉತ್ತರಿಸಬೇಕು. ಜಿಎಸ್‌ಟಿ ಕೌನ್ಸಿಲ್ ಹೊರ ತಂದಿರುವ ಕಾನೂನಿನ ಪ್ರಕಾರ 2017–18, 2019–20ನೇ ಸಾಲಿನ ಬಡ್ಡಿ ಮತ್ತು ದಂಡವನ್ನು ಜಿಎಸ್‌ಟಿ ಕಾಯ್ದೆ ಪ್ರಕಾರ ವಿನಾಯಿತಿ ಪಡೆಯಬಹುದು. ಆದ್ದರಿಂದ ಇದರ ಸದುಪಯೋಗ ಪಡೆದುಕೊಳ್ಳಬಹುದು. ಇಲ್ಲದಿದ್ದರೆ ತೆರಿಗೆ ಜೊತೆಗೆ ಹೆಚ್ಚು ಬಡ್ಡಿ ಮತ್ತು ದಂಡ ತೆರಬೇಕಾಗುತ್ತದೆ ಎಂದು ಹೇಳಿದರು.



ಚಾಮರಾಜನಗರದ ಖಾಸಗಿ ಹೋಟೆಲ್‌ನಲ್ಲಿ ನಡೆದ ಸರಕು ಮತ್ತು ಸೇವಾ ತೆರಿಗೆ ಅರಿವು ಕಾರ್ಯಾಗಾರವನ್ನು ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿ ಉಮಾಮಹೇಶ್ವರಿ ಉದ್ಘಾಟಿಸಿದರು.

ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿ ಉಮಾಮಹೇಶ್ವರಿ ಮಾತನಾಡಿ, ನಿರಂತರ ಕಲಿಕೆಯಿಂದ ಸೇವಾ ಮಾರ್ಗ ಸುಗಮವಾಗುತ್ತದೆ. ಪ್ರತಿವರ್ಷ ಇಂತಹ ಕಾರ್ಯಾಗಾರವನ್ನು ನಡೆಸಬೇಕು ಎಂದರು.

ಲೆಕ್ಕಪರಿಶೋಧಕರ ಸಂಘದ ಜಿಲ್ಲಾಧ್ಯಕ್ಷ ಸಿ.ಎಂ.ವೆಂಕಟೇಶ್ ಮಾತನಾಡಿ, ಜಿಎಸ್‌ಟಿ ಕಾಯ್ದೆ ಜಾರಿಗೊಂಡು 7 ವರ್ಷ ಕಳೆದರೂ ಇನ್ನೂ ಅನೇಕ ಬದಲಾವಣೆ ಆಗುತ್ತಿವೆ. ಪ್ರತಿವರ್ಷ ಜಿಎಸ್‌ಟಿ ಕಾಯ್ದೆ ಅರಿವು ಕಾರ್ಯಕ್ರಮ ಆಯೋಜಿಸಲಾಗಿದೆ. ಕಾಲ ಕಾಲಕ್ಕೆ ಕಾನೂನಿನಲ್ಲಿ ಆಗುವ ಬದಲಾವಣೆಯನ್ನು ಲೆಕ್ಕಪರಿಶೋಧಕರು ತಿಳಿದುಕೊಳ್ಳಬೇಕು. ಕಾನೂನು ತಜ್ಞರಿಂದ ಆಗಾಗ ಲೆಕ್ಕಪರಿಶೋಧಕರಿಗೆ ತರಬೇತಿಯನ್ನು ಸಂಘದಿಂದ ನೀಡಲಾಗುತ್ತಿದೆ ಎಂದು ತಿಳಿಸಿದರು.

ತರಬೇತಿಯಿಂದ ಲೆಕ್ಕಪರಿಶೋಧಕರಿಗೆ ಉತ್ತಮ ಸೇವೆ ಸಲ್ಲಿಸಲು ಸಹಕಾರಿಯಾಗಲಿದೆ. ದೇಶದಲ್ಲಿ ದಾಖಲೆ ಮೊತ್ತದ ಸರಕು ಮತ್ತು ಸೇವಾ ತೆರಿಗೆ ವಸೂಲಿಯಾಗುತ್ತಿದೆ. ಇದರಿಂದ ದೇಶ ಅಭಿವೃದ್ಧಿ ಪಥದತ್ತ ಮುಂದೆ ಸಾಗುತ್ತಿದೆ ಎಂದರು.

ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳಾದ ನಾಗರಾಜು, ಸಿ.ಜಿ.ಷಣ್ಮುಖ, ಲೆಕ್ಕಪರಿಶೋಧಕರ ಸಂಘದ ಕಾರ್ಯದರ್ಶಿ ಮಂಜು, ಹಿರಿಯ ಲೆಕ್ಕಪರಿಶೋಧಕರಾದ ಪುಟ್ಟಮಾದಪ್ಪ, ಶಿವಕುಮಾರ್, ಶಂಕರ್ ಪಾಟೀಲ್, ಸಂಘದ ಸದಸ್ಯರಾದ ಎಂ.ಕಮಲ್‌ರಾಜ್, ನವೀನ್, ಮಣಿಕಂಠಸ್ವಾಮಿ, ಟಿ.ಬಾಲು, ಚಂದ್ರು, ಶಂಭುಲಿಂಗಯ್ಯ, ನಾಗಣ್ಣ, ನಾರಾಯಣಸ್ವಾಮಿ, ರಂಗನಾಥ್, ಶ್ರೀಧರ್, ಪ್ರಭುಸ್ವಾಮಿ, ಮಹೇಂದ್ರ ಪ್ರಸಾದ್ ಮತ್ತಿತರರು ಹಾಜರಿದ್ದರು.

ಬೆಳಗಾವಿ ಅಧಿವೇಶನದಲ್ಲಿ ಜಯಣ್ಣಗೆ ಶ್ರದ್ಧಾಂಜಲಿ



ಮಾಜಿ ಶಾಸಕ ಎಸ್.ಜಯಣ್ಣ ಅವರಿಗೆ ಬೆಳಗಾವಿ ಅಧಿವೇಶನದಲ್ಲಿ ಶಾಸಕ ಕೃಷ್ಣಮೂರ್ತಿ ಶ್ರದ್ಧಾಂಜಲಿ ಸಲ್ಲಿಸಿದರು.

ಕೊಳ್ಳೇಗಾಲ, ಡಿ.12– ಮಾಜಿ ಶಾಸಕ ಎಸ್.ಜಯಣ್ಣ ಅವರಿಗೆ ಗುರುವಾರ ಬೆಳಗಾವಿ ಅಧಿವೇಶನದಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಈ ವೇಳೆ ಶಾಸಕ ಎ.ಆರ್.ಕೃಷ್ಣಮೂರ್ತಿ ಮಾತನಾಡಿ, ಎಸ್.ಜಯಣ್ಣ ಮತ್ತು ನನ್ನ ಸಂಬಂಧ ಗಟ್ಟಿಯಾಗಿತ್ತು. ನಾವೆಂದೂ ಪರಸ್ಪರ ಚುನಾವಣೆ ಎದುರಿಸಿರಲ್ಲಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮಾತಿಗೆ ಕಟ್ಟುಬಿದ್ದು ನನಗಾಗಿ ಕ್ಷೇತ್ರ ತ್ಯಾಗ ಮಾಡಿದ ತ್ಯಾಗಮಯಿ ಜಯಣ್ಣ ಎಂದು ಸ್ಮರಿಸಿದರು.

ಅವರು ಅಗಲಿಕೆ ಅತೀವ ದುಃಖ ತರಿಸಿದೆ. ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಸ್ಪಂದಿಸಿದ ನಾಯಕ ಎಸ್.ಜಯಣ್ಣ. ಅವರ ಅಧಿಕಾರಾವಧಿಯಲ್ಲಿ ಕೊಳ್ಳೇಗಾಲ ಕ್ಷೇತ್ರದಲ್ಲಿ ಅಗ್ನಿಶಾಮಕ ಠಾಣೆ, ಬಸ್ ನಿಲ್ದಾಣ, ಆದರ್ಶ ಶಾಲೆ, ಉಪವಿಭಾಗ ಆಸ್ಪತ್ರೆ ಅಭಿವೃದ್ಧಿ, ಯುಜಿಡಿ, ಕುಡಿಯುವ ನೀರಿನ ಯೋಜನೆ ಸೇರಿದಂತೆ ಅನೇಕ ಜನಪರ ಕೆಲಸಗಳು ನಡೆದವು ಎಂದರು.

ನಾನು ಮತ್ತು ಜಯಣ್ಣ ಒಟ್ಟಿಗೆ ಶಾಸಕರಾಗಿ ಅನ್ಯೋನ್ಯತೆಯಿಂದ ಕೆಲಸ ಮಾಡಿದ್ದೇವೆ. ನಾನು 1994ರಲ್ಲಿ ಸಂತೇಮರಳ್ಳಿ ಶಾಸಕನಾಗಿದ್ದೆ, ಅವರು ಕೊಳ್ಳೇಗಾಲ ಶಾಸಕರಾಗಿದ್ದರು. ನನ್ನ ಮತ್ತು ಅವರ ವಿಶ್ವಾಸ ಬಹಳ ಗಟ್ಟಿಯಾಗಿತ್ತು ಎಂದು ಹೇಳಿದರು.

ಉಗ್ರಾಣ ನಿಗಮದ ಅಧ್ಯಕ್ಷರಾದವರು ನಿಧನ: ರಾಜ್ಯ ಉಗ್ರಾಣ ನಿಗಮದ ಅಧ್ಯಕ್ಷರಾದವರು ಕಾಲವಾಗುತ್ತಿದ್ದಾರೆ ಎಂಬ ಶಾಸಕ ಎ.ಆರ್.ಕೃಷ್ಣಮೂರ್ತಿ ಅಚ್ಚರಿ ಹೇಳಿಕೆ ನೀಡಿದರು.

ಹಿಂದೆ ಉಗ್ರಾಣ ನಿಗಮದ ಅಧ್ಯಕ್ಷರಾಗಿದ್ದ ವೆಂಕಟಪ್ಪ ನಾಯಕ ಕಾಲವಾದರು, ಅದೇ ರೀತಿ ಈಗ ಎಸ್.ಜಯಣ್ಣ ನಿಧನರಾದರು. ಈ ರೀತಿಯ ನಿಧನ ಅದೇನೊ ಗೊತ್ತಿಲ್ಲ ಎಂದು ದುಃಖಿತರಾದರು.

ಹೊಂಡರಬಾಳು ಅಶ್ವಿನ್ ನಿಧನ



ಕೊಳ್ಳೇಗಾಲ, ಡಿ.12–ತಾಲೂಕು ವೀರಶೈವ ಯುವ ಘಟಕದ ನಿರ್ದೇಶಕ ಹಾಗೂ ಕೇಬಲ್ ಮಾಲೀಕರಾದ ಹೊಂಡರಬಾಳು ಗ್ರಾಮದ ಎಲ್.ಅಶ್ವಿನ್ (38) ಅನಾರೋಗ್ಯದಿಂದ ಗುರುವಾರ ನಿಧನರಾದರು.

ಮೃತರು ತಂದೆ ಲಿಂಗರಾಜಪ್ಪ, ತಾಯಿ ಲೋಕಮಾತ, ಪತ್ನಿ ಗಂಗಾ, ಪುತ್ರ ಮೋಹಿತ್, ಸಹೋದರಿ ಪಲ್ಲವಿ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಸ್ವಗ್ರಾಮ ಹೊಂಡರಬಾಳು ಮೃತರ ಜಮೀನಿನಲ್ಲಿ ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸುಬ್ಬಮ್ಮ



ಬೇಗೂರು, ಡಿ.12– ಸಮೀಪದ ಮಾದಾಪಟ್ಟಣ ಗ್ರಾಮದ ಸುಬ್ಬಮ್ಮ (90) ಬುಧವಾರ ರಾತ್ರಿ ನಿಧನರಾದರು.

ಮೃತರು ಪುತ್ರ ಮಾದಾಪಟ್ಟಣ ಡೈರಿ ಕಾರ್ಯದರ್ಶಿ ಮಲ್ಲೇಶ್, ಪುತ್ರಿ ಗೌರಮ್ಮ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಸ್ವಗ್ರಾಮ ಮಾದಾಪಟ್ಟಣದಲ್ಲಿ ಗುರುವಾರ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಬಿ.ಪಿ.ಸಿದ್ದಲಿಂಗಪ್ಪ



ಬೇಗೂರು: ಸಮೀಪದ ಬೆಳಚಲವಾಡಿ ಗ್ರಾಮದ ಬಿ.ಪಿ.ಸಿದ್ದಲಿಂಗಪ್ಪ (84) ಗುರುವಾರ ಮುಂಜಾನೆ ನಿಧನರಾದರು.

ಮೃತರು ಪತ್ನಿ, ಪುತ್ರ ಡೈರಿ ಕಾರ್ಯದರ್ಶಿ ಬಿ.ಎಸ್.ಮಹೇಶ್, ಪುತ್ರಿ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಬೆಳಚಲವಾಡಿ ಗ್ರಾಮದ ಮೃತರ ಜಮೀನಿನಲ್ಲಿ ಅಂತ್ಯಕ್ರಿಯೆ ನಡೆಯಿತು.

ಕೆಂಪಮ್ಮ



ಬೇಗೂರು, ಡಿ.12–ಸಮೀಪದ ಭೋಗಯ್ಯನಹುಂಡಿ ಗ್ರಾಮದ ಕೆಂಪಮ್ಮ (85) ಬುಧವಾರ ರಾತ್ರಿ ನಿಧನರಾದರು.

ಮೃತರು ಕೊಟೆಕೆರೆ ಗ್ರಾಮ ಪಂಚಾಯಿತಿ ಸದಸ್ಯ ಶಿವಾನಂದಸ್ವಾಮಿ ಸೇರಿದಂತೆ ನಾಲ್ವರು ಪುತ್ರರು, ಪುತ್ರಿ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಸ್ವಗ್ರಾಮ ಭೋಗಯ್ಯನಹುಂಡಿಯಲ್ಲಿ ಗುರುವಾರ ಮಧ್ಯಾಹ್ನ ಅಂತ್ಯಕ್ರಿಯೆ ನಡೆಯಿತು.

ಸಂತಾಪ: ಚಾಮುಲ್ ಮಾಜಿ ಅಧ್ಯಕ್ಷ ನಂಜುಂಡಪ್ರಸಾದ್, ಎಪಿಎಂಸಿ ಮಾಜಿ ಅಧ್ಯಕ್ಷ ಸೋಮಹಳ್ಳಿ ಶಿವನಾಗಪ್ಪ ಅಂತಿಮ ದರ್ಶನ ಪಡೆದು ಸಂತಾಪ ಸೂಚಿಸಿದರು.

ನಾಳೆ, ನಾಳಿದ್ದು ನಗರದಲ್ಲಿ ಆಹಾರ ಮೇಳ

ಚಾಮರಾಜನಗರ, ಡಿ.12–ರೋಟರಿ ಸಿಲ್ಕ್‌ಸಿಟಿ ಸಂಸ್ಥೆ ವತಿಯಿಂದ ಸರ್ಕಾರಿ ಶಾಲೆಗಳ ಅಭಿವೃದ್ಧಿಪಡಿಸಲು ನಗರದಲ್ಲಿ ಡಿ.14 ಮತ್ತು 15ರಂದು ಆಹಾರ ಮೇಳ ಮತ್ತು ವಸ್ತುಪ್ರದರ್ಶನ ಆಯೋಜಿಸಲಾಗಿದೆ ಎಂದು ರೋಟರಿ ಸಿಲ್ಕ್‌ಸಿಟಿ ಮಾಜಿ ಅಧ್ಯಕ್ಷ ದೊಡ್ಡರಾಯಪೇಟೆ ಗಿರೀಶ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ಬಿ.ರಾಚಯ್ಯ ಜೋಡಿ ರಸ್ತೆಯ ಶ್ರೀ ಸಿದ್ದಮಲ್ಲೇಶ್ವರ ವಿರಕ್ತ ಮಠದ ಆವರಣದ ಸಿದ್ದಬಸವರಾಜ ಸ್ವಾಮೀಜಿ ಅನುಭವ ಮಂಟಪದಲ್ಲಿ ಆಹಾರ ಮೇಳ ಹಾಗೂ ವಸ್ತುಪ್ರದರ್ಶನ ಆಯೋಜಿಸಲಾಗಿದೆ. ಡಿ.14 ಮತ್ತು 15ರಂದು ಬೆಳಗ್ಗೆ 10 ರಿಂದ ರಾತ್ರಿ 9 ಗಂಟೆವರೆಗೆ ವಸ್ತುಪ್ರದರ್ಶನ ಹಾಗೂ ಸಂಜೆ 4 ರಿಂದ ರಾತ್ರಿ 9 ಗಂಟೆವರೆಗೆ ಆಹಾರ ಮೇಳ ನಡೆಯಲಿದೆ. ಜೊತೆಗೆ ಎರಡು ದಿನ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ. ಇದರಿಂದ ಬರುವ ಆದಾಯವನ್ನು ತಾಲೂಕಿನ ಮೂಕನಪಾಳ್ಯ ಗ್ರಾಮದ ಸರ್ಕಾರಿ ಶಾಲೆ ಅಭಿವೃದ್ಧಿಗೆ ಬಳಸಿಕೊಳ್ಳಲಾಗುವುದು ಎಂದು ಹೇಳಿದರು.



ಸುದ್ದಿಗೋಷ್ಠಿಯಲ್ಲಿ ರೋಟರಿ ಸಿಲ್ಕ್‌ಸಿಟಿ ಮಾಜಿ ಅಧ್ಯಕ್ಷ ದೊಡ್ಡರಾಯಪೇಟೆ ಗಿರೀಶ್ ಮಾತನಾಡಿದರು.

ಡಿ.14ರಂದು ಸಂಜೆ 4 ಗಂಟೆಗೆ ಅಂತಾರಾಷ್ಟ್ರೀಯ ವೀಣೆವಾದನ ವಿದ್ವಾಂಸ ಮೈಸೂರಿನ ಎ.ಚಂದನ್‌ಕುಮಾರ್ ಅವರಿಂದ ವೀಣೆವಾದನ ಹಾಗೂ ಮಿಮಿಕ್ರಿ ಗೋಪಿ ಅವರಿಂದ ಹಾಸ್ಯ ಕಾರ್ಯಕ್ರಮ. 15ರಂದು ಎದೆತುಂಬಿ ಹಾಡುವೆನು ಖ್ಯಾತಿಯ ಪಿ.ಜೈನ್ ಅವರಿಂದ ಭಾವಗೀತೆ ಹಾಗೂ ಮ್ಯಾಜಿಕ್ ಶೋ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಮಾಜಿ ಅಧ್ಯಕ್ಷರಾದ ಡಿ.ಪಿ.ವಿಶ್ವಾಸ್, ಕಾರ್ಯದರ್ಶಿ ಸಮಿತ್ ಕುಮಾರ್ ಮಾತನಾಡಿ, ಮೂಕನಪಾಳ್ಯ ಸರ್ಕಾರಿ ಶಾಲೆ ಶಿಥಿಲಾವಸ್ಥೆ ತಲುಪಿದೆ. ಮಳೆ ಬಂದರೆ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ಶಾಲೆ ಅಭಿವೃದ್ಧಿಗೆ ತೀರ್ಮಾನಿಸಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ರೋಟರಿ ಸಿಲ್ಕ್‌ಸಿಟಿ ಅಧ್ಯಕ್ಷ ಪ್ರಭುರಾಮ್, ಮಾಣಿಕ್ ಚಂದ್, ಮುರುಘೇಂದ್ರಸ್ವಾಮಿ, ಶ್ರೀನಿಧಿ ಹಾಜರಿದ್ದರು.

ಇಂದು ಜಿಲ್ಲಾ ಮಟ್ಟದ ಯುವಜನೋತ್ಸವ

ಚಾಮರಾಜನಗರ, ಡಿ.12– ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ನೆಹರು ಯುವ ಕೇಂದ್ರ ಸಂಯುಕ್ತಾಶ್ರಯದಲ್ಲಿ ಡಿ.13ರಂದು ಬೆಳಗ್ಗೆ 10.30ಕ್ಕೆ ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಜಿಲ್ಲಾ ಮಟ್ಟದ ಯುವಜನೋತ್ಸವ ಕಾರ್ಯಕ್ರಮ ಆಯೋಜಿಸಲಾಗಿದೆ.

ಶಾಸಕ ಸಿ.ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಸದ ಸುನೀಲ್ ಬೋಸ್, ಕಾವೇರಿ ಜಲಾನಯನ ಯೋಜನೆಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಪಿ.ಮರಿಸ್ವಾಮಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಜಿಲ್ಲಾಧ್ಯಕ್ಷ ಹೆಚ್.ವಿ.ಚಂದ್ರು, ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್, ನಗರಸಭೆ ಅಧ್ಯಕ್ಷ ಎಸ್.ಸುರೇಶ್, ಸದಸ್ಯ ಮಹೇಶ್ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಇಂದು ಲೋಕಾಯುಕ್ತ ಅಧಿಕಾರಿಗಳಿಂದ ದೂರು ಸ್ವೀಕಾರ

ಗುಂಡ್ಲುಪೇಟೆ: ಜಿಲ್ಲಾ ಲೋಕಾಯುಕ್ತ ಅಧಿಕಾರಿಗಳು ಡಿ.13ರಂದು ಪಟ್ಟಣಕ್ಕೆ ಭೇಟಿ ನೀಡಿ ಸಾರ್ವಜನಿಕರಿಂದ ದೂರು ಅರ್ಜಿ ಸ್ವೀಕರಿಸಲಿದ್ದಾರೆ. ಪಟ್ಟಣದ ಪ್ರವಾಸಿಮಂದಿರ (ಐಬಿ)ದಲ್ಲಿ ಅಂದು ಬೆಳಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆವರೆಗೆ ಸಾರ್ವಜನಿಕರಿಂದ ದೂರು ಸ್ವೀಕರಿಸಲಿದ್ದಾರೆ. ಸರ್ಕಾರಿ ಕಚೇರಿಗಳಲ್ಲಿ ಕೆಲಸದಲ್ಲಿ ಅನಗತ್ಯ ವಿಳಂಬ, ಇನ್ನಿತರ ತೊಂದರೆ ನೀಡುತ್ತಿರುವ ಅಧಿಕಾರಿ, ನೌಕರರ ವಿರುದ್ಧ ದೂರು ನೀಡಬಹುದು.

17ನೇ ವಾರ್ಡ್ ನಿವಾಸಿಗಳಿಗೆ ಕಸ ಸಂಗ್ರಹ ಬುಟ್ಟಿ ವಿತರಣೆ...



ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ಚಾಮರಾಜನಗರ 17ನೇ ವಾರ್ಡ್ ನಿವಾಸಿಗಳಿಗೆ ಸದಸ್ಯ ಬಸವಣ್ಣ ಕಸ ಸಂಗ್ರಹ ಬುಟ್ಟಿಗಳನ್ನು ವಿತರಿಸಿದರು. ನಗರಸಭೆ ಎಇಇ ರೂಪಾ, ಮುಖಂಡರಾದ ನಾಗಶೆಟ್ಟಿ, ನಂಜುಂಡಸ್ವಾಮಿ, ಸೋಮೇಶ್, ಬಂಗಾರು ಇದ್ದರು.

ಎಸ್.ಎಂ.ಕೃಷ್ಣ, ಜಯಣ್ಣಗೆ ಶ್ರದ್ಧಾಂಜಲಿ...



ಚಾಮರಾಜನಗರದ ಚಾಮರಾಜೇಶ್ವರ ಉದ್ಯಾನ ಎದುರು ಮಾಜಿ ಸಿಎಂ ಎಸ್.ಎಂ.ಕೃಷ್ಣ ಹಾಗೂ ಮಾಜಿ ಶಾಸಕ ಎಸ್.ಜಯಣ್ಣ ಅವರಿಗೆ ಕರ್ನಾಟಕ ಸೇನಾಪಡೆ ವತಿಯಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಸೇನಾಪಡೆ ಅಧ್ಯಕ್ಷ ಶ್ರೀನಿವಾಸಗೌಡ, ನಗರಸಭಾ ಮಾಜಿ ಅಧ್ಯಕ್ಷ ಮಹದೇವ ನಾಯಕ, ಚಿನ್ನಮುತ್ತು, ರಾಮಸಮುದ್ರ ನಾಗಬಸವಣ್ಣ, ಪಣ್ಯದಹುಂಡಿ ರಾಜು, ಲಕ್ಷ್ಮೀನರಸಿಂಹ, ಲಿಂಗರಾಜು, ಮಹೇಶ್‌ಗೌಡ, ಮಹದೇವಸ್ವಾಮಿ, ಗೋವಿಂದ ಶೆಟ್ಟಿ, ಅಸ್ಲಾಂ ಪಾಷ, ರಾಚಪ್ಪ, ತಾಂಡವಮೂರ್ತಿ, ಕರಿಯನಕಟ್ಟೆ ಮಾದೇಶ್, ಮಹೇಶ್ ಇದ್ದರು.

ಸೋನು ನಿಗಮ್ ಧ್ವನಿಯಲ್ಲಿ 'ರಿಚ್ಚಿ' ಹಾಡು

ಹೊಸ ಜಾನರ್‌ನ ವಿಭಿನ್ನ ಪ್ರೇಮ ಕಥಾಹಂದರವನ್ನು ಹೊಂದಿರುವ ಚಿತ್ರ 'ರಿಚ್ಚಿ' ಸದ್ಯದಲ್ಲೇ ಬಿಡುಗಡೆಗೆ ಸಿದ್ಧವಾಗಿದೆ. ವಿಶೇಷ ಎಂದರೆ ಈ ಚಿತ್ರದ ನಾಯಕನ ಹೆಸರು ಕೂಡ ರಿಚ್ಚಿ. ಅವರೇ ನಾಯಕನಾಗಿ ನಟಿಸಿ, ನಿರ್ದೇಶಿಸಿರುವ ಈ ಚಿತ್ರದ ಸನಿಹ ನೀ ಇರುವಾಗ ಎಂಬ ಹಾಡಿಗೆ ಬಾಲಿವುಡ್ ಗಾಯಕ ಸೋನು ನಿಗಮ್ ಅವರು ದನಿಯಾಗಿದ್ದಾರೆ. ಅಗಸ್ತ್ಯ ಸಂಗೀತ ಸಂಯೋಜಿಸಿರುವ ಈ ಹಾಡು ಸದ್ಯದಲ್ಲೇ ಬಿಡುಗಡೆಯಾಗಲಿದೆ. ಮಾರುತಿ ಮೂವೀ ಮೇಕರ್ಸ್ ಲಾಂಛನದಲ್ಲಿ ಈ ಚಿತ್ರವನ್ನು ವೆಂಕಟಾಚಲಯ್ಯ ಹಾಗೂ ರಾಕೇಶ್ ರಾವ್ ಅವರು ನಿರ್ಮಾಣ ಮಾಡಿದ್ದಾರೆ. 'ರಿಚ್ಚಿ' ಚಿತ್ರವನ್ನು ಶೀಘ್ರದಲ್ಲೇ ಬಿಡುಗಡೆ ಮಾಡುವ ತಯಾರಿ ನಡೆಯುತ್ತಿದೆ. ಅಜಿತ್‌ಕುಮಾರ್ ಅವರ ಛಾಯಾಗ್ರಹಣ ರಿಚ್ಚಿ ಚಿತ್ರಕ್ಕಿದ್ದು, ಟಗರು ಖ್ಯಾತಿಯ ಮಾನ್ವಿತ ಕಾಮತ್ ವಿಶೇಷ ಪಾತ್ರದಲ್ಲಿ ನಟಿಸಿದ್ದಾರೆ.



ಟೀಸರ್‌ನಲ್ಲಿ ಹಾರರ್ 'ಭೂ ಮಂತರ್'!

ಶರಣ್, ಅದಿತಿ ಪ್ರಭುದೇವ ಅಭಿನಯದ ಹಾರರ್ ಚಿತ್ರ 'ಭೂಮಂತರ್' ಜನವರಿ 10ರಂದು ಬಿಡುಗಡೆಯಾಗಲಿದೆ. ಕರ್ವ ಖ್ಯಾತಿಯ ನವನೀತ್ ಕಥೆ ಚಿತ್ರಕಥೆ ಬರೆದು ನಿರ್ದೇಶನ ಮಾಡಿರುವ ಈ ಚಿತ್ರದ ಟೀಸರ್ ಇತ್ತೀಚೆಗೆ ಬಿಡುಗಡೆಯಾಯಿತು. ಮಾನಸ ತರುಣ್ ಅವರು ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ.

ಈ ಸಂದರ್ಭದಲ್ಲಿ ನಿರ್ದೇಶಕ ನವನೀತ್ ಮಾತನಾಡುತ್ತ, ಇದು ಡಾರ್ಕ್ ಹ್ಯೂಮರ್ ಜಾನರ್‌ನ ಹಾರರ್ ಚಿತ್ರ. ಉತ್ತರ ಕಾಂಡ, ಶ್ರೀಲಂಕಾ, ಮೈಸೂರು, ಬೆಂಗಳೂರು ಸುತ್ತಮುತ್ತ ಅರವತ್ತು ದಿನಗಳವರೆಗೆ ಚಿತ್ರೀಕರಣ ನಡೆಸಿದ್ದೇವೆ. ಬೆಂಗಳೂರಿನಲ್ಲಿ ಎರಡು ಕೋಟಿ ರೂಪಾಯಿ ವೆಚ್ಚದಲ್ಲಿ ಹಾಕಲಾಗಿದ್ದ ಅದ್ದೂರಿ ವೆಚ್ಚದ ಸೆಟ್‌ನಲ್ಲೇ ಹೆಚ್ಚಿನ ಭಾಗದ ಚಿತ್ರೀಕರಣ ನಡೆದಿದೆ. ಶರಣ್ ಅವರನ್ನು ಈ ಹಿಂದೆಂದೂ ಕಾಣದಂಥ ಪಾತ್ರದಲ್ಲಿ ನೋಡಬಹುದು. ಜತೆಗೆ ರವಿವರ್ಮ ಅವರ ಆಕ್ಷನ್, ಅನೂಪ್ ಅವರ ಛಾಯಾಗ್ರಹಣ ನಮ್ಮ ಚಿತ್ರದ ಹೈಲೈಟ್ ಎಂದು ಹೇಳಿದರು.



ನಾಯಕ ಶರಣ್ ಮಾತನಾಡುತ್ತ ಈ ಸಿನಿಮಾ ರಿಲೀಸ್ ಹಂತಕ್ಕೆ ಬರಲು ಬಹಳಷ್ಟು ಜನ ಕಾರಣರಾಗುತ್ತಾರೆ. ತರುಣ್ ಸುಧೀರ್ ಈ ಚಿತ್ರಕ್ಕೆ ಓಂಕಾರ ಹಾಕಿದರೆ, ದರ್ಶನ್ ಶೀರ್ಷಿಕೆ ನೀಡಿದರು. ಅಲ್ಲಿಂದ ಆರಂಭವಾದ ನಮ್ಮ ಚಿತ್ರದ ಜರ್ನಿ ಈಗ ರಿಲೀಸ್ ಹಂತಕ್ಕೆ ಬಂದಿದೆ, ತರುಣ್ ಹಾಗೂ ಮಾನಸ ತರುಣ್ ಅವರು ಅದ್ದೂರಿಯಾಗಿ ನಿರ್ಮಾಣ ಮಾಡಿದ್ದಾರೆ. ಕಳೆದ 3 ವರ್ಷಗಳಿಂದ ಸಂಕ್ರಾಂತಿಯಲ್ಲಿ ಕನ್ನಡದ ಯಾವುದೇ ಚಿತ್ರ ಬಿಡುಗಡೆಯಾಗಿದ್ದಿಲ್ಲ. ಆದರೆ ತರುಣ್ ಅವರು ಸಂಕ್ರಾಂತಿ ಸಮಯದಲ್ಲೇ ಚಿತ್ರವನ್ನು ರಿಲೀಸ್ ಮಾಡುತ್ತಿದ್ದಾರೆ. ಅದ್ಭುತ ಎನಿಸುವಂಥ ಹಾರರ್ ಕಥೆ ಚಿತ್ರದಲ್ಲಿದೆ. ಗೆದ್ದೇ ಗೆಲ್ಲುತ್ತೆ ಎಂಬ ನಂಬಿಕೆಯಿದೆ ಎಂದರು. ನಟ ಚಿಕ್ಕಣ್ಣ ಮಾತನಾಡಿ, ಕಳೆದ ಜನವರಿಯಲ್ಲಿ ನಾನು ಹಾಗೂ ಶರಣ್ ನಟಿಸಿದ್ದ ಉಪಾಧ್ಯಕ್ಷ ಚಿತ್ರ ಬಿಡುಗಡೆಯಾಗಿತ್ತು. ಈಗ ಬರುವ ಜನವರಿಯಲ್ಲಿ ನಮ್ಮಿಬ್ಬರ ಕಾಂಬಿನೇಶ್‌ನ ಮತ್ತೊಂದು ಚಿತ್ರ ಭೂಮಂತರ್ ಬಿಡುಗಡೆಯಾಗುತ್ತಿದೆ. ಆದರೆ ಈ ಚಿತ್ರ ನಮ್ಮಿಬ್ಬರ ಹಿಂದಿನ ಚಿತ್ರಗಳಿಗಿಂತ ವಿಭಿನ್ನ ಎಂದು ಹೇಳಿದರು. ಶರಣ್‌ರ ಜೊತೆ ನಟಿಸಬೇಕೆಂಬ ಆಸೆ ಈ ಚಿತ್ರದ ಮೂಲಕ ಈಡೇರಿದೆ ಎಂದು ನಟಿ ಮೇಘನಾ ಗಾಂವ್ಕರ್ ಹೇಳಿದರೆ, ಉತ್ತಮ ಚಿತ್ರತಂಡದೊಂದಿಗೆ ಕೆಲಸ ಮಾಡಿದ ಖುಷಿ ನನಗಿದೆ ಎಂದು ಅದಿತಿ ಪ್ರಭುದೇವ ಹೇಳಿದರು. ಉಳಿದಂತೆ ಪ್ರಭು ಮಂಡ್ಕೂರು, ರಘು ಭಟ್, ಧರ್ಮ, ರಜನಿ ತಂತಮ್ಮ ಪಾತ್ರದ ಬಗ್ಗೆ ಸಂಕ್ಷಿಪ್ತವಾಗಿ ಹೇಳಿದರು.

'ಅಪಾಯವಿದೆ ಎಚ್ಚರಿಕೆ' ಮೋಷನ್ ಪೋಸ್ಟರ್ ಬಿಡುಗಡೆ

ಈ ಹಿಂದೆ ಕದ್ದುಮುಚ್ಚಿ ಎಂಬ ಚಿತ್ರ ನಿರ್ಮಿಸಿದ್ದ ವಿಜಿ ಮಂಜುನಾಥ್ ಅವರೀಗ ಸಸ್ಪೆನ್ಸ್ ಥ್ರಿಲ್ಲರ್ ಚಿತ್ರ ನಿರ್ಮಿಸಿದ್ದಾರೆ. ಜತೆಗೆ ಆ ಚಿತ್ರದಲ್ಲಿ ಸಹಾಯಕ ನಿರ್ದೇಶಕನಾಗಿದ್ದ ಅಭಿಜಿತ್ ತೀರ್ಥಹಳ್ಳಿ ಅವರಿಗೆ ಇಲ್ಲಿ ನಿರ್ದೇಶನದ ಅವಕಾಶ ನೀಡಿದ್ದಾರೆ. ಆ ಚಿತ್ರದ ಹೆಸರು ಅಪಾಯವಿದೆ ಎಚ್ಚರಿಕೆ. ಇತ್ತೀಚೆಗೆ ಈ ಚಿತ್ರದ ಮೋಷನ್ ಪೋಸ್ಟರ್ ಬಿಡುಗಡೆ ಕಾರ್ಯಕ್ರಮ ನಡೆಯಿತು.

ಕನ್ನಡದಲ್ಲೀಗ ಕಂಟೆಂಟ್ ಚಿತ್ರಗಳನ್ನು ಜನ ಮೆಚ್ಚಿಕೊಳ್ಳುತ್ತಿದ್ದಾರೆ. ಅಂಥಾ ಮತ್ತೊಂದು ಚಿತ್ರವೇ "ಅಪಾಯವಿದೆ ಎಚ್ಚರಿಕೆ'. ತೀರ್ಥಹಳ್ಳಿ ಮೂಲದ ಅಭಿಜಿತ್ ತೀರ್ಥಹಳ್ಳಿ ಈ ಚಿತ್ರಕ್ಕೆ ಕಥೆ ಚಿತ್ರಕಥೆ ಬರೆದಿದ್ದಾರೆ. "ಅಣ್ಣಯ್ಯ" ಧಾರಾವಾಹಿಯ ನಟ ವಿಕಾಶ್ ಉತ್ತಯ್ಯ ಇದರಲ್ಲಿ ನಾಯಕನಾಗಿ ನಟಿಸಿದ್ದು, ರಾಧಾ ಭಗವತಿ ನಾಯಕಿ ಪಾತ್ರ ನಿರ್ವಹಿಸಿದ್ದಾರೆ. ವಿ.ಜಿ.ಮಂಜುನಾಥ್ ಹಾಗೂ ಪೂರ್ಣಿಮಾ ಎಂ.ಗೌಡ ಸೇರಿ ಚಿತ್ರವನ್ನು ನಿರ್ಮಿಸಿದ್ದಾರೆ.



ನಿರ್ದೇಶಕ ಅಭಿಜಿತ್ ತೀರ್ಥಹಳ್ಳಿ ಮಾತನಾಡಿ, ನನಗೂ ಚಿತ್ರರಂಗಕ್ಕೂ ಹತ್ತು ವರ್ಷಗಳ ನಂಟಿದೆ. ಕೆಲ ಚಿತ್ರಗಳಿಗೆ ಸಾಹಿತ್ಯ ಬರೆದು ಸಹ ನಿರ್ದೇಶಕನಾಗಿದ್ದ ಈ ಚಿತ್ರದ ಮೂಲಕ ಸ್ವತಂತ್ರ ನಿರ್ದೇಶಕನಾಗುತ್ತಿದ್ದೇನೆ. ಪಂಚಭೂತಗಳ ಆಧಾರದ ಮೇಲೆ ಈ ಚಿತ್ರದ ಕಥೆಯನ್ನು ಮಾಡಿದ್ದೇನೆ, ಚಿತ್ರದ ಮೂರು ಪ್ರಮುಖ ಪಾತ್ರಗಳು ಒಂದೊಂದು ತತ್ವವನ್ನು ಪ್ರತಿನಿಧಿಸುತ್ತದೆ. ವಿಕಾಶ್ ಉತ್ತಯ್ಯ ಸೂರಿ ಪಾತ್ರದಲ್ಲಿ, ರಾಘವ್ ಕೊಡಚಾದ್ರಿ ಹಾಗೂ ಮಿಥುನ್ ತೀರ್ಥಹಳ್ಳಿ ವಿಕಾಶ್ ಅವರ ಸ್ನೇಹಿತರಾಗಿ ಕಾಣಿಸಿಕೊಂಡಿದ್ದಾರೆ. ರಾಧಾ ಭಗವತಿ ರಾಧಾ ಎಂಬ ಬ್ರಾಹ್ಮಣ ಹುಡುಗಿಯ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಸಸ್ಪೆನ್ಸ್, ಅಡ್ವೆಂಚರಸ್ ಹಾರರ್ ಜಾನರ್ ಕಥೆ ಹೊಂದಿರುವ ಈ ಚಿತ್ರಕ್ಕೆ ಸುನಾದ್ ಗೌತಮ್ ಅವರು ಛಾಯಾಗ್ರಹಣ ಹಾಗೂ ಮೂರು ಹಾಡುಗಳಿಗೆ ಸಂಗೀತ ಸಂಯೋಜನೆ ಕೂಡ ಮಾಡಿದ್ದಾರೆ. ಚಿತ್ರವನ್ನು ಜನವರಿಯಲ್ಲಿ ತೆರೆಗೆ ತರುವುದಾಗಿ ಅವರು ಹೇಳಿದರು.

ನಾಯಕ ವಿಕಾಶ್ ಉತ್ತಯ್ಯ ಮಾತನಾಡುತ್ತ, ಸಿನಿಮಾ ಅನ್ನುವುದು ಕೃತಿ, ಹಾಗೆ ಕೃಷಿ. ಅದನ್ನು ರಚಿಸಿ, ರುಚಿಸಿ ನಿರ್ದೇಶಿಸುವುದು ನಿರ್ದೇಶಕ ಅಭಿಜಿತ್ ತೀರ್ಥಹಳ್ಳಿ ಅವರ ಬಹುದಿನಗಳ ಕನಸು. ಆ ಕನಸು ಈ ಚಿತ್ರದ ಮೂಲಕ ನನಸಾಗಿದೆ. ಅವರು ಈ ಚಿತ್ರಕ್ಕಾಗಿ ಪಟ್ಟಿರುವ ಶ್ರಮ ಅಷ್ಟಿಷ್ಟಲ್ಲ. ನಮ್ಮನ್ನೆಲ್ಲಾ ಅವರು ಆಡಿಷನ್ ಮಾಡಿದ ರೀತಿಯೇ ವಿಭಿನ್ನ, ನನ್ನ ಪಾತ್ರದ ಹೆಸರು ಸೂರಿ ಎಂದು ಹೇಳಿದರು. ನಿರ್ಮಾಪಕ ಮಂಜುನಾಥ್ ಮಾತನಾಡುತ್ತ "ಕದ್ದು ಮುಚ್ಚಿ" ಚಿತ್ರದ ನಂತರ ನನ್ನ ನಿರ್ಮಾಣದ ಈ ಚಿತ್ರಕ್ಕೆ ಸಹೋದರಿ ಪೂರ್ಣಿಮಾ ಕೂಡ ಸಾಥ್ ನೀಡಿದ್ದಾರೆ. ನಿರ್ದೇಶಕ ಅಭಿಜಿತ್ ಅವರ ಶ್ರಮ ಈ ಚಿತ್ರಕ್ಕೆ ಸಾಕ್ಷಿದೆ ಎಂದು ತಿಳಿಸಿದರು. ನಟರಾದ ರಾಘವ್ ಕೊಡಚಾದ್ರಿ, ಮಿಥುನ್ ತೀರ್ಥಹಳ್ಳಿ, ನಟಿ ರಾಧಾ ಭಗವತಿ, ಸಂಗೀತ ನಿರ್ದೇಶಕ ಹಾಗೂ ಛಾಯಾಗ್ರಾಹಕ ಸುನಾದ್ ಗೌತಮ್ ಹಾಗೂ ಸಂಕಲನಕಾರ ಹರ್ಷಿತ್ ಪ್ರಭು "ಅಪಾಯವಿದೆ ಎಚ್ಚರಿಕೆ" ಕುರಿತಂತೆ ಮಾಹಿತಿ ನೀಡಿದರು.

'ಕೋರ' ಕಾಡಲ್ಲಿ ಮೆಲೋಡಿ ಹಾಡು



ಕೋರ ಎಂಬ ಬುಡಕಟ್ಟು ಜನಾಂಗದ ಬಗ್ಗೆ, ಅವರ ನಡೆ ನುಡಿ, ಆಚರಣೆಗಳ ಬಗ್ಗೆ ಹೇಳುವ ಚಿತ್ರ 'ಕೋರ'. ಹೇಳುವ ರಿಯಾಲಿಟಿ ಶೋನಲ್ಲಿ ಗಮನ ಸೆಳೆದ ಕಲಾವಿದ ಸುನಾಮಿ ಕಿಟ್ಟಿ ಈ ಚಿತ್ರದಲ್ಲಿ ನಾಯಕನಾಗಿ ನಟಿಸಿದ್ದು, ಶ್ರೀ ಕಥೆ ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳಿದ್ದಾರೆ. ಇತ್ತೀಚೆಗೆ ಬಿಡುಗಡೆಯಾಗಿರುವ "ಒಪ್ಪಿಕೊಂಡಳು" ಎಂಬ ಮೆಲೋಡಿ ಹಾಡಿನ ಬಗ್ಗೆ ಹಾಗೂ ಚಿತ್ರದ ಬಿಡುಗಡೆಯ ವಿಷಯ ತಿಳಿಸಲು ಆಯೋಜಿಸಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಚಿತ್ರತಂಡದ ಸದಸ್ಯರು ಮಾತನಾಡಿದರು. ಒಂದು ಸಂಸ್ಕೃತಿಯ ಕುರಿತಂತೆ ಇರುವ ವಿಭಿನ್ನ ಕಥಾಹಂದರ ಒಳಗೊಂಡ ಈ ಚಿತ್ರ ಜನವರಿಯಲ್ಲಿ ಬಿಡುಗಡೆಯಾಗಲಿದೆ.

ಮೊದಲಿಗೆ ನಿರ್ಮಾಪಕ ಪಿ.ಮೂರ್ತಿ ಮಾತನಾಡುತ್ತ ರೇವಣ್ಣ ನಾಯಕ್ ಅವರು ರಚಿಸಿದ, ಹೇಮಂತ್‌ಕುಮಾರ್ ಸಂಗೀತ ಸಂಯೋಜನೆಯ "ಒಪ್ಪಿಕೊಂಡಳು" ಎಂಬ ಹಾಡು ಇತ್ತೀಚೆಗೆ ರಬಕವಿಯಲ್ಲಿ ಸಹಸ್ರಾರು ಜನರ ಸಮ್ಮುಖದಲ್ಲಿ ಬಿಡುಗಡೆಯಾಯಿತು. "ಕೋರ" ಬುಡಕಟ್ಟು ಜನಾಂಗದ ಹೆಸರಾಗಿದ್ದು, ಸುನಾಮಿ ಕಿಟ್ಟಿ ಹಾಗೂ ಉಳಿದ ಕಲಾವಿದರು, ನಿರ್ದೇಶಕ ಶ್ರೀ ಸೇರಿದಂತೆ ಎಲ್ಲ ತಂತ್ರಜ್ಞರು ಚಿತ್ರಕ್ಕಾಗಿ ಬಹಳ ಕಷ್ಟಪಟ್ಟಿದ್ದಾರೆ. ಏಕೆಂದರೆ ನಮ್ಮ ಚಿತ್ರದ ಬಹುತೇಕ ಚಿತ್ರೀಕರಣ ನಡೆದಿರುವುದು ಚಿಕ್ಕಮಗಳೂರು, ಹೊರನಾಡು, ಸಕಲೇಶಪುರದ ಸುತ್ತಮುತ್ತಲಿನ ದುರ್ಗಮ ಅರಣ್ಯ ಪ್ರದೇಶದಲ್ಲಿ. ಆ ಸ್ಥಳಗಳಲ್ಲಿ ಶೂಟಿಂಗ್ ಪರಿಕರಗಳನ್ನು ತೆಗೆದುಕೊಂಡು ಹೋಗುವುದು ತುಂಬಾ ಕಷ್ಟದ ಕೆಲಸ, ಅನುಕೂಲತೆ ಕಡಿಮೆ. ಅಂತಹ ಸ್ಥಳಗಳಲ್ಲೂ ಯಾವುದೇ ತೊಂದರೆ ಆಗದಂತೆ ಶೂಟಿಂಗ್ ಆಗಲು ಚಿತ್ರತಂಡದ ಸಹಕಾರವೇ ಕಾರಣ. ಈಗಾಗಲೇ ಚಿತ್ರದ ತೆಲುಗು, ತಮಿಳು ರಿಮೇಕ್ ರೈಟ್ಸ್ ಒಳ್ಳೇ ಬೆಲೆಗೆ ಮಾರಾಟವಾಗಿದೆ ಎಂದು ತಿಳಿಸಿದರು. ನಿರ್ದೇಶಕ ಒರಟ ಶ್ರೀ ಮಾತನಾಡುತ್ತ, ನಮ್ಮ ಚಿತ್ರದಲ್ಲಿ ನೋಡುಗರಿಗೆ ಬೇಕಾದ ಎಲ್ಲಾ ಅಂಶಗಳು ಇವೆ. ಪ್ರೇಕ್ಷಕರು ಕೊಟ್ಟ ಹಣಕ್ಕೆ ಮೋಸ ಮಾಡದ ಚಿತ್ರವಿದು. ಸುನಾಮಿ ಕಿಟ್ಟಿ ಈ ಚಿತ್ರದ ಮೂಲಕ ನಾಯಕನಾಗಿ ಚಿತ್ರರಂಗ ಪ್ರವೇಶಿಸುತ್ತಿದ್ದಾರೆ. ಚರಿಶ್ಮಾ "ಕೋರ" ಚಿತ್ರದ ನಾಯಕಿ. ನಿರ್ಮಾಪಕ ಪಿ. ಮೂರ್ತಿ ಅವರು ಖಳನಾಯಕನಾಗಿ ಅಭಿನಯಿಸಿದ್ದಾರೆ ಎಂದರು. ನಾಯಕ ಸುನಾಮಿ ಕಿಟ್ಟಿ ಮಾತನಾಡುತ್ತ, ನಾನು ನಾಯಕನಾಗಿ ನಟಿಸಿರುವ ಮೊದಲ ಚಿತ್ರವಿದು. ಚಿತ್ರದಲ್ಲಿ ಒಳ್ಳೆ ಕಂಟೆಂಟ್ ಇದೆ, ಇಡೀ ತಂಡದ ಪರಿಶ್ರಮದಿಂದ "ಕೋರ" ಒಂದೊಳ್ಳೆ ಚಿತ್ರವಾಗಿ ಪ್ರೇಕ್ಷಕರ ಮುಂದೆ ಬರುತ್ತಿದೆ ಎಂದು ತಿಳಿಸಿದರು.

ಸಹ ನಿರ್ಮಾಪಕ ಚೆಲುವರಾಜು, ನಾಯಕಿ ಚರಿಷ್ಮಾ, ಎಂ.ಕೆ.ಮಠ, ಯತಿರಾಜ್, ಗಣೇಶ್‌ರಾವ್, ಸೌಜನ್ಯ, ಸಂಗೀತ ನಿರ್ದೇಶಕ ಹೇಮಂತ್‌ಕುಮಾರ್, ಛಾಯಾಗ್ರಾಹಕ ಸೆಲ್ವಂ, ಸಾಹಿತಿ ರೇವಣ್ಣ ನಾಯಕ್, "ಕೋರ" ಚಿತ್ರದ ಕುರಿತಂತೆ ಮಾತನಾಡಿದರು. ನಟ ಒರಟ ಪ್ರಶಾಂತ್ ಚಿತ್ರತಂಡಕ್ಕೆ ಶುಭ ಹಾರೈಸಿದರು.

ಸಿನಿಪದಬಂಧ-555



ಉಮ್ಮತ್ತೂರು ಇಂದುಶೇಖರ್
ಮೊ.9880820462

1	2				3	■	4	■	■	■
■		■	■	■		■	5			
■		■	6	■		■		■	■	■
7				■	8	9			10	
	■	■		■	■		■	■		■
11		■		■	12			■		■
	■	■		■	■		■	13	■	■
	■	14		15	■		■		■	16
	■		■		■	17				
■	■		■		■		■	■	■	
18			■	■	■	■	19			

ಹೆಸರು ______
ವಿಳಾಸ ______
______
ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1.ಶ್ರೀನಾಥ್ ಚಳಿಗಾಲದಲ್ಲಿ ಕಂಡ ಸ್ವಪ್ನ		6
5.ಪ್ರೇಮೋತ್ಸವ ಚಿತ್ರದ ನಾಯಕಿ		4
7.ಅಂಬಿ ಶಿಕಾರಿ ಆಡಲು ಎ.ಟಿ.ರಘು ನಿರ್ದೇಶಕ		4
8.ತಾಯಿಯ ಮನೆಯ ಸಂಪತ್ತು		6
11.ಬದುಕು ಜಟಕಾ _ _		2
12.ಅಂಬಿ-ದೇವು ನಡೆಸಿದ ಯುದ್ಧ		3
14.ಅನಂತ್‌ನಾಗ್-ಖುಷ್ಬುವಿನ ಆಕಾಶ		3
17.ಶ್ರೀನಾಥ್-ಆರತಿ ಹರಿಸಿದ ಪರಿಶುದ್ಧ ನದಿ		5
18 ಸುವರ್ಣ ಸೇತುವೆ ಚಿತ್ರದ ನಾಯಕಿ		3
19.ಇಲ್ಲೇ ಮೇಲಿನಿಂದ ಕೆಳಕ್ಕೆ '16' ರಲ್ಲಿರುವವನ ಜೊತೆ ಬಂದವನು		4

ಮೇಲಿನಿಂದ ಕೆಳಕ್ಕೆ

2.ವಿನೋದ್‌ರಾಜ್ ಪಕ್ಷಿಯೊಂದರ ಶಿಕಾರಿ ಆಡಿದ್ದಾನೆ	4
3.ವಿಷ್ಣುವರ್ಧನ್ ಹಾಡಿದ ಬೆಳಗಿನ ಗೀತೆ	4
4.ವಿಷ್ಣು ಬೀರಿದ ನೇರದೃಷ್ಟಿಗೆ ಭಾರ್ಗವ ನಿರ್ದೇಶಕ	4
6.ಮಾಜಿ ಮುಖ್ಯಮಂತ್ರಿಯೊಬ್ಬರು ಬಾರಿಸಿದ ಸಾವಿನ ತಮಟೆ	6
7."ನೀರಿನಲ್ಲಿ ಅಲೆಯ ಉಂಗುರ.... ", ಗೀತೆಯ ಚಿತ್ರ 6	
9.ಬಂಡಾರು ಗಿರಿಬಾಬು ಬೆಲೆಬಾಳುವ ಮಣಿಯ ಧಾರೆ ಹರಿಸಿದ್ದಾನೆ	7
10.ರವಿ-ಚಿರು ಅಭಿನಯದ ಚಿತ್ರ	3
13.ಪ್ರಭಾಕರ್ ಚಿತ್ರ ನಡುಕ ಹುಟ್ಟಿಸಿದೆ	3
14.ಗರ್ವಭಂಗಕ್ಕೆ ಒಳಗಾದವನು	4
15.ಬೆಳ್ಳಿನಾಗ ಚಿತ್ರದ ನಾಯಕಿ	3
16.ಇಲ್ಲೇ ಎಡದಿಂದ ಬಲಕ್ಕೆ '19' ರಲ್ಲಿರುವವನ ಜೊತೆ ಬಂದವನು	4

ಸಿನಿ ಪದಬಂಧ 554ರ ಉತ್ತರ

ರ	ಘು	ವೀ	ರ್	■	■	■	ಪ	■	■	■
ಹ	■	ಣಾ	■	ಕ	ರಿ	ಚಿ	ರ	ತೆ	■	ಬಂ
ಸ್ಯ	■	■	■	ನ್ನ	■	■	ಮಾ	■	■	ಧ
ರಾ	ಧ	ನ	ಗಂ	ಡ	■	ಆ	ತ್ಮ	ಬಂ	ಧ	ನ
ತ್ರಿ	■	ಗ್ಮ	■	ರಾ	■	■	■	■	ಣಿ	■
■	■	■	ಮಂ	ಜು	ಳಾ	ಶ	ರ್ಮಾ	■	■	■
■	ಬೇ	■	■	■	■	ರ	■	ಭೀ	■	ಪ
ಸೇ	ಡಿ	ನ	ಹ	ಕ್ಕಿ	■	ಪಂ	ಚ	ಮ	ವೇ	ದ
ವಂ	■	■	ನಿ	■	■	ಜ	■	■	■	ವಿ
ತಿ	■	ಸಾ	ಹ	ಸ	ವೀ	ರ	■	ಪ್ರೇ	■	ಪೂ
■	■	■	ನಿ	■	■	■	ಪ್ರೇ	ಮ	ಪ	ರ್ವ

ವಿಜೇತರು: ಎಸ್.ಎನ್.ಸುರೇಶ್‌ಬಾಬು, ವಕೀಲರು, 5ನೇ ಮೇನ್ ಆಲನಹಳ್ಳಿ ಲೇಔಟ್, ಮೈಸೂರು.

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಮೈಸೂರು ಮಿತ್ರ

ರಾಜ್ಯ ಕಂಡ ಅಪರೂಪದ ರಾಜಕಾರಣಿ ಎಸ್‌ಎಂಕೆ



ಪಿರಿಯಾಪಟ್ಟಣದಲ್ಲಿ ಎಸ್.ಎಂ.ಕೃಷ್ಣ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಪಿರಿಯಾಪಟ್ಟಣ, ಡಿ.12– ರಾಜ್ಯ ಕಂಡ ಅಪರೂಪದ ರಾಜಕಾರಣಿ ಮಾಜಿ ಸಿಎಂ ದಿ.ಎಸ್.ಎಂ.ಕೃಷ್ಣ ಎಂದು ತಾಲೂಕು ಒಕ್ಕಲಿಗರ ಸಂಘದ ಗೌರವಾಧ್ಯಕ್ಷ ಪಿ.ಪ್ರಶಾಂತ್‌ಗೌಡ ಬಣ್ಣಿಸಿದರು.

ಪಟ್ಟಣದ ತಾಲೂಕು ಒಕ್ಕಲಿಗರ ಸಂಘದ ಕಚೇರಿಯಲ್ಲಿ ನಡೆದ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಮಾಜಿ ಸಿಎಂ ಎಸ್.ಎಂ.ಕೃಷ್ಣ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಮಾತನಾಡಿದ ಅವರು, ರಾಜ್ಯದ ರಾಜಧಾನಿ ಬೆಂಗಳೂರಿಗೆ ಐಟಿ ತವರು ಎಂಬ ಹೆಸರು ಬರಲು ಕಾರಣರಾದ ಮಾಜಿ ಸಿಎಂ ಎಸ್.ಎಂ.ಕೃಷ್ಣ ಅವರು ನಮ್ಮನ್ನೆಲ್ಲಾ ಬಿಟ್ಟು ಅಗಲಿದ್ದಾರೆ. ಕರ್ನಾಟಕದ ಕೀರ್ತಿ ಪತಾಕೆಯನ್ನು ಜಗತ್ತಿನ ಮೂಲೆ ಮೂಲೆಗೂ ಹರಡಿದ ಕೀರ್ತಿ ಅವರಿಗೆ ಸಲ್ಲಬೇಕು. ಮಹಿಳೆಯರ ಸಬಲೀಕರಣ ಮತ್ತು ಆರ್ಥಿಕ ಸ್ವಾವಲಂಬನೆಗಾಗಿ ಆರಂಭಿಸಿದ ಸ್ತ್ರೀಶಕ್ತಿ ಸ್ವಸಹಾಯ ಸಂಘ ಮನೆ ಮನೆ ತಲುಪಿದ್ದು, ಪ್ರಸ್ತುತ ಕೋಟ್ಯಾಂತರ ಮಹಿಳೆಯರು ಸ್ವಾವಲಂಬಿ ಜೀವನ ನಡೆಸುತ್ತಿದ್ದಾರೆ. ಅಲ್ಲದೇ ಎಲ್ಲರಿಗೂ ಕೈಗೆಟುಕುವ ಆರೋಗ್ಯ ಸೇವೆ ನೀಡಲು ಯಶಸ್ವಿನಿ ಯೋಜನೆ ಆರಂಭಿಸಿದರು. ಸರ್ಕಾರಿ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ಯೋಜನೆ ಜಾರಿಗೆ ತಂದರು. ಹಲವು ಅಭಿವೃದ್ಧಿ ಕಾರ್ಯಗಳನ್ನು ಜಾರಿಗೊಳಿಸಿದ ಅವರು ಕರ್ನಾಟಕ ಇಂದು ಜಾಗತಿಕ ಮಟ್ಟದಲ್ಲಿ ಗುರ್ತಿಸಿಕೊಳ್ಳಲು ಎಸ್.ಎಂ.ಕೃಷ್ಣ ಸಾಕಷ್ಟು ಕೊಡುಗೆ ನೀಡಿದ್ದಾರೆ ಎಂದರು. ಈ ವೇಳೆ ಎಂಡಿಸಿಸಿ ಬ್ಯಾಂಕ್ ಮಾಜಿ ನಿರ್ದೇಶಕ ರವಿ, ಪುರಸಭಾ ಸದಸ್ಯ ಕೃಷ್ಣ, ಮುಖಂಡರಾದ ಆನಂದ್, ಸಂದೀಪ್, ಮೋಹನ್, ಮನು, ರವಿ, ಮಂಜುನಾಥ್, ಮಹದೇವ್, ಮಂಜು, ಹರ್ಷ, ರಘು, ಸುನೀಲ್, ಶಶಿ, ಶಿವರಾಜ್ ಸೇರಿದಂತೆ ಇತರರಿದ್ದರು.

ಹನುಮ ಜಯಂತಿಯನ್ನು ಶಾಂತಿಯುತವಾಗಿ ಆಚರಿಸಿ

ಪೂರ್ವಭಾವಿ ಸಭೆಯಲ್ಲಿ ಎಸ್ಪಿ ವಿಷ್ಣುವರ್ಧನ್ ಮನವಿ



ಪೂರ್ವಭಾವಿ ಸಭೆಯಲ್ಲಿ ಎಸ್ಪಿ ವಿಷ್ಣುವರ್ಧನ್ ಮಾತನಾಡಿದರು.

ಹುಣಸೂರು, ಡಿ.12– ನಗರದಲ್ಲಿ ಡಿ.15ರಂದು ನಡೆಯುವ ಹನುಮ ಜಯಂತಿಯನ್ನು ಶಾಂತಿಯುತವಾಗಿ ಆಚರಿಸುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್ ಮನವಿ ಮಾಡಿದರು.

ಹನುಮ ಜಯಂತಿ ಆಚರಣೆ ಸಂಬಂಧ ನಗರದ ಪೊಲೀಸ್ ಠಾಣೆಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಮಾಜಿ ಸಿಎಂ ಡಿ.ದೇವರಾಜ ಅರಸು ಕರ್ಮಭೂಮಿ ಹಾಗೂ ಶಾಂತಿ, ಸೌಹಾರ್ದತೆಗೆ ಹೆಸರಾಗಿರುವ ಹುಣಸೂರಿನಲ್ಲಿ ಹನುಮ ಜಯಂತಿ ವಿಜೃಂಭಣೆಯಿಂದ ನಡೆಯುತ್ತಿರುವುದು ಸಂತಸದ ವಿಷಯ. ಹೀಗಾಗಿ ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶ ನೀಡದಂತೆ ಎಲ್ಲಾ ಸಮುದಾಯದವರು ಒಗ್ಗೂಡಿ ಜಯಂತಿ ಆಚರಿಸಿ ನಾವು ನಿಮ್ಮೊಂದಿಗೆ ಇರುತ್ತೇವೆ ಎಂದರು.

ಇಂತಹ ಆಚರಣೆಗಳು, ಉತ್ಸವಗಳು, ಹಬ್ಬ ಹರಿದಿನಗಳನ್ನು ತಮ್ಮ ಸ್ವಾರ್ಥಕ್ಕೆ ಉಪಯೋಗಿಸಿಕೊಂಡು ಕೆಲ ಕಿಡಿಗೇಡಿಗಳು ಸಾಮಾಜಿಕ ಜಾಲತಾಣದಲ್ಲಿ ವಿಡಿಯೋ ಮತ್ತು ಪೋಸ್ಟರ್‌ಗಳನ್ನು ಹಾಕುವ ಮೂಲಕ ಜನರ ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಾರೆ. ಅವುಗಳಿಗೆ ಯುವ ಜನರು ಯಾವುದೇ ಮನ್ನಣೆ ನೀಡಬಾರದು. ಅಂತಹವುಗಳು ಕಂಡು ಬಂದರೆ ನಮಗೆ ತಿಳಿಸಿ ನಾವು ಸೂಕ್ತ ಕ್ರಮ ಕೈಗೊಳ್ಳುತ್ತೇವೆ ಎಂದರು.

ನಿಗದಿತ ಸಮಯಕ್ಕೆ ಹನುಮ ಜಯಂತಿ ಮೆರವಣಿಗೆ ಪ್ರಾರಂಭಿಸಿ ಅಂತ್ಯಗೊಳಿಸಿ. ಈ ವೇಳೆ ಯಾವುದೇ ಡಿಜೆ, ಧ್ವನಿವರ್ಧಕಗಳ ಬಳಕೆಗೆ ಅವಕಾಶವಿಲ್ಲ ಎಂದರು.

ಡಿವೈಎಸ್ಪಿ ಗೋಪಾಲಕೃಷ್ಣ ಮಾತನಾಡಿ, ಮೆರವಣಿಗೆ ಮತ್ತಿತರ ಕಾರ್ಯಗಳಿಗೆ ಬಳಸುವ ವಾಹನಗಳ ದಾಖಲಾತಿ ಸರಿಯಾಗಿರಬೇಕು. ಮೆರವಣಿಗೆ ನಡೆಯುವ ರಸ್ತೆಗಳಲ್ಲಿ ಪೊಲೀಸ್ ಹಾಗೂ ನಗರಸಭೆ ವತಿಯಿಂದ ಸಿಸಿ ಕ್ಯಾಮರಾಗಳನ್ನು ಅಳವಡಿಸಲಾಗಿದೆ. ಪೊಲೀಸ್ ಮಾರ್ಗಸೂಚಿಯನ್ನು ಕಡ್ಡಾಯವಾಗಿ ಪಾಲಿಸಬೇಕು. ಮೆರವಣಿಗೆ, ಬ್ಯಾನರ್, ಬಂಟಿಂಗ್ಸ್, ಫ್ಲೆಕ್ಸ್‌ಗಳಲ್ಲಿ ಹನುಮಂತ ದೇವರ ಹೊರತುಪಡಿಸಿ ಬೇರೆ ಯಾವುದೇ ಫೋಟೋ ಇರದಂತೆ ಸಮಿತಿ ಎಚ್ಚರ ವಹಿಸಬೇಕು. ಬಾವುಟ, ಫ್ಲೆಕ್ಸ್ ಅಳವಡಿಕೆಗೆ ಅನುಮತಿ ಪಡೆಯಬೇಕು. ಪ್ರಸಾದವನ್ನು ಕಡ್ಡಾಯವಾಗಿ ಪರೀಕ್ಷೆಗೊಳಪಡಿಸಬೇಕು ಎಂದರು.

ಸಮಿತಿಯವರು, ಹನುಮ ಭಕ್ತರು ಹಾಗೂ ಸಾರ್ವಜನಿಕರು ಸರ್ಕಾರದ ಮಾರ್ಗಸೂಚಿ ಕಡ್ಡಾಯವಾಗಿ ಪಾಲಿಸಬೇಕು. ಜಯಂತಿ ವೇಳೆ ಎಲ್ಲಾ ಸಮು ದಾಯದವರನ್ನು ವಿಶ್ವಾಸಕ್ಕೆ ಪಡೆದುಕೊಳ್ಳಿ. ಯಾವುದೇ ಅಹಿತಕರ ಘಟನೆಗಳಿಗೆ ಆಸ್ಪದ ನೀಡದಂತೆ ಎಚ್ಚರವಹಿಸಿ ಎಂದು ಸಲಹೆ ನೀಡಿದರು. ಹನುಮ ಜಯಂತಿ ಮೆರವಣಿಗೆಗೆ ಇಬ್ಬರು ಎಎಸ್‌ಪಿಗಳ ನೇತೃತ್ವದಲ್ಲಿ 6 ಡಿವೈಎಸ್ಪಿಗಳು, 12 ಸಿಪಿಐ, 40 ಎಸ್‌ಐಗಳು, 49 ಎಎಸ್‌ಐಗಳು, 900 ಸಿಬ್ಬಂದಿ, 10 ಕೆಎಸ್‌ಆರ್‌ಪಿ ತುಕಡಿ, 14 ಡಿಆರ್, ಮೊಬೈಲ್ ಕಮಾಂಡೋ ತಂಡಗಳನ್ನು ಬಂದೋಬಸ್ತ್‌ಗಾಗಿ ನಿಯೋಜಿಸಲಾಗಿದೆ ಎಂದರು.

ನಗರ ಠಾಣೆಯ ಸಂತೋಷ್ ಕಶ್ಯಪ್, ನಗರಸಭಾಧ್ಯಕ್ಷ ಶರವಣ, ಮಾಜಿ ಅಧ್ಯಕ್ಷ ಹೆಚ್.ವೈ.ಮಹದೇವ್, ಹನುಮ ಜಯಂತಿ ಆಚರಣಾ ಸಮಿತಿ ಅಧ್ಯಕ್ಷ ವಿ.ಎನ್.ದಾಸ್, ನಾಯಕ ಸಮುದಾಯದ ಯುವ ಮುಖಂಡ ಮಯೂರ, ಆಚರಣಾ ಸಮಿತಿಯ ಕಾರ್ಯದರ್ಶಿ ಸುನೀಲ್ ಮಾತನಾಡಿದರು.

ಸಭೆಯಲ್ಲಿ ತಹಸೀಲ್ದಾರ್ ಯಧುಗಿರೀಶ್, ಪೌರಾಯುಕ್ತೆ ಮಾನಸ, ಉಪಾಧ್ಯಕ್ಷೆ ಆಶಾರಾಣಿ, ಮ್ಯಾನೇಜರ್ ಸಿದ್ದರಾಜು, ಎಸ್‌ಐ ಜಮೀರ್ ಅಹಮದ್, ನಗರಸಭಾ ಸದಸ್ಯರಾದ ವಿವೇಕಾನಂದ, ಮಲ್ಲಿಕ್ ಪಾಷಾ, ಇನಾಯತ್, ಸಮಿತಿಯ ಅನಿಲ್ ಕುಮಾರ್, ಮುಖಂಡರಾದ ಕೃಷ್ಣರಾಜ್ ಗುಪ್ತ, ಗೋವಿಂದೇಗೌಡ, ಅಫ್ರೋಜ್, ಫಜಲ್, ಬಷೀರ್ ಅಹಮದ್, ಅಯೂಬ್ ಖಾನ್, ಇಮ್ರಾನ್, ಖಾಲೀದ್, ಹೆಚ್.ಎನ್.ಚಂದ್ರಶೇಖರ್, ರಮೇಶ್, ಶ್ರೀನಾಥ್, ಹರೀಶ್ ಕುಮಾರ್, ದೇವರಾಜ್.ಸಿ, ವಿವೇಕ, ರಮೇಶ್, ಯೂನೂಸ್, ಸಿರಾಜ್, ರಿಜ್ವಾನ್, ಸಯ್ಯದ್ ಅಕ್ಬರ್, ರಾಮಣ್ಣ ಸೇರಿದಂತೆ ಇನ್ನಿತರರಿದ್ದರು.

ಡಿ.15ಕ್ಕೆ ಕೃಷಿಕ ಸಮಾಜದ ಕಾರ್ಯಕಾರಿ ಸಮಿತಿ ಚುನಾವಣೆ

ಶಿವಮಲ್ಲಪ್ಪ ತಂಡದಿಂದ ವಿವಿಧ ಗ್ರಾಮಗಳಲ್ಲಿ ಮತಯಾಚನೆ

ಮತ್ತೊಂದು ಅವಕಾಶ ನೀಡಿ ಮತ್ತಷ್ಟು ಸೇವೆಗೆ ಸಹಕರಿಸಿ: ಬೆನಕನಹಳ್ಳಿ ಎಂ.ಶಿವಮಲ್ಲಪ್ಪ ಮನವಿ



ಬಿ.ಎಂ.ಶಿವಮಲ್ಲಪ್ಪ ತಂಡದ ಸದಸ್ಯರು ವಿವಿಧ ಗ್ರಾಮಗಳಿಗೆ ತೆರಳಿ ಮತಯಾಚಿಸಿದರು.

ತಿ.ನರಸೀಪುರ, ಡಿ.12– ತಾಲೂಕು ಕೃಷಿಕ ಸಮಾಜದಲ್ಲಿ ಕಳೆದ 15 ವರ್ಷಗಳಿಂದ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿರುವ ನಮ್ಮ ತಂಡಕ್ಕೆ ಮತ್ತೊಂದು ಅವಕಾಶ ನೀಡುವ ಮೂಲಕ ಮತ್ತಷ್ಟು ಸೇವೆಗೆ ಸಹಕಾರ ನೀಡುವಂತೆ ಕೃಷಿಕ ಸಮಾಜದ ಅಧ್ಯಕ್ಷ ಬೆನಕನಹಳ್ಳಿ ಎಂ.ಶಿವಮಲ್ಲಪ್ಪ ಮನವಿ ಮಾಡಿದರು.

ತಾಲೂಕು ಕೃಷಿಕ ಸಮಾಜದ ಕಾರ್ಯಕಾರಿ ಸಮಿತಿಗೆ ಭಾನುವಾರ(ಡಿ.15) ಚುನಾವಣೆ ನಡೆಯುವ ಹಿನ್ನೆಲೆಯಲ್ಲಿ ತಮ್ಮ ತಂಡದಿಂದ ಸ್ಪರ್ಧಿಸಿರುವ ಸದಸ್ಯ ರೊಂದಿಗೆ ಮಾಡ್ರಹಳ್ಳಿ, ಸೀಹಳ್ಳಿ, ಕುರುಬೂರು, ಕೊತ್ತೇಗಾಲ, ಕರೋಹಟ್ಟಿ ಸೇರಿದಂತೆ ವಿವಿಧ ಗ್ರಾಮಗಳಿಗೆ ತೆರಳಿ ಮತದಾರರನ್ನು ಭೇಟಿ ಮಾಡಿ ಮತಯಾಚಿಸಿ ಅವರು ಮಾತನಾಡಿದರು.

ತಾಲೂಕು ಕೃಷಿಕ ಸಮಾಜದ ಕಾರ್ಯಕಾರಿ ಸಮಿತಿ ಸದಸ್ಯರ ಸ್ಥಾನಕ್ಕೆ ಚುನಾವಣೆ ನಡೆದು 15 ವರ್ಷಗಳಾಗಿವೆ. ಕೆಲವೊಂದು ಗೊಂದಲದಿಂದ ಹೈಕೋರ್ಟ್‌ನಲ್ಲಿ ಚುನಾವಣೆ ಸಂಬಂಧ ಪ್ರಕರಣ ಇದ್ದ ಹಿನ್ನೆಲೆಯಲ್ಲಿ ಚುನಾವಣೆ ನಡೆದಿರಲಿಲ್ಲ. ಹಾಗಾಗಿ ಕಳೆದ 15 ವರ್ಷಗಳಿಂದ 3 ಅವಧಿಗೆ ಅಧ್ಯಕ್ಷನಾಗಿ ಕರ್ತವ್ಯಕ್ಕೆ ಯಾವುದೇ ಚ್ಯುತಿ ಬಾರದಂತೆ ಪರಿಶುದ್ಧವಾಗಿ ಕಾರ್ಯ ನಿರ್ವಹಿಸಿದ್ದೇನೆ. ಕೃಷಿಕ ಸಮಾಜದಲ್ಲಿ ನಮ್ಮ ತಂಡದ ಸದಸ್ಯರ ಸಹಕಾರದೊಂದಿಗೆ ಹಲವು ಬದಲಾವಣೆಗಳನ್ನು ತಂದಿದ್ದೇನೆ. ಈಗ ಮತ್ತೆ ಚುನಾವಣೆ ಬಂದಿದೆ. ಮತ್ತದೇ 15 ಜನರ ತಂಡದೊಂದಿಗೆ ಚುನಾವಣೆಗೆ ಸ್ಪರ್ಧಿಸಿದ್ದೇನೆ. ಕೃಷಿಕ ಸಮಾಜದ ಮತದಾರರು ಮತ್ತೊಂದು ಅವಧಿಗೆ ನಮ್ಮ ತಂಡವನ್ನು ಗೆಲ್ಲಿಸುವ ಮೂಲಕ ಕೃಷಿಕ ಸಮಾಜದಲ್ಲಿ ಅಭಿವೃದ್ಧಿಗೆ ಪೂರಕವಾದ ಮತ್ತಷ್ಟು ಬದಲಾವಣೆ ತರಲು ಸಹಕರಿಸುವಂತೆ ಮನವಿ ಮಾಡಿದರು.

ಮಾಡ್ರಹಳ್ಳಿ ಗ್ರಾಮದ ಪ್ರಗತಿಪರ ರೈತ ಶಂಕರ್ ಗುರು ಮಾತನಾಡಿ, ಕೃಷಿಕ ಸಮಾಜ ತಾಲೂಕು ಮಟ್ಟದಲ್ಲಿ ಪ್ರಗತಿ ಸಾಧಿಸಲಿ. ರಾಜ್ಯ ಮಟ್ಟದಲ್ಲಿ ಸಹ ಕೃಷಿಕ ಸಮಾಜವನ್ನು ಗೌರವಾನ್ವಿತ ಸ್ಥಾನಕ್ಕೆ ತರುತ್ತಾರೆಂಬ ಭಾವನೆಯೊಂದಿಗೆ ಶಿವಮಲ್ಲಪ್ಪ ತಂಡ ಬೆಂಬಲಿಸುವುದಾಗಿ ತಿಳಿಸಿದರು. ಪ್ರಚಾರದ ವೇಳೆ ಅಭ್ಯರ್ಥಿಗಳೊಂದಿಗೆ ಕುರುಬೂರು ಶಿವು, ಉಪನ್ಯಾಸಕ ಮೂಗೂರು ಕುಮಾರಸ್ವಾಮಿ ಇದ್ದರು.

ಶಿವಮಲ್ಲಪ್ಪ ತಂಡದ ಸದಸ್ಯರು...!

ಡಿ.15ರಂದು ತಾಲೂಕು ಕೃಷಿಕ ಸಮಾಜದ ಕಾರ್ಯಕಾರಿ ಸಮಿತಿ ಚುನಾವಣೆ ಸಹಾಯಕ ಕೃಷಿ ನಿರ್ದೇಶಕರ ಕಚೇರಿಯಲ್ಲಿ ಬೆಳಗ್ಗೆ 8 ರಿಂದ ಮಧ್ಯಾಹ್ನ 3 ರವರೆಗೆ ನಡೆಯಲಿದೆ. ಒಬ್ಬ ಮತದಾರ 15 ಮತಗಳನ್ನು ಚಲಾಯಿಸಬಹುದಾಗಿದೆ.

ತಾಲೂಕಿನ 309 ಕೃಷಿಕ ಸಮಾಜದ ಸದಸ್ಯರು ಮತ ಚಲಾಯಿಸಲು ಅರ್ಹರಾಗಿದ್ದು, ಶಿವಮಲ್ಲಪ್ಪ ತಂಡದಿಂದ ಶಿವಮಲ್ಲಪ್ಪ ಸೇರಿದಂತೆ ತುಂಬಲ ಬಿ.ಕುಮಾರ, ಕೊಡಗಹಳ್ಳಿ ಚಿಕ್ಕಮಲ್ಲಪ್ಪ, ಕೆಂಪೇಗೌಡನಕೊಪ್ಪಲು ಕೆ.ಚನ್ನಯ್ಯ, ಆಲಗೂಡು ನಾಗರಾಜು, ಹೊಸೂರುಹುಂಡಿ ಪಿ.ನಾಗರಾಜು, ಆದಿಬೆಟ್ಟಹಳ್ಳಿ ನಂಜುಂಡಸ್ವಾಮಿ, ಬನ್ನೂರು ಬಿ.ಆರ್.ಪುರುಷೋತ್ತಮ, ಗೊರವನಹಳ್ಳಿ ರಾಜಗೋಪಾಲ್, ದೊಡ್ಡ ಮುಲಗೂಡು ವೈ.ಎಸ್.ರಾಮಸ್ವಾಮಿ, ಹಿರಿಯೂರು ಪಿ.ವಿರೂಪಾಕ್ಷ, ಕುರುಬೂರು ಕೆ.ಜಿ.ವೀರಣ್ಣ, ತಿ.ನರಸೀಪುರ ಟೌನ್ ಪಿ.ಶಶಿಧರ, ಮೂಗೂರು ಶಿವಸ್ವಾಮಿ, ಹ್ಯಾಕನೂರು ಎಂ.ಸ್ವಾಮಿ ಚುನಾವಣೆ ಕಣದಲ್ಲಿದ್ದಾರೆ.

ಪಕ್ಷವನ್ನು ತಳಮಟ್ಟದಿಂದ ಸಂಘಟಿಸಿ

ಬಿಜೆಪಿ ವರುಣ ಕ್ಷೇತ್ರದ ಸಂಚಾಲಕ ನಗರ್ಲೆ ಮಹದೇವಸ್ವಾಮಿ ಮನವಿ



ಪದಾಧಿಕಾರಿಗಳ ನೇಮಕಾತಿ ಪ್ರಕ್ರಿಯೆಗೆ ಚಾಲನೆ ನೀಡಲಾಯಿತು.

ನಂಜನಗೂಡು, ಡಿ.12– ವರುಣ ಕ್ಷೇತ್ರದಲ್ಲಿ ಬಿಜೆಪಿ ಪಕ್ಷವನ್ನು ತಳಮಟ್ಟದಿಂದ ಸಂಘಟಿಸಿ ಮುಂಬರುವ ತಾಪಂ ಮತ್ತು ಜಿಪಂ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಗೆಲ್ಲಿಸಬೇಕು ಎಂದು ಕಾರ್ಯಕರ್ತರಿಗೆ ಬಿಜೆಪಿ ವರುಣ ಕ್ಷೇತ್ರದ ಸಂಚಾಲಕ ನಗರ್ಲೆ ಮಹದೇವಸ್ವಾಮಿ ಮನವಿ ಮಾಡಿದರು.

ತಾಲೂಕಿನ ಉಪ್ಪಲಿಗರಹುಂಡಿ ಗ್ರಾಮದ'ಲ್ಲಿ ಪಕ್ಷದ ಬೂತ್ ಸಮಿತಿ ಪದಾಧಿಕಾರಿಗಳ ನೇಮಕಾತಿ ಪ್ರಕ್ರಿಯೆಗೆ ಚಾಲನೆ ನೀಡಿ ಮಾತನಾಡಿದ ಅವರು, ಬಿಜೆಪಿ ಪಕ್ಷವನ್ನು ತಳಮಟ್ಟದಿಂದ ಸದೃಢಗೊಳಿಸುವ ಸಲುವಾಗಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಆದೇಶದ ಮೇರೆಗೆ ಬೂತ್ ಸಮಿತಿ ಸದಸ್ಯರು ಮತ್ತು ಅಧ್ಯಕ್ಷರ ನೇಮಕಾತಿ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ. ನೂತನ ಪದಾಧಿಕಾರಿಗಳು ನಿಮ್ಮಲ್ಲಿರುವ ಭಿನ್ನಾಭಿಪ್ರಾಯ ಮರೆತು ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಸಾಧನೆಗಳು ಮತ್ತು ಯೋಜನೆಗಳನ್ನು ಜನರಿಗೆ ತಿಳಿಸುವ ಮೂಲಕ ಪಕ್ಷವನ್ನು ತಳಮಟ್ಟದಿಂದ ಸಂಘಟನೆಗೊಳಿಸಬೇಕು. ಅಲ್ಲದೆ ಯುವ ಮತದಾರರಿಗೆ ಪಕ್ಷದ ತತ್ವ ಸಿದ್ಧಾಂತಗಳನ್ನು ತಿಳಿಸಿ ಜಾಗೃತಿಗೊಳಿಸುವ ಮೂಲಕ ಹೊಸ ಸದಸ್ಯರನ್ನು ನೇಮಕಾತಿಗೊಳಿಸಬೇಕು ಎಂದರು.

ಇದೇ ವೇಳೆ ಮೈಸೂರು ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಬಾಲಕೃಷ್ಣ, ಓಬಿಸಿ ಮೋರ್ಚಾ ಜಿಲ್ಲಾಧ್ಯಕ್ಷ ಬಾಲಚಂದ್ರ, ಓಬಿಸಿ ಪ್ರಧಾನ ಕಾರ್ಯದರ್ಶಿ ಮಹೇಶ್, ಮುಖಂಡರಾದ ನಾರಾಯಣ ಪ್ರಸಾದ್, ವೆಂಕಟರಮಣ ಶೆಟ್ಟಿ, ಎಂ.ಮಹೇಶ್, ನಾಗಶೆಟ್ಟಿ, ಮಹದೇವ, ಮಾದೇಶ, ಶಿವರಾಜು, ಸೋಮು, ಸೇರಿದಂತೆ ಬಿಜೆಪಿ ಪಕ್ಷದ ಕಾರ್ಯಕರ್ತರು, ಬೂತ್ ಸಮಿತಿ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಇದ್ದರು.

ನವಿಲೂರು ಗ್ರಾಪಂಗೆ ಎಸ್.ಮಹದೇವು ಅಧ್ಯಕ್ಷ



ನವಿಲೂರು ಗ್ರಾಪಂ ಅಧ್ಯಕ್ಷರಾಗಿ ಎಸ್.ಮಹದೇವು ಆಯ್ಕೆಯಾದರು.

ನಂಜನಗೂಡು, ಡಿ.12– ತಾಲೂಕಿನ ನವಿಲೂರು ಗ್ರಾಪಂ ನೂತನ ಅಧ್ಯಕ್ಷರಾಗಿ ಎಸ್.ಮಹದೇವು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

16 ಕಾಂಗ್ರೆಸ್, 5 ಬಿಜೆಪಿ ಬೆಂಬಲಿತ ಸದಸ್ಯರು ಸೇರಿದಂತೆ ಒಟ್ಟು 21 ಸದಸ್ಯ ಬಲದ ಗ್ರಾಪಂ ಅಧ್ಯಕ್ಷ ಸ್ಥಾನ ಎಸ್‌ಸಿ ಸಮುದಾಯಕ್ಕೆ, ಉಪಾಧ್ಯಕ್ಷ ಸ್ಥಾನ ಸಾಮಾನ್ಯ ಮಹಿಳೆಗೆ ಮೀಸಲಾಗಿತ್ತು. ಈ ಹಿಂದಿನ ಅಧ್ಯಕ್ಷ ರೇವಣ್ಣ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಗುರುವಾರ ಗ್ರಾಪಂ ಆವರಣದಲ್ಲಿ ಚುನಾವಣೆ ನಡೆಸಲಾಯಿತು. ಅಧ್ಯಕ್ಷ ಸ್ಥಾನಕ್ಕೆ ಎಸ್.ಮಹದೇವು ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಲೋಕೋಪಯೋಗಿ ಇಲಾಖೆ ಎಇಇ ಸತ್ಯನಾರಾಯಣ ಘೋಷಿಸಿದರು. ಚುನಾವಣಾ ಪ್ರಕ್ರಿಯೆಯಲ್ಲಿ 17 ಸದಸ್ಯರು ಹಾಜರಾಗಿದ್ದು, ನಾಲ್ವರು ಗೈರಾಗಿದ್ದರು.

ನೂತನ ಅಧ್ಯಕ್ಷ ಎಸ್.ಮಹದೇವು ಮಾತನಾಡಿ, ಗ್ರಾಪಂ ವ್ಯಾಪ್ತಿಯ ಗ್ರಾಮಗಳಲ್ಲಿ ರಸ್ತೆ, ಚರಂಡಿ, ವಿದ್ಯುತ್ ದೀಪ, ಕುಡಿಯುವ ನೀರಿನ ಸೌಲಭ್ಯ ಸೇರಿದಂತೆ ಮೂಲ ಸೌಕರ್ಯಗಳನ್ನು ಒದಗಿಸುವ ಜೊತೆಗೆ ಸರ್ಕಾರದಿಂದ ದೊರಕುವ ಸವಲತ್ತುಗಳನ್ನು ಫಲಾನುಭವಿಗಳ ಮನೆಗೆ ತಲುಪಿಸುವ ಕೆಲಸ ಮಾಡುತ್ತೇನೆ. ಮುಖ್ಯವಾಗಿ ಗ್ರಾಪಂ ವ್ಯಾಪ್ತಿಯ ಗ್ರಾಮಗಳಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಿ ಪರಿಸರ ಸಂರಕ್ಷಣೆ ಬಗ್ಗೆ ಅರಿವು ಮೂಡಿಸುವ ಕೆಲಸಕ್ಕೆ ಮುಂದಾಗುತ್ತೇನೆ ಎಂದರು.

ಗ್ರಾಪಂ ಉಪಾಧ್ಯಕ್ಷೆ ನಿರ್ಮಲ, ಸದಸ್ಯರಾದ ರೇವಣ್ಣ ಕಾವ್ಯ, ಸಣ್ಣಮ್ಮ ಸುಂದರಮ್ಮ, ತಾಯಮ್ಮಣ್ಣಿ, ನಾಗಮ್ಮ ಜ್ಯೋತಿ, ಸುಧಾ, ಮಹದೇವ, ಚಂದ್ರು, ನಾರಾಯಣ, ಪ್ರಕಾಶ, ಮಾದೇಗೌಡ, ಕೆಂಪರಾಜು, ಮುಖಂಡರಾದ ತಗಡೂರುನಾಯಕ, ಲಕ್ಷ್ಮಣ, ಕೂಸಪ್ಪ ಪ್ರಕಾಶ, ಸುರೇಶ, ಪುಟ್ಟಣ್ಣ, ಮಹೇಶ, ಪಿಡಿಓ ಮಂಜುನಾಥ್ ಸೇರಿದಂತೆ ಇತರರಿದ್ದರು.

ನಾಳೆ ವಿದ್ಯುತ್ ವ್ಯತ್ಯಯ

ಹುಣಸೂರು, ಡಿ.12– ತಾಲೂಕಿನ ಹೊಸೂರು ಗೇಟ್ ವಿದ್ಯುತ್ ವಿತರಣ ಕೇಂದ್ರದಲ್ಲಿ ತ್ರೈಮಾಸಿಕ ಕಾರ್ಯ ಹಮ್ಮಿಕೊಂಡಿರುವುದರಿಂದ ಡಿ.14 ರಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ ತಾಲೂಕಿನ ಗೋವಿಂದನ ಹಳ್ಳಿ, ಗುರುಪುರ, ಗೌಡನಕಟ್ಟೆ, ಕಾಳೇನ ಹಳ್ಳಿ, ಬಲ್ಲೇನಹಳ್ಳಿ, ಚೌಡಿಕಟ್ಟೆ, ವಾರಂಚಿ, ಹೊಸವಾರಂಚಿ, ಚಿಕ್ಕಹುಣಸೂರು, ಅಜಾದ್ ನಗರ, 1ನೇ ಮತ್ತು 2 ನೇ ಪಕ್ಷಿರಾಜಪುರ, ನೆಲ್ಲೂರು ಪಾಲ, ಹಂಚ್ಯಾ, ಹೊಸೂರ್ ಗೇಟ್, ಭೂತಾಳೆ ಪೆಂಜಹಳ್ಳಿ, ಬಿಬಿಸಿ ಕಾಲೋನಿ, ಕೊಟ್ಟಿಗೆ ಕಾವಲ್, ಹೊಸೂರ್ ಕೊಡಗು ಕಾಲೋನಿ, ಸಿದ್ದಲಿಂಗಪುರ, ಭತರವಾಡಿ, ವೀರನಹೊಸಳ್ಳಿ, ಕೆರೆಹಾಡಿ, ಸರ್ವೆ ನಂ.25, ಉಮ್ಮತ್ತೂರು, ಗುರುಪುರ ಟಿಬೆಟ್ ಕ್ಯಾಂಪ್ ಎ ಮತ್ತು ಎಂ ವಿಲೇಜ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

10 ಮಂದಿಗೆ ತರಬೇತಿ ಪ್ರಮಾಣಪತ್ರ ವಿತರಣೆ



ದ್ವಿಚಕ್ರ ವಾಹನಗಳ ದುರಸ್ತಿ ತರಬೇತಿ ಪಡೆದ 10 ಮಂದಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

ಸರಗೂರು, ಡಿ.12– ತಾಲೂಕಿನ ಕೆಂಚನಹಳ್ಳಿಯಲ್ಲಿ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ಅಂಗ ಸಂಸ್ಥೆಯಾದ ವಿವೇಕ ಗ್ರಾಮೀಣ ಜೀವನಾಧಾರ ಕೇಂದ್ರ ಕೆಂಚನಹಳ್ಳಿ ಹಾಗೂ ಟೈಟಾನ್ ಸಂಸ್ಥೆ ವತಿಯಿಂದ ದ್ವಿಚಕ್ರ ವಾಹನಗಳ ದುರಸ್ತಿ ತರಬೇತಿ ಪಡೆದ 10 ಮಂದಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

ವಿವೇಕ ಗ್ರಾಮೀಣ ಜೀವನಾಧಾರ ಕೇಂದ್ರದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಪ್ರಮಾಣ ಪತ್ರ ವಿತರಿಸಿ ಮಾತನಾಡಿದ ಮೈಸೂರು ಜಿಲ್ಲಾ ಕೌಶಲ್ಯಾಭಿವೃದ್ಧಿ ಇಲಾಖೆ ಅಧಿಕಾರಿ ಕೆ.ನಾರಾಯಣ ಮೂರ್ತಿ, ಮನುಷ್ಯನ ಜೀವನ ಕೌಶಲ್ಯದಿಂದ ಕೂಡಿರಬೇಕಾದರೆ ತರಬೇತಿಗಳು ಬಹಳ ಮುಖ್ಯ. ಈ ರೀತಿಯ ತರಬೇತಿಗಳನ್ನು ಯುವ ಸಮುದಾಯ ಬಳಸಿ ಕೊಂಡು ಸ್ವ ಉದ್ಯೋಗದ ಮೂಲಕ ಸದೃಢರಾಗಿ ದೇಶದ ಅಭಿವೃದ್ಧಿಗೆ ಶ್ರಮಿಸಬೇಕು ಎಂದರು. ಮೀನುಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ಶಿವರಂಜನ್ ಮಾತನಾಡಿ, ದೇಶದ ನಿರುದ್ಯೋಗದ ಸಮಸ್ಯೆಯನ್ನು ಹೋಗಲಾಡಿಸಲು ಇಂತಹ ತರಬೇತಿಯಿಂದ ಮಾತ್ರ ಸಾಧ್ಯ ಎಂದರು.

ಮುಖಂಡ ಪಿ.ಡಿ.ನಾಯಕ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಕೋಟೆ ಜೆಕೆ ಮೋಟಾರ್ಸ್ ಮಾಲೀಕ ಜಯರಾಂ, ವಿವೇಕ ಗ್ರಾಮೀಣ ಜೀವನಾಧಾರ ಕೇಂದ್ರದ ವ್ಯವಸ್ಥಾಪಕ ರವಿಕುಮಾರ್ ಹಾಗೂ ಕೇಂದ್ರದ ಸಿಬ್ಬಂದಿಗಳು ಹಾಜರಿದ್ದರು.

ಸಿದ್ಧಗಂಗಾಶ್ರೀಗಳ ಪುತ್ಥಳಿ ಭಗ್ನಗೊಳಿಸಿದ ಕಿಡಿಗೇಡಿಗಳಿಗೆ ಕಠಿಣ ಶಿಕ್ಷೆಗೆ ಆಗ್ರಹ

ನಂಜನಗೂಡು, ಡಿ.12– ಬೆಂಗಳೂರಿನ ಗಿರಿನಗರದಲ್ಲಿ ತ್ರಿವಿಧ ದಾಸೋಹಿ ಸಿದ್ಧಗಂಗಾಶ್ರೀಗಳ ಪುತ್ಥಳಿ ಭಗ್ನಗೊಳಿಸಿರುವ ಕಿಡಿಗೇಡಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಅಧ್ಯಕ್ಷ ಎಸ್.ಎಂ.ಕೆಂಪಣ್ಣ ಒತ್ತಾಯಿಸಿದರು.

ನಗರದ ಮಂಗಳ ಮಂಟಪದ ಸಂಘದ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತ್ರಿವಿಧ ದಾಸೋಹಿ, ಮಹಾ ಮಾನವತಾವಾದಿ ತುಮಕೂರಿನ ಸಿದ್ಧಗಂಗಾ ಮಠದಲ್ಲಿ ಶಿವಕುಮಾರಸ್ವಾಮೀಜಿ ಜಾತಿ ರಹಿತ ಸಮಾಜ ನಿರ್ಮಾಣ ಮಾಡಲು ಜಾತಿಯ ಸೋಂಕನ್ನೇ ತಗಲಿಸಿಕೊಳ್ಳದೆ ಎಲ್ಲಾ ವರ್ಗದ ಬಡಮಕ್ಕಳಿಗೆ ಅನ್ನ, ಅಕ್ಷರ, ಜ್ಞಾನ ದಾಸೋಹಗಳನ್ನು ನಡೆಸಿದ ಮಹಾಪುರುಷರು. ಅವರ ಇತಿಹಾಸ ತಿಳಿಯದ ತಿಡಿಗೇಡಿಗಳು ಅವರ ಪ್ರತಿಮೆ ಭಗ್ನಗೊಳಿಸಿ ವಿಕೃತಿ ಮೆರೆದಿರುವುದು ಖಂಡನೀಯ. ಆದ್ದರಿಂದ ಆರೋಪಿಗಳನ್ನು ಕಠಿಣ ಶಿಕ್ಷೆಗೆ ಗುರಿಪಡಿಸಬೇಕು ಎಂದು ಒತ್ತಾಯಿಸಿದರು. ಇದೇ ವೇಳೆ ಸಮಾಜದ ಮುಖಂಡರು ಹಾಜರಿದ್ದರು.

ಆದಿವಾಸಿ ಮಕ್ಕಳು ಶಿಕ್ಷಣದಿಂದ ವಂಚಿತ

ಅರಣ್ಯ ಮೂಲ ಬುಡಕಟ್ಟು ಸಮುದಾಯಗಳ ಒಕ್ಕೂಟದ ಅಧ್ಯಕ್ಷ ಪುಟ್ಟಬಸವಯ್ಯ ಬೇಸರ



ಬಸವನಗಿರಿ ಆಶ್ರಮ ಶಾಲೆ



ಹೆಚ್.ಡಿ.ಕೋಟೆ, ಡಿ.12– ರಾಜ್ಯದ ಆಶ್ರಮ ಶಾಲೆಗಳ ಮಕ್ಕಳ ಅಭಿವೃದ್ಧಿಗಾಗಿ ಈ ಹಿಂದೆ 7ನೇ ತರಗತಿವರೆಗೆ ಇದ್ದ ಆಶ್ರಮ ಶಾಲೆಗಳನ್ನು 8ನೇ ತರಗತಿವರೆಗೆ ವಿಸ್ತರಿಸಲಾಗಿದೆ. ಆದರೂ ಆದಿವಾಸಿ ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ ಎಂದು ಕರ್ನಾಟಕ ಅರಣ್ಯ ಮೂಲ ಬುಡಕಟ್ಟು ಸಮುದಾಯಗಳ ಒಕ್ಕೂಟದ ಅಧ್ಯಕ್ಷ ಪುಟ್ಟಬಸವಯ್ಯ ವಡ್ಡರಗುಡಿ ಬೇಸರ ವ್ಯಕ್ತಪಡಿಸಿದರು.

ತಾಲೂಕಿನ ಬಸವನಗಿರಿ ಆಶ್ರಮ ಶಾಲೆಗೆ ಭೇಟಿ ನೀಡಿ ಮಾತನಾಡಿದ ಅವರು, ಸರ್ಕಾರ ಆಶ್ರಮ ಶಾಲೆಗಳನ್ನು ಮೇಲ್ದರ್ಜೆಗೇರಿಸಿ, ಆದಿವಾಸಿ ಮಕ್ಕಳು ಗುಣಮಟ್ಟದ ಶಿಕ್ಷಣ ಪಡೆಯಲಿ ಎಂಬ ಪ್ರಯತ್ನ ಸಫಲತೆ ಕಾಣುವಲ್ಲಿ ವಿಫಲವಾಗಿದೆ. ಆದಿವಾಸಿ ಮಕ್ಕಳು ಆಶ್ರಮ ಶಾಲೆಗಳಲ್ಲಿ 7ನೇ ತರಗತಿ ನಂತರ ಮುಂದಿನ ಶಿಕ್ಷಣ ಪಡೆಯಲು ಸಾಧ್ಯವಾಗದೆ ಶಿಕ್ಷಣದಿಂದ ವಂಚಿತರಾಗುತ್ತಿದ್ದು, ಸರ್ಕಾರದ ಯೋಜನೆ ಹಳ್ಳ ಹಿಡಿದಿದೆ. ತಾಲೂಕಿನಲ್ಲಿ 10 ಆಶ್ರಮ ಶಾಲೆಗಳಿದ್ದು, ಪ್ರಸ್ತುತ ವರ್ಷ 60 ರಿಂದ 70 ಮಕ್ಕಳು 8ನೇ ತರಗತಿಯಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಆದರೆ ಹಾಜರಾತಿ ಅರ್ಧದಷ್ಟು ಮಾತ್ರ ಇದೆ. ಗುಣಮಟ್ಟದ ಶಿಕ್ಷಕರು ಇಲ್ಲದಿರುವುದೇ ಶೈಕ್ಷಣಿಕ ಪ್ರಗತಿ ಕುಂಠಿತಕ್ಕೆ ಕಾರಣವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಒಂದು ಆಶ್ರಮ ಶಾಲೆಯಲ್ಲಿ 15 ಮಕ್ಕಳು ಪ್ರವೇಶಾತಿ ಪಡೆದಿದ್ದರೆ, 5 ರಿಂದ 6 ಮಕ್ಕಳು ಮಾತ್ರ ಹಾಜರಾಗುತ್ತಿದ್ದಾರೆ. ಇನ್ನುಳಿದ ಮಕ್ಕಳು ಶಾಲೆಯಿಂದ ಹೊರ ಉಳಿದಿದ್ದಾರೆ. ಶೈಕ್ಷಣಿಕ ವರ್ಷ ಜೂನ್‌ನಲ್ಲಿ ಪ್ರಾರಂಭವಾಗಿದ್ದರೂ, ನವೆಂಬರ್ ತಿಂಗಳಲ್ಲಿ ಮಕ್ಕಳಿಗೆ ಪಠ್ಯ ಪುಸ್ತಕ ವಿತರಿಸಲಾಗಿದೆ. ಈ ನಿರ್ಲಕ್ಷ್ಯ ಧೋರಣೆ ಇದ್ದರೆ ಮಕ್ಕಳು ಯಾವ ರೀತಿ ಉತ್ತಮ ಶಿಕ್ಷಣ ಪಡೆಯಲು ಸಾಧ್ಯ ಎಂದರು.

ಆಶ್ರಮ ಶಾಲೆಯ ಒಂದೇ ಕೊಠಡಿಯಲ್ಲಿ 7 ಮತ್ತು 8ನೇ ತರಗತಿ ಮಕ್ಕಳನ್ನು ಕೂರಿಸಿ ಬೋಧಿಸಲಾಗುತ್ತಿದೆ. ಏಕ ಕಾಲದಲ್ಲೇ ಎರಡೂ ತರಗತಿಗಳಿಗೆ ಶಿಕ್ಷಕರು ಪಾಠ ಮಾಡುತ್ತಿದ್ದು, ಯಾವ ಪಾಠ ಕೇಳಬೇಕು ಎಂಬ ಗೊಂದಲ ಮಕ್ಕಳಲ್ಲಿ ಕಾಡುತ್ತಿದೆ. ಆಶ್ರಮ ಶಾಲೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಶಿಕ್ಷಕರು ನಿಯೋಜನೆಯಾಗಿರುವ ಕಾರಣ, ಅವರಿಂದ ಸರಿಯಾಗಿ ಕೆಲಸ ತೆಗೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಮತ್ತೊಂದೆಡೆ ವಿಷಯವಾರು ಶಿಕ್ಷಕರು ಶಾಲೆಯಲ್ಲಿ ಇಲ್ಲದಿರುವುದರಿಂದ ಗುಣಮಟ್ಟದ ಶಿಕ್ಷಣ ನೀಡಲು ಸಾಧ್ಯವಾಗಿಲ್ಲ ಎಂಬುದು ಪೋಷಕರ ಆರೋಪವಾಗಿದೆ ಎಂದರು.

ಕೇರಳ ಮಾದರಿ 1ರಿಂದ 12 ತರಗತಿವರೆಗೆ ಒಂದೇ ಕಡೆ ಶಿಕ್ಷಣ ದೊರಕಬೇಕು. ಈ ರೀತಿ ಆಶ್ರಮ ಶಾಲೆಗಳನ್ನು ಮಾಡಬೇಕು. ಆಗ ಮಾತ್ರ ನಮ್ಮ ಸಮುದಾಯದ ಮಕ್ಕಳು ಗುಣಮಟ್ಟದ ಶಿಕ್ಷಣ ಪಡೆಯಲು ಸಾಧ್ಯ ಎಂದು ಸರ್ಕಾರಕ್ಕೆ ಹಲವು ಬಾರಿ ಮನವಿ ಮಾಡಿದ್ದೇವೆ. ಆದರೆ ಅಲ್ಲಿನ ವ್ಯವಸ್ಥೆ ಮಾಡುವ ಬದಲು ಮತ್ತೆ ನಮ್ಮ ಮಕ್ಕಳನ್ನು ಶಿಕ್ಷಣದಿಂದ ವಂಚಿತರಾಗಿ ಸುವ ಉದ್ದೇಶದಿಂದ ಈ ರೀತಿ ಮಾಡ ಲಾಗಿದೆ. ಸರ್ಕಾರಕ್ಕೆ ನಿಜವಾಗಿಯೂ ಆದಿವಾಸಿ ಜನರಿಗೆ ಉತ್ತಮ ಗುಣ ಮಟ್ಟದ ಶಿಕ್ಷಣ ನೀಡುವ ಇಚ್ಛಾಶಕ್ತಿ ಇದ್ದರೆ ಕೇರಳ ಮಾದರಿ ಮಾಡಲಿ ಎಂಬುದು ಅರಣ್ಯವಾಸಿಗಳ ಒತ್ತಾಯವಾಗಿದೆ ಎಂದರು.

ಸಂಬಂಧವೇ ಇಲ್ಲದಂತೆ ವರ್ತನೆ

ಹೆಚ್.ಡಿ.ಕೋಟೆ ತಾಲೂಕಿನಲ್ಲಿ 10 ಆಶ್ರಮ ಶಾಲೆಗಳಿದ್ದು, ತುಂಬಾ ಚಿಂತಾಜನಕ ಸ್ಥಿತಿಯಲ್ಲಿವೆ. ಆಶ್ರಮ ಶಾಲೆಗಳ ಕಟ್ಟಡಗಳ ಹೊರಾಂಗಣ ವ್ಯವಸ್ಥೆ ತುಂಬಾ ಸುಂದರವಾಗಿದ್ದು, ಒಳಾಂಗಣ ವ್ಯವಸ್ಥೆ ಶೋಚನೀಯವಾಗಿದೆ. ಮಕ್ಕಳಿಗೆ ಸಕಾಲಕ್ಕೆ ಪುಸ್ತಕ, ಸಮವಸ್ತ್ರ ಸಿಗುತ್ತಿಲ್ಲ. ಆಶ್ರಮ ಶಾಲೆಗಳಲ್ಲಿ ಖಾಯಂ ಶಿಕ್ಷಕರ ಕೊರತೆ ಬಗ್ಗೆ ಅಧಿಕಾರಿಗಳಿಗೆ ತಿಳಿಸಿದ್ದರೂ ನಮಗೆ ಸಂಬಂಧವೇ ಇಲ್ಲದಂತೆ ವರ್ತಿಸುತ್ತಿದ್ದಾರೆ. ಶಿಕ್ಷಣ ಇಲಾಖೆ ಯಾವುದೇ ಕಾರ್ಯಕ್ರಮ ಆಶ್ರಮ ಶಾಲೆಗಳನ್ನು ತಲುಪಿಲ್ಲ. ಬಿಇಓ, ಬಿಆರ್‌ಸಿ, ಸಿಆರ್‌ಪಿಗಳಾಗಲಿ ಆಶ್ರಮ ಶಾಲೆಗಳ ಬಗ್ಗೆ ಗಮನಹರಿಸುತ್ತಿಲ್ಲ. – ಪೋಷಕರು.


ಆಶ್ರಮ ಶಾಲೆಯಲ್ಲಿ ಮಕ್ಕಳಿಗೆ ಸರಿಯಾದ ವ್ಯವಸ್ಥೆ ರೂಪಿಸಿಲ್ಲ. ಅರ್ಧ ವಾರ್ಷಿಕ ಪರೀಕ್ಷೆವರೆಗೂ ಯಾವುದೇ ಪುಸ್ತಕಗಳು ನೀಡಿಲ್ಲ. ಮೇಲ್ದರ್ಜೆಗೇರಿದರೂ ಯಾವ ಬದಲಾವಣೆಗಳು ಕಂಡುಬಂದಿಲ್ಲ. ಸಂಬಂಧಪಟ್ಟ ಮೇಲಾಧಿಕಾರಿಗಳು ಇತ್ತ ಗಮನಹರಿಸಿ, ಆದಿವಾಸಿ ಮಕ್ಕಳ ಶಿಕ್ಷಣದ ಬಗ್ಗೆ ಹೆಚ್ಚಿನ ಆಸಕ್ತಿ ತೋರಿಸಬೇಕಿದೆ.

-ಪುಟ್ಟಬಸವಯ್ಯ, ಕರ್ನಾಟಕ ಅರಣ್ಯ ಮೂಲ ಬುಡಕಟ್ಟು ಸಮುದಾಯಗಳ ಒಕ್ಕೂಟದ ಅಧ್ಯಕ್ಷ.

ಕೇರಳ ಮಾದರಿ ಆಶ್ರಮ ಶಾಲೆಗಳನ್ನು ಮಾಡಬೇಕು ಎಂಬುದು ಇಲಾಖೆ ಉದ್ದೇಶವಾಗಿದೆ. ತಾಲೂಕಿನ ಚನ್ನಗುಂಡಿ ಮತ್ತು ಜಕ್ಕಹಳ್ಳಿ ಆಶ್ರಮ ಶಾಲೆಗಳಲ್ಲಿ 1ರಿಂದ 12ನೇ ತರಗತಿ ಪ್ರಾರಂಭಿಸಲು ಹಿರಿಯ ಅಧಿಕಾರಿಗಳಿಗೆ ವರದಿ ಸಲ್ಲಿಸಲಾಗಿದೆ. ಆಶ್ರಮ ಶಾಲೆಗಳಲ್ಲಿ ಖಾಯಂ ಶಿಕ್ಷಕರು ಇಲ್ಲದೆ ಗುಣಮಟ್ಟದ ಶಿಕ್ಷಣ ನೀಡಲು ಸಾಧ್ಯವಾಗುತ್ತಿಲ್ಲ. ಈ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆ.

- ಜಿ.ಆರ್.ಮಹೇಶ್, ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿ.

ಮೋನಿಕಾ ನಿಧನ



ಹುಣಸೂರು, ಡಿ.12– ಹುಣಸೂರು ಸಂತ ಜೋಸೆಫ್ ಪದವಿ ಕಾಲೇಜಿನ 2ನೇ ವರ್ಷದ ಬಿಎಸ್ಸಿ ವಿದ್ಯಾರ್ಥಿನಿ, ಹುಡಾ ಮಾಜಿ ಅಧ್ಯಕ್ಷ, ಹಾಲಿ ನಗರಸಭಾ ಸದಸ್ಯ ಗಣೇಶ್ ಕುಮಾರಸ್ವಾಮಿ ಅವರ ಪುತ್ರಿ ಮೋನಿಕಾ(19) ಗುರುವಾರ ರಾತ್ರಿ ನಿಧನರಾದರು. ಮೃತರು, ತಂದೆ, ತಾಯಿ, ಸಹೋದರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ನಾಳೆ (ಶುಕ್ರವಾರ) ಮಧ್ಯಾಹ್ನ 12 ಗಂಟೆಗೆ ನಗರದ ಉಪಕಾರ್ ಲೇಔಟ್ ಪಕ್ಕದಲ್ಲಿರುವ ಮೃತರ ತೋಟದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಆಕ್ರಮಣಕಾರಿ ಮನೋಭಾವ ಇಲ್ಲದ ಕಾರಣಕ್ಕೆ ಊಟಿ, ಕಾಸರಗೋಡು, ಹೊಸೂರು, ನಿಪ್ಪಾಣಿ ಕಳೆದುಕೊಂಡೆವು...!

● ಕನ್ನಡಿಗರ ಧೋರಣೆಗೆ ಬಿಜೆಪಿ ಮುಖಂಡ ಆರ್.ರಘು ಬೇಸರ
● ರಾಜ್ಯದ ಮಹನೀಯರ ಸ್ಮರಣೆ; ಸಾಧಕರಿಗೆ ಅಭಿನಂದನೆ

ಮೈಸೂರು, ಡಿ.12(ಎಂಟಿವೈ)– ಕನ್ನಡಿಗರಲ್ಲಿ ಆಕ್ರಮಣಕಾರಿ ಮನೋಭಾವ ಇಲ್ಲದ ಕಾರಣ ಕರ್ನಾಟಕಕ್ಕೆ ಸೇರಬೇಕಾದ ಊಟಿ, ಕಾಸರಗೋಡು ಸೇರಿದಂತೆ ವಿವಿಧ ಪ್ರದೇಶಗಳ ಕಳೆದುಕೊಳ್ಳಬೇಕಾದ ದುಸ್ಥಿತಿ ಉಂಟಾಯಿತು ಎಂದು ರಾಜ್ಯ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ರಘು ಆರ್.ಕೌಟಿಲ್ಯ ವಿಷಾದಿಸಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ ಕರ್ನಾಟಕ ಸೇನಾಪಡೆ ಆಯೋಜಿಸಿದ್ದ ಮಾಜಿ ಮುಖ್ಯಮಂತ್ರಿಗಳಾದ ಕೆಂಗಲ್ ಹನುಮಂತಯ್ಯ, ನಿಜಲಿಂಗಪ್ಪ ಹಾಗೂ ರಾಷ್ಟ್ರಕವಿ ಕುವೆಂಪು ಸ್ಮರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕರ್ನಾಟಕ ಏಕೀಕರಣಕ್ಕೆ ಶ್ರಮಿಸಿದ ಹಾಗೂ ಕನ್ನಡ ನಾಡನ್ನು ಕಟ್ಟಿ ಬೆಳೆಸಿದವರನ್ನು ಸ್ಮರಿಸುವುದು ನಮ್ಮ ಆದ್ಯ ಕರ್ತವ್ಯ. ಮುಂದಿನ ಪೀಳಿಗೆಗೆ ಇತಿಹಾಸ ತಿಳಿಸುವ ನಿಟ್ಟಿನಲ್ಲಿ ಪಠ್ಯಕ್ರಮ ರಚಿಸಬೇಕಾಗಿದೆ. ಆ ಮೂಲಕ ಉತ್ತಮ ಶಿಕ್ಷಣ ನೀಡಲು ಕ್ರಮ ಕೈಗೊಳ್ಳಬೇಕು ಎಂದು ಅಭಿಪ್ರಾಯಪಟ್ಟರು.

ಸೌಹಾರ್ದತೆ ಮತ್ತು ಸಾಮರಸ್ಯದ ಹೆಸರಲ್ಲಿ ಕನ್ನಡಿಗರಲ್ಲಿ ಆಕ್ರಮಣಕಾರಿ ಭಾವನೆ ಇಲ್ಲದಂತಾಗಿದೆ. ಇದರಿಂದ ಗಡಿ ಪ್ರದೇಶಗಳಲ್ಲಿ ಉದಕಮಂಡಲ(ಊಟಿ), ಕಾಸರಗೋಡು, ಹೊಸೂರು, ನಿಪ್ಪಾಣಿ ಸೇರಿದಂತೆ ಇನ್ನಿತರ ಕರ್ನಾಟಕಕ್ಕೆ ಸೇರಬೇಕಾದ, ಕನ್ನಡಿಗರೇ ಹೆಚ್ಚಾಗಿರುವ ಪ್ರದೇಶಗಳನ್ನು ರಾಜಕೀಯ ಹಿತಾಸಕ್ತಿ ಇಲ್ಲದೇ ಕಳೆದುಕೊಂಡಿದ್ದೇವೆ. ಇನ್ನಾದರೂ ಕರ್ನಾಟಕಕ್ಕೆ ಸೇರಿದ ಪ್ರದೇಶಗಳನ್ನು ರಕ್ಷಣೆ ಮಾಡಿಕೊಳ್ಳಲು ಎಲ್ಲರೂ ಬದ್ಧರಾಗಬೇಕು ಎಂದರು.

ಈ ಹಿಂದೆ ನಮ್ಮ ಮೇಲೆ ಬ್ರಿಟಿಷರು ಇಂಗ್ಲೀಷ್ ಭಾಷೆ ಹೇರಿದರೆ, ಇದೀಗ ಉತ್ತರ ಭಾರತೀಯರು ಹಿಂದಿ ಭಾಷೆಯನ್ನು ಹೇರುತ್ತಿದ್ದಾರೆ. ವಿವಿಧ ಭಾಷೆ ಕಲಿಯುವುದರಲ್ಲಿ ತಪ್ಪಿಲ್ಲ. ಆದರೆ ವ್ಯವಸ್ಥಿತವಾಗಿ ಅನ್ಯ ಭಾಷೆಯ ಹೇರಿಕೆಯನ್ನು ಸಹಿಸಿಕೊಂಡು ಕುಳಿತುಕೊಳ್ಳ ಬಾರದು. ತ್ರಿಭಾಷಾ ಸೂತ್ರವನ್ನು ಒಪ್ಪಿಕೊಳ್ಳುವುದೇ ಆದರೆ ನಮ್ಮ ಗಡಿ ರಾಜ್ಯದ ಭಾಷೆಗಳನ್ನು ಕಲಿಯುವುದರಿಂದ ಒಕ್ಕೂಟ ವ್ಯವಸ್ಥೆ ಹಾಗೂ ಗಡಿ ಭಾಗದ ಸೌಹಾರ್ದತೆ ಕಾಯ್ದುಕೊಳ್ಳಲೂ ಅನುಕೂಲವಾಗುತ್ತದೆ. ಅಲ್ಲದೇ ವ್ಯವಹಾರಿಕವಾಗಿಯೂ ಗಡಿ ರಾಜ್ಯದೊಂದಿಗೆ ಸಂಬಂಧಗಳು ಸುಧಾರಿಸುತ್ತದೆ. ಇದು ವೈಜ್ಞಾನಿಕವಾಗಿ ಒಪ್ಪಿಕೊಳ್ಳಬಹುದಾದ ಸೂತ್ರ ಎಂದು ಅಭಿಪ್ರಾಯಪಟ್ಟರು.

ಮೈಸೂರು ಸಂಸ್ಥಾನ ಕಟ್ಟಿದ ನಮ್ಮ ಮೈಸೂರು ಮಹಾರಾಜರ ಇತಿಹಾಸವನ್ನು ನಮ್ಮ ಮಕ್ಕಳಿಗೆ ತಿಳಿಸಿಕೊಡುವಲ್ಲಿ ಶಿಕ್ಷಣ ವ್ಯವಸ್ಥೆಯಲ್ಲಿ ಅಪಚಾರವೆಸಗಲಾಗಿದೆ. ಇನ್ನಾದರೂ ಲೋಪ ಸರಿಪಡಿಸುವ ಕಾರ್ಯ ಆಗಬೇಕು. ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪಿಸಿದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಹೆಸರನ್ನು ನಾಮಕರಣ ಮಾಡಲು ಇದುವರೆಗೂ ನಮ್ಮಿಂದ ಸಾಧ್ಯವಾಗಿಲ್ಲ. ಇದರಿಂದ ನಾವೆಷ್ಟು ಆತ್ಮವಂಚನೆಯಿಂದ ನಡೆದುಕೊಂಡಿದ್ದೇವೆ ಎಂದು ಗೊತ್ತಾಗುತ್ತದೆ. ಮಾನಸಗಂಗೋತ್ರಿಗೆ 800 ಎಕರೆ ಧಾರೆ ಎರೆದ ರಾಜಮನೆತನವನ್ನು ನಾವೆಷ್ಟು ಸ್ಮರಿಸಿಕೊಳ್ಳುತ್ತಿದ್ದೇವೆ ಎಂದು ಆತ್ಮಾವಲೋಕನ ಮಾಡಿಕೊಳ್ಳಬೇಕು. ಹೈದರಾಬಾದ್–ಕರ್ನಾಟಕವನ್ನು ಕಲ್ಯಾಣ ಕರ್ನಾಟಕ ಎಂತಲೂ, ಮುಂಬೈ–ಕರ್ನಾಟಕವನ್ನು ಕಿತ್ತೂರು ಕರ್ನಾಟಕ ಎನ್ನುವುದಾದರೆ ಮೈಸೂರು ಭಾಗವನ್ನು 'ಹಳೆಯ ಮೈಸೂರು' ಅಥವಾ 'ನಾಲ್ವಡಿ ಮೈಸೂರು' ಎಂದು ಏಕೆ ಕರೆಯಬಾರದು ಎಂದು ಪ್ರಶ್ನಿಸಿದರು.

ಪ್ರಶಸ್ತಿ ಪ್ರದಾನ: ಇದೇ ವೇಳೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಡಿಡಿಪಿಐ ಎಸ್.ಟಿ.ಜವರೇಗೌಡ, ಖ್ಯಾತ ಮೂಳೆ ತಜ್ಞ ಡಾ.ಕೆ.ಸಿ.ನಂದೀಶ್ ಕುಮಾರ್, ಕೃಷ್ಣರಾಜೇಂದ್ರ ಸಹಕಾರ ಬ್ಯಾಂಕ್ ಅಧ್ಯಕ್ಷ ಡಿ.ಬಸಪ್ಪ, ಕೆಪಿಸಿಸಿ ಕಾರ್ಯದರ್ಶಿ ವರುಣಾ ಮಹೇಶ್, ಕರ್ನಾಟಕ ತೆಂಗಿನ ನಾರಿನ ಅಭಿವೃದ್ಧಿ ನೌಕರರ ಸಂಘದ ರಾಜ್ಯಾಧ್ಯಕ್ಷ ಬಿ.ಹೆಚ್.ಗೋವಿಂದೇಗೌಡ, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು, ಗುಂಡ್ಲುಪೇಟೆ ತಾ.ಪಂ ಮಾಜಿ ಅಧ್ಯಕ್ಷ ಆಲತ್ತೂರು ಜಯರಾಮ್, ಮೈಸೂರು–ಚಾಮರಾಜನಗರ ಒಕ್ಕಲಿಗರ ಸಂಘದ ನಿರ್ದೇಶಕ ಎ.ಕುಮಾರ್, ಉಮ್ಮತ್ತೂರು ವೀರಗಾಸೆ ಕಲಾವಿದ ಎಂ.ಜಯಕುಮಾರ್ ಅವರಿಗೆ ಕರ್ನಾಟಕ ಸುವರ್ಣ ಸಂಭ್ರಮ ಸೇವಾ ಪ್ರಶಸ್ತಿ ಪ್ರದಾನ ಮಾಡಲಾಯಿತು. ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನ ಐವತ್ತು ವಿದ್ಯಾರ್ಥಿನಿಯರಿಗೆ ಕೆಪಿಸಿಸಿ ಸದಸ್ಯ ಆರ್.ಜೇಸುದಾಸ್ ಪ್ರತಿಭಾ ಪುರಸ್ಕಾರ ವಿತರಿಸಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಸೇನಾಪಡೆ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್ ಗೌಡ, ಸಮಾಜ ಸೇವಕ ಡಾ. ರಘುರಾಂ ಕೆ.ವಾಜಪೇಯಿ, ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕರ್ನಾಟಕ ಸೇನಾಪಡೆಯ ರಾಜ್ಯಾಧ್ಯಕ್ಷ ಚಾ.ರಂ.ಶ್ರೀನಿವಾಸ ಗೌಡ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ ಕರ್ನಾಟಕ ಸೇನಾ ಪಡೆ ಆಯೋಜಿಸಿದ್ದ ಮಾಜಿ ಮುಖ್ಯಮಂತ್ರಿಗಳಾದ ಕೆಂಗಲ್ ಹನುಮಂತಯ್ಯ, ನಿಜಲಿಂಗಪ್ಪ ಹಾಗೂ ರಾಷ್ಟ್ರಕವಿ ಕುವೆಂಪು ಸ್ಮರಣೆ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿನ ಸಾಧಕರಿಗೆ ಸನ್ಮಾನಿಸಲಾಯಿತು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಮುತ್ತು (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಭೈರತಿ ರಣಗಲ್(ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಪುಷ್ಪಾ–2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಮಿಸ್ ಯು (ತ)	4 ಪ್ರದರ್ಶನಗಳು
ಸಂಗಂ	
ಪುಷ್ಪಾ–2 (ತೆ)	4 ಪ್ರದರ್ಶನಗಳು
ಲಿಡೋ	
ಲಕ್ಕಿ ಭಾಸ್ಕರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಜೀಬ್ರಾ (ಕ)	4 ಪ್ರದರ್ಶನಗಳು
ಪ್ರಭಾ	
ಬಘೀರಾ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಪುಷ್ಪಾ 2 (ಕ): ಬೆ.9.45ಕ್ಕೆ, ಮ.1.45ಕ್ಕೆ, ಪುಷ್ಪಾ 2 (ಹಿಂ): ಸಂ.5.50ಕ್ಕೆ, ಪುಷ್ಪಾ 2 (ತೆ): ರಾ.9.50ಕ್ಕೆ.
ಸ್ಕ್ರೀನ್ 2	ಮೋನಾ 2 (3ಡಿ)(ಇಂ): ಬೆ.11ಕ್ಕೆ, ಮ.3.45ಕ್ಕೆ, ಸಂ.6ಕ್ಕೆ, ಸೋಲೋ ಲೀವಿಂಗ್ ರಿವಾಕ್ (ಜ): ಮ.1.10ಕ್ಕೆ, ಪುಷ್ಪಾ 2 (ತೆ): ರಾ.8.10ಕ್ಕೆ.
ಸ್ಕ್ರೀನ್ 3	ದಿ ಸಬರ್‌ಮತಿ ರಿಪೋರ್ಟ್ (ಹಿಂ): ಬೆ.10.25ಕ್ಕೆ, ಭೈರತಿ ರಣಗಲ್ (ಕ): ಮ.1.05ಕ್ಕೆ, ಹರಿದಾಸರ ದಿನಚರಿ (ಕ): ಸಂ.4ಕ್ಕೆ, ಪುಷ್ಪಾ 2 (ಕ): ಸಂ.6.15ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 4	ಪುಷ್ಪಾ 2 (ತೆ): ಬೆ.10.10ಕ್ಕೆ, ಮ.2.10ಕ್ಕೆ, ಸಂ.6.05ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಅಮರನ್ (ಕ): ಬೆ.10.30ಕ್ಕೆ, ರಾ.7.30ಕ್ಕೆ, ಭೈರತಿ ರಣಗಲ್ (ಕ): ಮ.1.45ಕ್ಕೆ, ಧೀರ ಭಗತ್ ರಾಯ್ (ಕ): ಸಂ.4.30ಕ್ಕೆ.
ಸ್ಕ್ರೀನ್ 2	ಭೈರತಿ ರಣಗಲ್ (ಕ): ಬೆ.10.40ಕ್ಕೆ, ಪುಷ್ಪಾ 2 (ಕ): ಮ.1.15ಕ್ಕೆ, ಸಂ.5.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ಪುಷ್ಪಾ 2 (ಕ): ಬೆ.11.30ಕ್ಕೆ, ರಾ.7.45ಕ್ಕೆ, ಪುಷ್ಪಾ 2 (ತೆ): ಸಂ.4ಕ್ಕೆ.
ಸ್ಕ್ರೀನ್ 4	ಪುಷ್ಪಾ 2 (ತೆ): ಬೆ.10.30ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಪುಷ್ಪಾ 2 (ಕ): ಮ.2.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಕತ್ತಿಯಿಂದ ಕಡಿದು ವ್ಯಕ್ತಿ ಕೊಲೆ ಮಾಡಿದ್ದ ಇಬ್ಬರಿಗೆ ಜೀವಾವಧಿ ಜೈಲು ಶಿಕ್ಷೆ

ಮಡಿಕೇರಿ, ಡಿ.12–ಕತ್ತಿಯಿಂದ ಕಡಿದು ವ್ಯಕ್ತಿಯನ್ನು ಕೊಲೆ ಮಾಡಿದ ಇಬ್ಬರಿಗೆ ಮಡಿಕೇರಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಜೀವಾವಧಿ ಜೈಲು ಶಿಕ್ಷೆ ಮತ್ತು ತಲಾ 1.10 ಲಕ್ಷ ರೂ. ದಂಡ ವಿಧಿಸಿ ತೀರ್ಪು ನೀಡಿದೆ.

ಪೆರಾಜೆ ಗ್ರಾಮದ ನಿವಾಸಿಗಳಾದ ತಾರಿಣಿ (46) ಮತ್ತು ಧರಣಿ ಕುಮಾರ್ (22) ಶಿಕ್ಷೆಗೆ ಗುರಿಯಾದ ಅಪರಾಧಿಗಳು. 2020ರ ಮೇ 8ರಂದು ತಾರಿಣಿ ಮತ್ತು ಧರಣಿ ಕುಮಾರ್ ಪೆರಾಜೆ ಗ್ರಾಮದ ಉತ್ತರಕುಮಾರ್ ಅವರನ್ನು ಕತ್ತಿಯಿಂದ ಕಡಿದು ಕೊಲೆ ಮಾಡಿದ್ದರು.

ಈ ಕುರಿತು ಪ್ರಕರಣ ದಾಖಲಿಸಿಕೊಂಡಿದ್ದ ಮಡಿಕೇರಿ ಗ್ರಾಮಾಂತರ ಠಾಣೆ ಪೊಲೀಸರು, 2020ರ ಮೇ 9ರಂದು ಈ ಇಬ್ಬರನ್ನು ಬಂಧಿಸಿದ್ದರು. ನಂತರ ಅಂದಿನ ವೃತ್ತ ನಿರೀಕ್ಷಕ




ಧರಣಿ ಕುಮಾರ್ ತಾರಿಣಿ

ಸಿ.ಎಸ್.ದಿವಾಕರ್ ಮತ್ತು ಸಹಾಯಕ ತನಿಖಾಧಿಕಾರಿ ಶ್ರೀಧರ್ ಅವರ ತನಿಖೆ ನಡೆಸಿ, ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು.

ಈ ಸಂಬಂಧ ವಿಚಾರಣೆ ನಡೆಸಿದ ನ್ಯಾಯಾಧೀಶ ಹೊಸಮನಿ ಪುಂಡಲಿಕ್ ಇಬ್ಬರಿಗೂ ಜೀವಾವಧಿ ಜೈಲು ಶಿಕ್ಷೆ ಮತ್ತು 1.10 ಲಕ್ಷ ರೂ. ದಂಡ ವಿಧಿಸಿ ತೀರ್ಪು ನೀಡಿದ್ದಾರೆ. ಸರ್ಕಾರದ ಪರ ಸರ್ಕಾರಿ ಅಭಿಯೋಜಕಿ ಕೆಜಿ.ಅಶ್ವಿನಿ ವಾದ ಮಂಡಿಸಿದ್ದರು.

ಚಾಮುಂಡಿಬೆಟ್ಟ ರಸ್ತೆಯಲ್ಲಿ ಅಪಾಯದ ವಿದ್ಯುತ್ ಕಂಬ!

ಮೈಸೂರು, ಡಿ.12(ಎಸ್‌ಬಿಡಿ)– ಮೈಸೂರು–ಚಾಮುಂಡಿಬೆಟ್ಟ ರಸ್ತೆಯಲ್ಲಿ ವಾಹನ ಡಿಕ್ಕಿ ಹೊಡೆದು ವಿದ್ಯುತ್ ಕಂಬವೊಂದು ಮುರಿದು, ತಡೆಗೋಡೆಗೆ ಒರಗಿ ನಿಂತಿದೆ. ಘಟನೆ ವೇಳೆ ಅದೃಷ್ಟವಶಾತ್ ಯಾವುದೇ ಅಪಾಯ ಸಂಭವಿಸಿಲ್ಲ.

ಪ್ರಧಾನಿ ನರೇಂದ್ರ ಮೋದಿ ಅವರು 2022ರ ಜೂ.20ರಂದು ರಾತ್ರಿ ಚಾಮುಂಡಿಬೆಟ್ಟಕ್ಕೆ ಭೇಟಿ ನೀಡಿದ್ದರು. ಈ ಹಿನ್ನೆಲೆಯಲ್ಲಿ ಬೆಟ್ಟದ ರಸ್ತೆಯಲ್ಲಿ ದಿಢೀರ್ ವಿದ್ಯುತ್ ಕಂಬಗಳನ್ನು ನೆಟ್ಟು ಬೀದಿದೀಪದ ವ್ಯವಸ್ಥೆ ಮಾಡಲಾಗಿತ್ತು. ನಂತರದಲ್ಲಿ ಕಂಬಗಳ ಭದ್ರತೆಗಾಗಿ ತಳದಲ್ಲಿ ಕಟ್ಟೆ ನಿರ್ಮಿಸಲಾಗಿತ್ತು. ನಂತರದಲ್ಲಿ ಆಗೊಮ್ಮೆ ಈಗೊಮ್ಮೆ ಎನ್ನುವಂತೆ ದೀಪಗಳು ಬೆಳಗುತ್ತಿದ್ದವು.

ಈ ನಡುವೆ ಮೂರ್ನಾಲ್ಕು ದಿನಗಳ ಹಿಂದೆ ಯಾವುದೋ ವಾಹನ ಡಿಕ್ಕಿ ಹೊಡೆದ ಪರಿಣಾಮ ಭದ್ರತೆಗೆ ನಿರ್ಮಿಸಿದ್ದ ಕಟ್ಟೆ ಸಹಿತ ಕಂಬವೊಂದು ಮುರಿದು, ತಡೆಗೋಡೆಗೆ ಒರಗಿದೆ. ಅದೃಷ್ಟವಶಾತ್ ರಸ್ತೆ ಕಡೆಗೆ ಬಿದ್ದಿದ್ದರೆ ಭಾರಿ ಅವಘಡವೇ ಸಂಭವಿಸುತ್ತಿತ್ತು. ಆ ಕಂಬದ ತಳದಲ್ಲಿ ಸಿಮೆಂಟ್ ಕಾಂಕ್ರಿಟ್ ಪುಡಿಯಾಗಿದ್ದು, ಕೇವಲ ಕಬ್ಬಿಣದ ರಾಡ್‌ಗಳ ಆಧಾರದಲ್ಲಿ ಕಂಬ ನಿಂತಿದೆ. ಯಾವಾಗ ಸಂಪೂರ್ಣವಾಗಿ ಉರುಳುವುದೋ ಗೊತ್ತಿಲ್ಲ. ಕಂಬ ಮುರಿದ ಕಾರಣ ವಿದ್ಯುತ್ ತಂತಿಗಳು ಜಗ್ಗಿ ಟೈಟ್ ಆಗಿವೆ. ಅವೂ ತುಂಡಾಗುವ ಸ್ಥಿತಿಯಲ್ಲಿವೆ. ಈ ಬಗ್ಗೆ ಸೆಸ್ಕ್, ಗ್ರಾಮ ಪಂಚಾಯ್ತಿ ಹಾಗೂ ದೇವಸ್ಥಾನದ ಅಧಿಕಾರಿಗಳ ಗಮನಕ್ಕೆ ತಂದರೂ ದುರಸ್ತಿಗೆ ಕ್ರಮ ವಹಿಸಿಲ್ಲ ಎಂದು ಬೆಟ್ಟದ ನಿವಾಸಿಯೊಬ್ಬರು ತಿಳಿಸಿದ್ದಾರೆ.

ಎಲ್ಲವನ್ನೂ ತೆರವು ಮಾಡಲಿ: ಮೋದಿ ಭೇಟಿ ಹಿನ್ನೆಲೆಯಲ್ಲಿ ಬೆಟ್ಟದ ರಸ್ತೆ ಬದಿಗೆ ಕಂಬಗಳನ್ನು ಅಳವಡಿಸಿದಾಗಲೇ ಆಕ್ಷೇಪ ವ್ಯಕ್ತಪಡಿಸಲಾಗಿತ್ತು ಆದರೆ ವಿಶೇಷ ದಿನಗಳಲ್ಲಿ ರಾತ್ರಿ ವೇಳೆಯೂ ಭಕ್ತರು ಸಂಚರಿಸುವುದರಿಂದ ಬೀದಿದೀಪವಿದ್ದರೆ ಅನುಕೂಲ ಎಂದು ಹೇಳಿ, ಕಂಬಗಳಿಗೆ ಕಟ್ಟೆ ನಿರ್ಮಿಸಿ ಭದ್ರಗೊಳಿಸಲಾಗಿತ್ತು. ಇದೀಗ ಒಂದು ಕಂಬಕ್ಕೆ ವಾಹನ ಡಿಕ್ಕಿ ಹೊಡೆದಿದ್ದು, ಅದೃಷ್ಟವಶಾತ್ ಯಾವುದೇ ಅಪಾಯವಾಗಿಲ್ಲ. ಈ ಹಿಂದೆಯೂ ದ್ವಿಚಕ್ರ ವಾಹನಗಳು ಡಿಕ್ಕಿ ಹೊಡೆದು ಸವಾರರು ಸಣ್ಣಪುಟ್ಟ ಗಾಯಗಳೊಂದಿಗೆ ಪಾರಾಗಿದ್ದಾರೆ. ಹಾಗಾಗಿ ಬೆಟ್ಟದ ಮಾರ್ಗದಲ್ಲಿರುವ ವಿದ್ಯುತ್ ಕಂಬಗಳನ್ನು ತೆರವು ಮಾಡುವುದು ಸೂಕ್ತ ಎಂದು ಆಗ್ರಹಿಸಿದ್ದಾರೆ.




ಚಾಮುಂಡಿಬೆಟ್ಟ ರಸ್ತೆಯಲ್ಲಿ ವಾಹನ ಡಿಕ್ಕಿ ಹೊಡೆದ ಪರಿಣಾಮ ವಿದ್ಯುತ್ ಕಂಬ ಮುರಿದು, ತಡೆಗೋಡೆಗೆ ಒರಗಿರುವುದು.

ಮುಡಾ 50:50 ನಿವೇಶನ ಹಂಚಿಕೆ ಹಗರಣ
ಇಡಿ ವರದಿ ಆಧರಿಸಿ ಮತ್ತೊಂದು ದೂರು ದಾಖಲಿಸುವಂತೆ ಮನವಿ



ಮೈಸೂರು, ಡಿ.12(ಆರ್‌ಕೆ)–ಜಾರಿ ನಿರ್ದೇಶನಾಲಯ (ಇಡಿ) ಅಧಿಕಾರಿಗಳು ನೀಡಿರುವ ವರದಿ ಆಧರಿಸಿ ಮುಡಾ 50:50 ಅನುಪಾತದಡಿ ನಿವೇಶನ ಹಂಚಿಕೆ ಹಗರಣ ಸಂಬಂಧ ಮತ್ತೊಂದು ಕೇಸು ದಾಖಲಿಸುವಂತೆ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಅವರು ಇಂದು ಲೋಕಾಯುಕ್ತ ಮೈಸೂರು ಎಸ್ಪಿ ಕಚೇರಿಗೆ ಮನವಿ ಸಲ್ಲಿಸಿದ್ದಾರೆ. ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಯಡಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಪತ್ನಿ ಪಾರ್ವತಿ ಸೇರಿ ಪ್ರಕರಣದ ಎಲ್ಲಾ ಆರೋಪಿಗಳ ವಿರುದ್ಧ ಮತ್ತೊಂದು ಪ್ರಕರಣ ದಾಖಲಿಸುವಂತೆ ಸ್ನೇಹಮಯಿ ಕೃಷ್ಣ ಅವರು ಲೋಕಾಯುಕ್ತ ಎಸ್ಪಿ ಅವರಿಗೆ ನೀಡಿರುವ ಮನವಿ ಪತ್ರದಲ್ಲಿ ತಿಳಿಸಿದ್ದು, ಇಡಿ ಅಧಿಕಾರಿಗಳು ನೀಡಿರುವ ವರದಿ ಆಧರಿಸಿ ತನಿಖೆ ನಡೆಸುವಂತೆ ಒತ್ತಾಯಿಸಿದ್ದಾರೆ.

ಅಪರಿಚಿತ ಶವ ಪತ್ತೆ

ಮೈಸೂರು,ಡಿ.12– ಹನಕೆರೆ–ಮಂಡ್ಯ ರೈಲು ನಿಲ್ದಾಣದಲ್ಲಿ ಡಿ.10 ರಂದು ಸುಮಾರು 55 ರಿಂದ 60 ವರ್ಷದ ಅಪರಿಚಿತ ವ್ಯಕ್ತಿಯ ಶವ ಪತ್ತೆಯಾಗಿದ್ದು, ಮೈಸೂರು ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ. ಮೃತನ ಎಡಗೈಯಲ್ಲಿ ಉಷಾ ಎಂದು ಬರೆದಿರುವ ಹಸಿರು ಅಚ್ಚೆ ಗುರುತಿರುತ್ತದೆ. ಈತನ ವಾರಸುದಾರರ ಬಗ್ಗೆ ಮಾಹಿತಿ ದೊರೆತಲ್ಲಿ ಮೈಸೂರು ರೈಲ್ವೆ ಪೊಲೀಸ್ ಠಾಣೆಯ ದೂ.ಸಂ: 0821–2516579 ಅನ್ನು ಸಂಪರ್ಕಿಸಬಹುದು ಎಂದು ಮೈಸೂರು ರೈಲ್ವೆ ಪೊಲೀಸ್ ಠಾಣೆಯ ಆರಕ್ಷಕ ಉಪನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಛತ್ತೀಸ್‌ಗಢದಲ್ಲಿ ನಡೆದ ಎನ್‌ಕೌಂಟರ್‌ನಲ್ಲಿ ಏಳು ಮಾವೋವಾದಿಗಳು ಬಲಿ

ರಾಯ್‌ಪುರ, ಡಿ.12– ದಕ್ಷಿಣ ಛತ್ತೀಸ್‌ಗಢದ ಅಬುಜ್ಮದ್ ಪ್ರದೇಶದ ನಾರಾಯಣಪುರ–ದಂತೇವಾಡದ ಅಂತರ ಜಿಲ್ಲಾ ಗಡಿಯಲ್ಲಿ ಗುರುವಾರ ನಡೆದ ಭೀಕರ ಎನ್‌ಕೌಂಟರ್‌ನಲ್ಲಿ ಕನಿಷ್ಠ ಏಳು ಮಾವೋವಾದಿ(ಸಿಪಿಐ)ಗಳನ್ನು ಭದ್ರತಾ ಪಡೆಗಳು ಹತ್ಯೆ ಮಾಡಿವೆ.

"ದಕ್ಷಿಣ ಅಬುಜ್ಮದ್(ಅಪರಿಚಿತ ಭೂಮಿ) ಪ್ರದೇಶದಲ್ಲಿ ಮಾವೋವಾದಿಗಳ ಉಪಸ್ಥಿತಿಯ ಕುರಿತು ನಿರ್ದಿಷ್ಟ ಮಾಹಿತಿಯ ಆಧಾರದ ಮೇಲೆ, ಜಿಲ್ಲಾ ಮೀಸಲು ಗಾರ್ಡ್(ಡಿಆರ್‌ಜಿ), ವಿಶೇಷ ಕಾರ್ಯಪಡೆ (ಎಸ್‌ಟಿಎಫ್) ಮತ್ತು ಕೇಂದ್ರೀಯ ಮೀಸಲು ಪೊಲೀಸ್ ಪಡೆ (ಸಿಆರ್‌ಪಿಎಫ್) ಜಂಟಿಯಾಗಿ ಶೋಧ ಕಾರ್ಯಾಚರಣೆ ಆರಂಭಿಸಿದ್ದವು. ನವೆಂಬರ್ 10ರಂದು ಆರಂಭವಾದ ಮಾವೋವಾದಿ ವಿರೋಧಿ ಶೋಧ ಕಾರ್ಯಾಚರಣೆ ಮುಂದುವರಿಯುತ್ತಿದ್ದು, ನವೆಂಬರ್ 12ರಂದು ಬೆಳಗಿನ ಜಾವ 3 ಗಂಟೆಗೆ ಮಾವೋವಾದಿಗಳು ತಮ್ಮ ಸ್ಥಳದ ಸಮೀಪಕ್ಕೆ ಬಂದ ಭದ್ರತಾ ಪಡೆಗಳ ಮೇಲೆ ಗುಂಡಿನ ದಾಳಿ ನಡೆಸಿದ ನಂತರ ಎನ್‌ಕೌಂಟರ್ ನಡೆಯಿತು ಎಂದು ಬಸ್ತಾರ್‌ನ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಇಲ್ಲಿಯವರೆಗೆ, ಎನ್‌ಕೌಂಟರ್ ಸ್ಥಳದಿಂದ ಏಳು ಮಾವೋವಾದಿಗಳ ಶವಗಳನ್ನು ವಶಪಡಿಸಿಕೊಳ್ಳಲಾಗಿದೆ ಆದರೆ ವಶಪಡಿಸಿಕೊಂಡ ಮಾವೋವಾದಿಗಳ ಮೃತದೇಹಗಳ ಗುರುತು ಇನ್ನೂ ಪತ್ತೆಯಾಗಿಲ್ಲ ಎಂದು ಅವರು ಹೇಳಿದ್ದಾರೆ.

ಕಾಂಗ್ರೆಸ್ ಮಾಜಿ ಶಾಸಕ ಆರ್.ನಾರಾಯಣ್ ನಿಧನ



ತುಮಕೂರು, ಡಿ.12– ಜಿಲ್ಲೆಯ ಬೆಳ್ಳಾವಿ ಕ್ಷೇತ್ರದ ಕಾಂಗ್ರೆಸ್‌ನ ಮಾಜಿ ಶಾಸಕ ಆರ್ ನಾರಾಯಣ ಅವರು ನಿಧನರಾಗಿದ್ದಾರೆ. ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ 81 ವರ್ಷದ ಆರ್.ನಾರಾಯಣ ಅವರು ತುಮಕೂರಿನ ಸಿದ್ಧಗಂಗಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಕಾಂಗ್ರೆಸ್‌ನ ಟಿಕೆಟ್‌ನಲ್ಲಿ ಸ್ಪರ್ಧಿಸಿ ಬೆಳ್ಳಾವಿ ಕ್ಷೇತ್ರವನ್ನು ಒಟ್ಟು ಮೂರು ಬಾರಿ ಪ್ರತಿನಿಧಿಸಿದ್ದರು. ಇತ್ತೀಚೆಗೆ ಸಾವನ್ನಪ್ಪಿದ ಕರ್ನಾಟಕ ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರ ಅಧಿಕಾರವಧಿಯಲ್ಲಿ ನಾರಾಯಣ ಅವರು ಹೌಸಿಂಗ್ ಬೋರ್ಡ್ ಚೇರ್ಮನ್ ಆಗಿದ್ದರು. ನಾರಾಯಣ ಅವರ ಅಂತಿಮ ದರ್ಶನಕ್ಕೆ ಗಾಂಧಿನಗರದ ನಿವಾಸದಲ್ಲಿ ಅವಕಾಶ ಮಾಡಿಕೊಡಲಾಗಿದೆ. ನಾರಾಯಣ್ ಅವಿವಾಹಿತರಾಗಿದ್ದು, ಒಬ್ಬಂಟಿಯಾಗಿ ನಗರದ ಸಿಎಸ್‌ಐ ಲೇಔಟ್‌ನಲ್ಲಿರುವ ಮನೆಯಲ್ಲಿ ವಾಸವಿದ್ದರು.

ಟೆಕ್ಕಿ ಅತುಲ್ ಸುಭಾಷ್ ಸಾವು ಪ್ರಕರಣ: ಅತ್ತೆ, ಸೋದರಮಾವ ಮನೆಯಿಂದ ಪಲಾಯನ

ಜೌನ್ಪುರ(ಉತ್ತರ ಪ್ರದೇಶ), ಡಿ.12– ಬೆಂಗಳೂರಿನಲ್ಲಿ ಆತ್ಮಹತ್ಯೆ ಮಾಡಿಕೊಂಡ ಟೆಕ್ಕಿ ಅತುಲ್ ಸುಭಾಷ್ ಅತ್ತೆ ಮತ್ತು ಸೋದರ ಮಾವ ಗುರುವಾರ ಜೌನ್ಪುರದಲ್ಲಿರುವ ತಮ್ಮ ಮನೆಯಿಂದ ಪಲಾಯನ ಮಾಡಿದ್ದಾರೆ ಎಂದು ಪೊಲೀಸ್ ಮೂಲಗಳು ಹೇಳಿವೆ. ಈ ಪ್ರಕರಣದ ಕುರಿತಾಗಿ ಕರ್ನಾಟಕದ ಪೊಲೀಸರು ತಮಗೆ ಯಾವುದೇ ಅಧಿಕೃತ ಮಾಹಿತಿ ನೀಡಿಲ್ಲ ಎಂದು ಯುಪಿ ಪೊಲೀಸರು ಹೇಳಿದ್ದಾರೆ.



ಅತುಲ್ ಸುಭಾಷ್

ತನ್ನ ವಿಚ್ಛೇದಿತ ಪತ್ನಿ ಮತ್ತು ಅವರ ಕುಟುಂಬದಿಂದ ಕಿರುಕುಳ ನೀಡಲಾಗುತ್ತಿದೆ ಎಂದು ಆರೋಪಿಸಿ 34 ವರ್ಷದ ಟೆಕ್ಕಿ ಸೋಮವಾರ ಬೆಂಗಳೂರಿನಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದರು. ಪತ್ನಿ ನಿಕಿತಾ ಸಿಂಘಾನಿಯಾ, ತಾಯಿ ನಿಶಾ, ತಂದೆ ಅನುರಾಗ್ ಮತ್ತು ಚಿಕ್ಕಪ್ಪ ಸುಶೀಲ್ ವಿರುದ್ಧ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಪ್ರಕರಣ ದಾಖಲಿಸಲಾಗಿದೆ.

ಮುಂಜಾನೆ 1 ಗಂಟೆ ಸುಮಾರಿಗೆ ನಿಶಾ ಸಿಂಘಾನಿಯಾ ಮತ್ತು ಅವರ ಮಗ ಅನುರಾಗ್ ಅಲಿಯಾಸ್ ಪಿಯೂಷ್ ಸಿಂಘಾನಿಯಾ ಇಲ್ಲಿನ ಖೋವಾ ಮಂಡಿ ಪ್ರದೇಶದಲ್ಲಿರುವ ತಮ್ಮ ಮನೆಯಿಂದ ಮೋಟಾರ್ ಸೈಕಲ್‌ನಲ್ಲಿ ಹೊರಟವರು ಮತ್ತೆ ಹಿಂತಿರುಗಿಲ್ಲ ಎಂದು ಪೊಲೀಸ್ ಅಧಿಕಾರಿಯೊಬ್ಬರು ಸುದ್ದಿ ಸಂಸ್ಥೆಗೆ ತಿಳಿಸಿದ್ದಾರೆ.

ಅವರು ಮಧ್ಯರಾತ್ರಿಯ ಸುಮಾರಿಗೆ ಮನೆಯಿಂದ ಹೊರಹೋಗುತ್ತಿರುವುದು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿರುವ ವೀಡಿಯೊ ತುಣುಕುಗಳಲ್ಲಿ ಕಾಣಿಸಿದೆ. ಈ ಪ್ರಕರಣದ ಬಗ್ಗೆ ಬೆಂಗಳೂರು ಪೊಲೀಸರಿಂದ ನಮಗೆ ಇನ್ನೂ ಯಾವುದೇ ಅಧಿಕೃತ ಮಾಹಿತಿ ಬಂದಿಲ್ಲ. ಕಾನೂನು ಮತ್ತು ಸುವ್ಯವಸ್ಥೆ ನಿರ್ವಹಣೆಗೆ ಅಗತ್ಯವಿರುವಷ್ಟು ವಾಡಿಕೆಯ ಮಟ್ಟದ ಪೊಲೀಸ್ ನಿಯೋಜನೆ ಖೋವಾ ಮಂಡಿ ಪ್ರದೇಶದಲ್ಲಿ ಇದೆ ಎಂದು ಜೌನ್ಪುರ ಪೊಲೀಸ್ ವರಿಷ್ಠಾಧಿಕಾರಿ ಅಜಯ್ ಪಾಲ್ ಶರ್ಮಾ ತಿಳಿಸಿದ್ದಾರೆ.

ಏತನ್ಮಧ್ಯೆ, ಕೋತ್ವಾಲಿ ಪೊಲೀಸ್ ಠಾಣೆಯ ಉಸ್ತುವಾರಿ ಇನ್ಸ್‌ಪೆಕ್ಟರ್ ಮಿಥಿಲೇಶ್ ಮಿಶ್ರಾ, ನಿಶಾ ಸಿಂಘಾನಿಯಾ ಮತ್ತು ಇತರರನ್ನು ಬಂಧಿಸಲು ಅಥವಾ ಮನೆಯಿಂದ ಹೊರಹೋಗದಂತೆ ತಡೆಯಲು ಇಲ್ಲವೆ ಅವರನ್ನು ಗೃಹಬಂಧನದಲ್ಲಿಡುವಂತೆ ಪೊಲೀಸರಿಗೆ ಯಾವುದೇ ಆದೇಶಗಳು ಬಂದಿಲ್ಲ ಎಂದು ಹೇಳಿದರು.

ನಿಕಿತಾ ಕುಟುಂಬವು ಜೌನ್ಪುರದಲ್ಲಿ ವಾಸಿಸುತ್ತಿದ್ದರೆ, ಅವರು ತನ್ನ ಮಗನೊಂದಿಗೆ ದೆಹಲಿಯಲ್ಲಿ ವಾಸಿಸುತ್ತಿದ್ದಾರೆ ಮತ್ತು ಅಲ್ಲಿಯೇ ಕೆಲಸ ಮಾಡುತ್ತಿದ್ದಾರೆ ಎಂದು ಅವರ ಸಂಬಂಧಿಕರು ತಿಳಿಸಿದ್ದಾರೆ. ಅವರು 2019ರ ಏಪ್ರಿಲ್‌ನಲ್ಲಿ ಸುಭಾಷ್ ಅವರನ್ನು ವಿವಾಹವಾಗಿದ್ದರು ಮತ್ತು 2022ರಲ್ಲಿ ಪತಿ ಸುಭಾಷ್ ಮತ್ತು ಅತ್ತೆ ಮಾವಂದಿರ ವಿರುದ್ಧ ವರದಕ್ಷಿಣೆ ಕಿರುಕುಳದ ಆರೋಪ ಹೊರಿಸಿ ಎಫ್‌ಐಆರ್ ದಾಖಲಿಸಿದ್ದರು.

ಕಾಂಗ್ರೆಸ್ ಪ್ರಜಾಪ್ರಭುತ್ವವನ್ನು ಅಪಹಾಸ್ಯ ಮಾಡುತ್ತಿದೆ

● ರಾಜ್ಯಸಭೆಯಲ್ಲಿ ಹೆಚ್.ಡಿ.ದೇವೇಗೌಡರ ಆಕ್ರೋಶ ● ಗದ್ದಲ ಎಬ್ಬಿಸಿದ ಕಾಂಗ್ರೆಸ್ ಸಂಸದರ ತರಾಟೆಗೆ ● ಸಭಾಪತಿ ಧನಕರ್ ವಿರುದ್ಧದ ಅವಿಶ್ವಾಸಕ್ಕೆ ಉಗ್ರ ಖಂಡನೆ

ನವದೆಹಲಿ, (ರಾಜ್ಯಸಭೆ), ಡಿ.12– ರಾಜ್ಯಸಭೆ ಸಭಾಪತಿಗಳಾದ ಜಗದೀಪ್ ಧನಕರ್ ಅವರ ವಿರುದ್ಧ ಕಾಂಗ್ರೆಸ್ ಮೈತ್ರಿಕೂಟದ ಸದಸ್ಯರು ಅವಿಶ್ವಾಸ ಗೊತ್ತುವಳಿ ಮಂಡಿಸಲು ನೀಡಿರುವ ನೋಟಿಸ್ ವಿರುದ್ಧ ಹರಿಹಾಯ್ದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಕಾಂಗ್ರೆಸ್ ಪಕ್ಷ ಪ್ರಜಾಪ್ರಭುತ್ವವನ್ನು ಅಪಾಯಕ್ಕೆ ದೂಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯಸಭೆಯಲ್ಲಿ ಮಾತನಾಡುತ್ತಾ, ಕಾಂಗ್ರೆಸ್ ಸದಸ್ಯರ ವರ್ತನೆಯನ್ನು ಉಗ್ರವಾಗಿ ಖಂಡಿಸಿದ ಅವರು, ಸಭಾಪತಿ ಜಗದೀಪ್ ಧನಕರ್ ಅವರ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸುವ ಕಾಂಗ್ರೆಸ್ ಸಂಸದರ ನಡವಳಿಕೆಯನ್ನು ಕಟುವಾಗಿ ಟೀಕಿಸಿದರು. ಸಭಾಪತಿಗಳು ಸದನವನ್ನು ಅತ್ಯುತ್ತಮವಾಗಿ ಮುನ್ನಡೆಸುತ್ತಿದ್ದಾರೆ ಎಂದು ಹೇಳಿ ಇದೇ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರ ಕಾರ್ಯಶೈಲಿಯನ್ನು ಸಮರ್ಥಿಸಿಕೊಂಡರು.



ಸಂಸತ್ತಿನ ಘನತೆಯನ್ನು ಎತ್ತಿಹಿಡಿಯಬೇಕು ಮತ್ತು ಕಲಾಪಕ್ಕೆ ಅಡ್ಡಿಪಡಿಸುವುದನ್ನು ನಿಲ್ಲಿಸಬೇಕು ಎಂದು ಪ್ರತಿಪಕ್ಷಗಳನ್ನು ಮಾಜಿ ಪ್ರಧಾನಿಗಳು ಒತ್ತಾಯಿಸಿದರು.

ರಾಜ್ಯಸಭೆಯ ಸಭಾಪತಿಗಳ ವಿರುದ್ಧ ಇಂತಹ ನಿರ್ಣಯವನ್ನು ಮಂಡಿಸಲು ಹೊರಟಿರುವುದು ಇತಿಹಾಸದಲ್ಲಿ ಇದೇ ಮೊದಲು. ಇದು ಒಳ್ಳೆಯ ಸಂಪ್ರದಾಯ ಅಲ್ಲ. ಇದು ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲೆ ಮಾರಕ ಪರಿಣಾಮಗಳನ್ನು ಉಂಟು ಮಾಡಬಹುದು ಎಂದು ಮಾಜಿ ಪ್ರಧಾನಿಗಳು ಎಚ್ಚರಿಕೆ ನೀಡಿದರು.

ಸದನದ ಕಾರ್ಯವೈಖರಿಯನ್ನು ಹಾಳು ಮಾಡುವ ಉದ್ದೇಶದಿಂದಲೇ ಕಾಂಗ್ರೆಸ್‌ನ ಕೆಲವು ಸದಸ್ಯರು ಕಲಾಪಕ್ಕೆ ಅಡ್ಡಿಪಡಿಸುತ್ತಿದ್ದಾರೆ. ಇಲ್ಲಿರುವ ಕೆಲ ಸದಸ್ಯರು ಈ ಸದನದ ಕಲಾಪ ಸುಗಮವಾಗಿ ನಡೆಯಲು ಅಡ್ಡಿ ಮಾಡುತ್ತಿದ್ದಾರೆ. ಕೇವಲ ರಾಜಕೀಯ ಹಿತಾಸಕ್ತಿಗಾಗಿ ಗದ್ದಲ ಸೃಷ್ಟಿಸುತ್ತಿದ್ದಾರೆ ಎಂದು ದೂರಿದರು.

ಮೊದಲು ಕಾಂಗ್ರೆಸ್ ಸದಸ್ಯರು ಇಂತಹ ಕೆಟ್ಟ ಸಂಪ್ರದಾಯವನ್ನು ಆರಂಭ ಮಾಡಿದ್ದಾರೆ. ಇದು ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ನಾಶಪಡಿಸಲಿದೆ. ನಾವು ಇದನ್ನು ಸಹಿಸುವುದಿಲ್ಲ. ಇದಕ್ಕೆ ಅವಕಾಶವನ್ನು ಕೊಡಬಾರದು ಎಂದು ಅವರು ದೃಢ ಮಾತುಗಳಲ್ಲಿ ಹೇಳಿದರು.

ಇದೇ ವೇಳೆ ಪ್ರತಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರಿಗೆ ನೇರ ಮನವಿ ಮಾಡಿದ ಮಾಜಿ ಪ್ರಧಾನಿಗಳು, ನಿಮ್ಮ ಸದಸ್ಯರು ಸದನದ ಗೌರವ ಹಾಳು ಮಾಡುತ್ತಿದ್ದಾರೆ. ಅವರನ್ನು ತಡೆಯುವ ಜವಾಬ್ದಾರಿ ನಿಮ್ಮದು. ಸಂಸದೀಯ ಸೌಹಾರ್ದತೆಯನ್ನು ಎತ್ತಿಹಿಡಿಯುವುದು ನಿಮ್ಮ ಮತ್ತು ನಿಮ್ಮ ಪಕ್ಷದ ಹೊಣೆಗಾರಿಕೆ ಆಗಿದೆ ಎಂದು ಒತ್ತಾಯಿಸಿದರು. ನಾನು, ನನ್ನ ಸ್ನೇಹಿತ ಖರ್ಗೆ ಅವರಿಗೆ ಹೇಳಲು ಬಯಸುತ್ತೇನೆ. ಅವರು ತಮ್ಮ ಸಹೋದ್ಯೋಗಿಗಳು ಈ ರೀತಿ ವರ್ತಿಸಲು ಬಿಡಬಾರದು. ಸದನ ಕಾರ್ಯ ನಿರ್ವಹಿಸಲು ಅವಕಾಶ ನೀಡುವಂತೆ ಪ್ರಾಮಾಣಿಕವಾಗಿ ವಿನಂತಿಸುತ್ತೇನೆ ಎಂದು ದೇವೇಗೌಡ ಹೇಳಿದರು.

ಪ್ರತಿಪಕ್ಷಗಳ ಸದಸ್ಯರ ನಡವಳಿಕೆ ಪ್ರಧಾನಿ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆ ಎರಡಕ್ಕೂ ಮಾಡಿದ ಅವಮಾನ ಎಂದು ಬಣ್ಣಿಸಿದ ಮಾಜಿ ಪ್ರಧಾನಿಗಳು, ಸದಸ್ಯರು ಪ್ರಧಾನಿಯನ್ನು ಅವಮಾನಿಸುತ್ತಿದ್ದಾರೆ, ಆ ಭರದಲ್ಲಿ ಮಾತ್ರವಲ್ಲದೆ ಪ್ರಜಾಪ್ರಭುತ್ವವನ್ನು ಕೂಡ ಅವಮಾನಿಸುತ್ತಿದ್ದಾರೆ. ಈ ನಡವಳಿಕೆಯನ್ನು ಸಹಿಸಲಾಗುವುದಿಲ್ಲ. ಈ ಬಗ್ಗೆ ನನಗೆ ಬಹಳ ನಿರಾಶೆ ಉಂಟಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು

ತಮ್ಮ ಭಾಷಣದಲ್ಲಿ ಸಭಾಪತಿ ಧನಕರ್ ಅವರ ನಿಷ್ಪಕ್ಷಪಾತತೆಯನ್ನು ಪ್ರಸ್ತಾಪಿಸಿ ಕಲಾಪವನ್ನು ಉತ್ತಮವಾಗಿ ನಡೆಸುವ ಅವರ ಬದ್ಧತೆಯನ್ನು ಶ್ಲಾಘಿಸಿದರು. ನೀವು ನೀವು ನಿಷ್ಪಕ್ಷಪಾತಿ. ಅವರು ಈ ಸದನದಲ್ಲಿ ಈ ರೀತಿ ವರ್ತಿಸಬಾರದು. ಕೆಲವು ಸದಸ್ಯರು ನಿಮ್ಮನ್ನು ಅವಮಾನಿಸಲು ಉದ್ದೇಶ ಹೊಂದಿದ್ದಾರೆ ಎಂದು ಪೀಠವನ್ನು ಉದ್ದೇಶಿಸಿ ಹೇಳಿದರು.

ಕಾಂಗ್ರೆಸ್ ಸಂಸದರಿಗೆ ಮತ್ತೊಮ್ಮೆ ಎಚ್ಚರಿಕೆ ನೀಡಿದ ಅವರು; ಕಲಾಪಕ್ಕೆ ಅಡ್ಡಿಪಡಿಸುವುದನ್ನು ಕೂಡಲೇ ನಿಲ್ಲಿಸುವಂತೆ ಆಗ್ರಹಿಸಿದರು. ಸದನದ ಕಲಾಪ ನಿರಾತಂಕವಾಗಿ ನಡೆಯಬೇಕು. ಕೆಲ ಸದಸ್ಯರು ಇಡೀ ವ್ಯವಸ್ಥೆಯನ್ನೇ ಅಪಹಾಸ್ಯ ಮಾಡುತ್ತಿದ್ದಾರೆ. ಅವರು ಎಷ್ಟು ದಿನ ಇದನ್ನು ಮಾಡುತ್ತಾರೆ? ಎಂದು ಕಿಡಿಕಾರಿದರು.

ಟೈ ಜಾಗತಿಕ ಶೃಂಗಸಭೆ–2024ಕ್ಕೆ ತೆರೆ

●ನಾಲ್ಕು ದಿನಗಳ ಕಾಲ ನಡೆದ ಶೃಂಗಸಭೆಯಲ್ಲಿ ಉದ್ಯಮಶೀಲತೆಯ ಅವಕಾಶಗಳ ಅನ್ವೇಷಣೆ ●ಸಾಧಕ ಉದ್ಯಮಿಗಳಿಗೆ ಪ್ರಶಸ್ತಿ ಪ್ರದಾನದೊಂದಿಗೆ ಸಮಾಪ್ತಿ



'ಟೈ ಜಾಗತಿಕ ಶೃಂಗಸಭೆ–2024' ಸಮಾರೋಪ ಸಮಾರಂಭದಲ್ಲಿ ಸಾಧಕ ಉದ್ಯಮಿಗಳಿಗೆ ವಿವಿಧ ಪ್ರಶಸ್ತಿಗಳನ್ನು ನೀಡಿ ಅಭಿನಂದಿಸಲಾಯಿತು.

ಮೈಸೂರು, ಡಿ.12(ಎಂಕೆ)– ಸಾಂಸ್ಕೃತಿಕ ನಗರಿ ಮೈಸೂರಿನ ಅರಮನೆ ಆವರಣದಲ್ಲಿ ಜಾಗತಿಕ ಉದ್ಯಮಶೀಲತೆಯ ಅವಕಾಶಗಳನ್ನು ಅನ್ವೇಷಿಸುವ ವೇದಿಕೆಯಾದ 'ಟೈ ಜಾಗತಿಕ ಶೃಂಗಸಭೆ–2024 (TiE Global Summit)' ಯಶಸ್ವಿ ತೆರೆಕಂಡಿತು.

ಟೈ ಬೆಂಗಳೂರು, ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್(ಕೆಡಿಇಎಂ), ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ, ಸ್ಟಾರ್ಟ್‌ಅಪ್ ಹಬ್, ಇಂಡಿಯಾ ಎಐ ಮಿಷನ್ ಹಾಗೂ ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ಸ್ ಆಫ್ ಇಂಡಿಯಾ ಸಂಯುಕ್ತಾಶ್ರಯದಲ್ಲಿ ಬೆಂಗಳೂರಿನಿಂದ ಆರಂಭಗೊಂಡ ನಾಲ್ಕು ದಿನಗಳ ಶೃಂಗಸಭೆಯು ಸಾಧಕ ಉದ್ಯಮ ಹಾಗೂ ಉದ್ಯಮಿಗಳಿಗೆ ಪ್ರಶಸ್ತಿ ಪ್ರದಾನದೊಂದಿಗೆ ಯಶಸ್ವಿಯಾಯಿತು.

ಅಸಾಧಾರಣ ಉದ್ಯಮಶೀಲತೆಯ ಸಾಧನೆ, ನಾವೀನ್ಯತೆ, ಸೇವೆ ಮತ್ತು ಸಹಕಾರ ಸೇರಿದಂತೆ ವಿವಿಧ ವಿಭಾಗಗಳಲ್ಲಿ ಸಾಧಕ ಸಂಸ್ಥೆಗಳು ಹಾಗೂ ಸಾಧಕ ಉದ್ಯಮಿಗಳಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಉದ್ಯಮಶೀಲತೆ ಮತ್ತು ನಾವೀನ್ಯತೆಗೆ ಅತ್ಯುತ್ತಮ ಕೊಡುಗೆ ನೀಡಿದ ಜಪಾನ್ ಮೂಲದ ರಾಕುಟೆನ್ ಸಂಸ್ಥೆ ಸಂಸ್ಥಾಪಕ ಮತ್ತು ಸಿಇಒ ಹಿರೋಷಿ ಮಿಕಿತಾನಿ, ಥರ್ಮಾಕ್ಸ್‌ನ ಅನು ಅಘಾ, ಜೂಮ್ ಕಮ್ಯುನಿಕೇಷನ್‌ನ ಸಿಇಒ ಎರಿಕ್ ಯುವಾನ್ ಅವರಿಗೆ 'ಸ್ಪಿರಿಟ್ ಆಫ್ ಟೈ' ಪ್ರಶಸ್ತಿ ನೀಡಲಾಯಿತು.

ಇಕೋ ಸಿಸ್ಟಂ(ಪರಿಸರ ವ್ಯವಸ್ಥೆ) ವಿಭಾಗದಲ್ಲಿ 'ಅನ್ಟಲರ್(ANTLER) ಸಂಸ್ಥೆ'ಗೆ ಅತ್ಯುತ್ತಮ ಗ್ಲೋಬಲ್ ಇನ್ಕ್ಯುಬೇಟರ್/ಆಕ್ಸಿಲರೇಟರ್(Best Global Incubator/Accelerator)ಪ್ರಶಸ್ತಿ ನೀಡಿದರೆ, 'ಹಾರ್ವರ್ಡ್ ವಿಶ್ವವಿದ್ಯಾನಿಲಯ'ಕ್ಕೆ ಉದ್ಯಮಶೀಲತೆ ಉತ್ತೇಜಿಸುವ ಅತ್ಯುತ್ತಮ ಜಾಗತಿಕ ವಿಶ್ವವಿದ್ಯಾನಿಲಯ(Best Global University Promoting Entrepreneurship)ಪ್ರಶಸ್ತಿ ನೀಡಲಾಯಿತು. ಹಾಗೆಯೇ 'ಅಮೆಜಾನ್'ಗೆ ಅತ್ಯುತ್ತಮ ಜಾಗತಿಕ ಕಾರ್ಪೊರೇಟ್ ಬೆಂಬಲಿತ ಉದ್ಯಮಶೀಲತೆ ಪ್ರಶಸ್ತಿ(Best Global Corporate Supporting Entrepreneurship award)ನೀಡಲಾಯಿತು.

'ಏಂಜೆಲ್‌ಲಿಸ್ಟ್' ಸಂಸ್ಥೆಗೆ ಅತ್ಯಂತ ಸಕ್ರಿಯವಾದ ಏಂಜೆಲ್ ನೆಟ್‌ವರ್ಕ್ (The Most Active Angel Network) ಪ್ರಶಸ್ತಿ ದೊರೆಯಿತು. 'ಇಸ್ರೇಲ್ ಇನ್ನೋವೇಶನ್ ಅಥಾರಿಟಿ' ಸಂಸ್ಥೆಯೂ ಜಾಗತಿಕವಾಗಿ ಸ್ಟಾರ್ಟ್‌ಅಪ್‌ಗಳನ್ನು ಬೆಂಬಲಿಸುವ ಅತ್ಯುತ್ತಮ ಸರ್ಕಾರಿ ಏಜೆನ್ಸಿ ಎಂಬ ಹೆಗ್ಗಳಿಕೆ ಪಡೆದರೆ, ಪ್ರಾದೇಶಿಕವಾಗಿ 'ಇನ್ವೆಸ್ಟ್ ಇಂಡಿಯಾ' ಪಡೆಯಿತು. ಹಾಗೆಯೇ 'ಖೋಸ್ಲಾ ವೆಂಚರ್ಸ್' ಸಂಸ್ಥೆಯನ್ನು ಅತ್ಯುತ್ತಮ ಪ್ರದರ್ಶನ ವಿಸಿ ಫಂಡ್ ಎಂದು ಹೆಸರಿಸಲಾಯಿತು.

ಯೂನಿಕಾರ್ನ್ ಅಥವಾ ಸ್ಟಾರ್ಟ್‌ಅಪ್ ವಿಭಾಗದ ಪ್ರಶಸ್ತಿಗಳಲ್ಲಿ ಮೋಸ್ಟ್ ಇನ್ನೋವೇಟಿವ್ ಸ್ಟಾರ್ಟ್‌ಅಪ್ ಪ್ರಶಸ್ತಿಯನ್ನು 'ರೆವೊಲಟ್(Revolut)' ಸಂಸ್ಥೆ ಪಡೆದರೆ, ಸಸ್ಟೈನಬಿಲಿಟಿ ಎಕ್ಸಲೆನ್ಸ್ ಪ್ರಶಸ್ತಿಯನ್ನು ಟಿಬಿಎಂ ಕೋ.ಲಿಮಿಟೆಡ್(TBM Co.Ltd)ಪಡೆಯಿತು. 'ಗ್ರಾಮರ್ಲಿ' ಕಂಪನಿ ಜಾಗತಿಕ ಬೂಟ್‌ಸ್ಟ್ರಾಪ್ಡ್ ಸ್ಟಾರ್ಟ್‌ಅಪ್ ಟು ಎ ಮಲ್ಟಿ ಬಿಲಿಯನ್ ಡಾಲರ್ ಎಂಟರ್‌ಪ್ರೈಸಸ್ ಪ್ರಶಸ್ತಿ ಪಡೆದರೆ, ಪ್ರಾದೇಶಿಕ ಬೂಟ್‌ಸ್ಟ್ರಾಪ್ಡ್ ಸ್ಟಾರ್ಟ್‌ಅಪ್ ಟು ಬಿಲಿಯನ್ ಸಕ್ಸಸ್ ಪ್ರಶಸ್ತಿಯನ್ನು 'ಕೇನ್ಸ್ ಟೆಕ್ನಾಲಜಿ ಮತ್ತು ಮ್ಯಾನ್‌ಕೈಂಡ್ ಫಾರ್ಮಾ' ಪಡೆದುಕೊಂಡಿತು. ಜಾಗತಿಕವಾಗಿ ಟ್ರಯಲ್ ಬ್ಲೇಜಿಂಗ್ ಮಹಿಳಾ ಉದ್ಯಮಿ ಪ್ರಶಸ್ತಿಯನ್ನು ಮೊಬಿಕ್ವಿಕ್ ಕಂಪನಿಯ ಮೆಲಾನಿ ಪರ್ಕಿನ್ಸ್ ಪಡೆದರೆ, ಪ್ರಾದೇಶಿಕವಾಗಿ ಉಪಾಸನಾ ಟಕು ಪಡೆದರು. ಅಸಾಧಾರಣ ಪರಿಶ್ರಮ ಮತ್ತು ಸಾಧನೆಗಾಗಿ ನೀಡುವ ಅನ್‌ಸ್ಟಾಪಬಲ್ ಪ್ರಶಸ್ತಿಯನ್ನು ಶ್ರೀಕಾಂತ್ ಬೊಳ್ಳಾ ಪಡೆದುಕೊಂಡರು. ಟೈ ಗ್ಲೋಬಲ್ ಮುಖ್ಯಸ್ಥ ಅಮಿತ್ ಗುಪ್ತಾ, ಟೈ ಬೆಂಗಳೂರು ಅಧ್ಯಕ್ಷ ಮದನ್ ಪದಕಿ, ಕೆಡಿಇಎಂ ಅಧ್ಯಕ್ಷ ಬಿ.ವಿ.ನಾಯ್ಡು, ಟೈ ಮೈಸೂರು ಅಧ್ಯಕ್ಷ ಡಾ.ಮಹೇಶ್ ರಾವ್, ಕೆಡಿಎಂ ಸಿಇಒ ಸಂಜೀವ್ ಗುಪ್ತಾ, ಉದ್ಯಮಿ ಪವನ್ ರಂಗ ಪ್ರಶಸ್ತಿ ಪ್ರದಾನ ಮಾಡಿದರು.

ಬಳಿಕ ಮುಂದಿನ ವರ್ಷ ಜೈಪುರದಲ್ಲಿ ನಡೆಯುವ ಟೈ ಜಾಗತಿಕ ಶೃಂಗಸಭೆ–2025 ಲಾಂಛನ ನೀಡುವ ಮೂಲಕ ಹಸ್ತಾಂತರಿ ಸಲಾಯಿತು. ನಂತರ ಅನನ್ಯ ಭಟ್ ಮತ್ತು ತಂಡದಿಂದ ಸಾಂಸ್ಕೃತಿಕ ಕಾರ್ಯ ಕ್ರಮಗಳು ನಡೆದವು.

ಸಂತೋಷದ ಜಗತ್ತನ್ನು ಸೃಷ್ಟಿಸಿ...

ಉದ್ಯಮಿಗಳು ಸಂತೋಷ ಸೃಷ್ಟಿಸುವ ಮೂಲಕ ಯಶಸ್ಸು ಸಾಧಿಸಿ ಎಂದು ಚೋಪ್ರಾ ಫೌಂಡೇಷನ್ ಸಂಸ್ಥಾಪಕ ಡಾ.ದೀಪಕ್ ಚೋಪ್ರಾ ಸಲಹೆ ನೀಡಿದರು. ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಅವರು, ಉದ್ಯಮಿಗಳ ಬಳಿ ಬುದ್ಧಿವಂತಿಕೆ, ತಂತ್ರಜ್ಞಾನ, ಅತ್ಯುತ್ತಮ ತಂಡವೂ ಇದೆ. ಸಂತೋಷ ಮಾತ್ರವೇ ನಿಮ್ಮ ಸಾಧನೆಯನ್ನು ಗುರುತಿಸುವ ಸಾಧನ. ಹಾಗಾಗಿ ಸಂತೋಷ ಸೃಷ್ಟಿಸುತ್ತಾ ಯಶಸ್ಸು ಸಾಧಿಸಿ ಎಂದು ಕಿವಿಮಾತು ಹೇಳಿದರು. ಅವರೊಂದಿಗೆ ಪ್ರೊಸೆಟ್ಟಾ ಬಯೋ ಇನ್ಫರ್ಮ್ಯಾಟಿಕ್ಸ್ ಪ್ರೈ ಲಿಮಿಟೆಡ್‌ನ ಸಂಸ್ಥಾಪಕ ಡಾ.ಧರ್ಮ ಪ್ರಸಾದ್, ಮೈಸೂರು ಸಾಂಸ್ಕೃತಿಕ ನಗರ ಮಾತ್ರವಲ್ಲ, ನವೋದ್ಯಮಿಗಳ ನೆಚ್ಚಿನ ತಾಣವೂ ಆಗಿದೆ ಎಂದು ಮೈಸೂರಿನ ಹಿರಿಮೆ–ಗರಿಮೆಯನ್ನು ತಿಳಿಸಿಕೊಟ್ಟರು.

ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ
ಮೆಗಾ ಡೈರಿ ಸಂಕೀರ್ಣ, ಬನ್ನೂರು ರಸ್ತೆ, ಆಲನಹಳ್ಳಿ ಅಂಚೆ, ಮೈಸೂರು – 570028.
ದೂರವಾಣಿ ಸಂಖ್ಯೆ:0821–2473923/ 2473933 ಫ್ಯಾಕ್ಸ್ ನಂ.0821–2473933,
ಇ–ಮೇಲ್ : mymulengg@gmail.com
ಐ.ಎಫ್.ಟಿ ಸಂಖ್ಯೆ: 13–11A/ಸಿವಿಲ್/2024 ದಿನಾಂಕ: 12.12.2024

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಆಲನಹಳ್ಳಿ ಸಂಕೀರ್ಣದ ಕಹಾಮ ತರಬೇತಿ ಕೇಂದ್ರದಿಂದ ನಾಲೆವರೆಗೆ ಒಳ ಚರಂಡಿ ನಿರ್ಮಿಸುವ ಕೆಲಸದ ಸಂಬಂಧ **e-procurement** ಮೂಲಕ ತಾಂತ್ರಿಕ ಭಾಗ–1 ಮತ್ತು ವಾಣಿಜ್ಯ ಭಾಗ–2 ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ನಿರ್ಧಿಷ್ಟ ಅರ್ಹತೆ ಹಾಗೂ ಅನುಭವವನ್ನು ಹೊಂದಿರಬೇಕು ಹಾಗೂ ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ **www.kppp.karnataka.gov.in** ಮೂಲಕ ಅಪ್‌ಲೋಡ್ ಮಾಡಬಹುದಾಗಿರುತ್ತದೆ.

ಕ್ರ ಸಂ	ಟೆಂಡರ್ ಪ್ರಕಟಣೆ ಮತ್ತು ದಿನಾಂಕ	ಕಾಮಗಾರಿಯ ವಿವರ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ
1	ಐ.ಎಫ್.ಟಿ ಸಂಖ್ಯೆ: 13–11A/ಸಿವಿಲ್/2024 ದಿನಾಂಕ: 12.12.2024	ಆಲನಹಳ್ಳಿ ಸಂಕೀರ್ಣದ ಕಹಾಮ ತರಬೇತಿ ಕೇಂದ್ರದಿಂದ ನಾಲೆವರೆಗೆ ಒಳ ಚರಂಡಿ ನಿರ್ಮಿಸುವ ಕೆಲಸ.	ದಿನಾಂಕ: 27.12.2024 ಸಂಜೆ 5.00 ಗಂಟೆಯೊಳಗೆ

ಹೆಚ್ಚಿನ ಮಾಹಿತಿಗಾಗಿ ಸಹಾಯಕ ವ್ಯವಸ್ಥಾಪಕರು(ಇಂಜಿ) (6366430812) ಸಂಪರ್ಕಿಸಬಹುದಾಗಿದೆ.
ಸಹಿ/–, ವ್ಯವಸ್ಥಾಪಕ ನಿರ್ದೇಶಕರು
ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ನಿ.,

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ವಿಳಾಸ: ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾಸಂ), ನಿಗಮ ಕಾರ್ಯಾಲಯ,
ನಂ. 29, ವಿಜಯನಗರ 2ನೇ ಹಂತ, ಹಿನಕಲ್, ಮೈಸೂರು–570017
E-Mail ID: gmhrd@cescmysore.org ದೂರವಾಣಿ ಸಂಖ್ಯೆ: 9449598585
ಸಂಖ್ಯೆ: ಸೆಸ್ಕ್/ಆ ಮತ್ತು ಮಾಸಂ/ಕಂ.ಕಾ/01/27/E-140136/2024-CS/21588 ದಿನಾಂಕ: 10.12.2024

ಪತ್ರಿಕಾ ಪ್ರಕಟಣೆ

ಗೌರವಾನ್ವಿತ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, (ಕ.ವಿ.ನಿ.ಆ.) ಬೆಂಗಳೂರು ರವರ ಆದೇಶದಂತೆ, ಚಾವಿಸನಿನಿಯ ನಿಗಮ ಕಛೇರಿ ಹಂತದ ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಗೆ ಕ.ವಿ.ನಿ.ಆ.ವು ನಾಮನಿರ್ದೇಶಿತ ಸದಸ್ಯರನ್ನು ನೇಮಿಸುವ ಸಂಬಂಧ ಇಂಧನ ಕ್ಷೇತ್ರ/ಗ್ರಾಹಕ ವ್ಯವಹಾರಗಳಲ್ಲಿ ಸೂಕ್ತ ಅನುಭವ ಅಥವಾ ಜ್ಞಾನವುಳ್ಳ ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದ್ದು, ಆಸಕ್ತರು ದಿನಾಂಕ: 24.12.2024ರ ಒಳಗೆ ತಮ್ಮ ಹೆಸರು, ಪೂರ್ಣವಿಳಾಸ, ಭಾವಚಿತ್ರ, ವಿದ್ಯಾರ್ಹತೆ, ಅನುಭವ ಇತ್ಯಾದಿಗಳಿರುವ ಸಂಪೂರ್ಣ ವಿವರಗಳ್ಳುಳ ಅರ್ಜಿಯನ್ನು **"ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾಸಂ), ನಿಗಮ ಕಾರ್ಯಾಲಯ, ಚಾವಿಸನಿನಿ, ನಂ. 29, ವಿಜಯನಗರ 2ನೇ ಹಂತ, ಹಿನಕಲ್, ಮೈಸೂರು–570017"** ಇಲ್ಲಿಗೆ ಸಲ್ಲಿಸಲು ತಿಳಿಸಿದೆ. ಸದರಿ ನೇಮಕಾತಿಯು ಕೆಇಆರ್‌ಸಿ ರವರ ನಿಯಮಾವಳಿಗಳಿಗೆ ಒಳಪಟ್ಟಿರುತ್ತದೆ.

ಗೌರವಾನ್ವಿತ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, (ಕ.ವಿ.ನಿ.ಆ.) ಬೆಂಗಳೂರು ರವರ ಆದೇಶದಂತೆ, ಚಾವಿಸನಿನಿಯ ನಿಗಮ ಕಛೇರಿ ಹಂತದ ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಗೆ ನಿಗಮವು **"ಪ್ರೊಸ್ಯೂಮರ್(PROSUMER) ಪ್ರತಿನಿಧಿ"**ಯನ್ನು ನೇಮಿಸುವ ಸಂಬಂಧ ಚಾವಿಸನಿನಿ ವ್ಯಾಪ್ತಿಯಲ್ಲಿ **"ವಿದ್ಯುತ್ ಉತ್ಪಾದನೆ ಹಾಗೂ ಬಳಕೆ"** ಎರಡನ್ನೂ ಮಾಡುತ್ತಿರುವ ಆಸಕ್ತ ಪ್ರೊಸ್ಯೂಮರ್‌ಗಳಿಂದ ಅರ್ಜಿಗಳನ್ನು ಆಹ್ವಾನಿಸಿದ್ದು, ಆಸಕ್ತರು ದಿನಾಂಕ: 24.12.2024ರ ಒಳಗೆ ತಮ್ಮ ಹೆಸರು, ಪೂರ್ಣವಿಳಾಸ, ಭಾವಚಿತ್ರ, ವಿದ್ಯಾರ್ಹತೆ, ನಿಗಮದ ವ್ಯಾಪ್ತಿಯಲ್ಲಿ ವಿದ್ಯುತ್ ಉತ್ಪಾದನೆ ಹಾಗೂ ಬಳಕೆ ಮಾಡುತ್ತಿರುವ ಸಂಪೂರ್ಣ ವಿವರಗಳ್ಳುಳ ಅರ್ಜಿಯನ್ನು **"ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾಸಂ), ನಿಗಮ ಕಾರ್ಯಾಲಯ, ಚಾವಿಸನಿನಿ, ನಂ. 29, ವಿಜಯನಗರ 2ನೇ ಹಂತ, ಹಿನಕಲ್, ಮೈಸೂರು–570017"** ಇಲ್ಲಿಗೆ ಸಲ್ಲಿಸಲು ತಿಳಿಸಿದೆ. ಸದರಿ ನೇಮಕಾತಿಯು ಕೆಇಆರ್‌ಸಿ ರವರ ನಿಯಮಾವಳಿಗಳಿಗೆ ಒಳಪಟ್ಟಿರುತ್ತದೆ.

ಸಹಿ/– ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾಸಂ), ಚಾವಿಸನಿನಿ, ಮೈಸೂರು

DIPR/DDMYS-949/KSMCA-636/2024-25